ಜನಪದ ವಿಚಾರ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೧ ಸೆಪ್ಟಂಬರ್-೨೦೧೦ ಸಂಚಿಕೆ-೨



ನಲಗುತ್ತಿರುವ ಕಾಶ್ಮೀರ, ಅದಕ್ಕೇನು ಪರಿಹಾರ?

ಜನಪದ ವಿಚಾರದಲ್ಲಿ

ಸೆಪ್ಟಂಬರ್-೨೦೧೦

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಸೆಪ್ಟಂಬರ್ - ೨೦೧೦

ಸಂಪುಟ - ೧೧

ಸಂಚಿಕೆ - ೨

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

ಚಂದಾ ವಿವರ

ವಾರ್ಷಿಕ : ರೂ ೧೦೦/-

ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್(ರಿ)

ಮೇಲುಕೋಟೆ-೫೭೧೪೩೧

ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com

web: janapada.net

ಬೆವರಿನ ಬೆಲೆ

ಬಡವ ತಾ ಬೆವರಿದರೆ ಒಸರುವುದು ಸೌಗಂಧ
ಧನಿಕ ತಾ ಬೆವರಿದರೆ ಹರಡುವುದು ದುರ್ಗಂಧ!
ಯಾಕೆ ಗೊತ್ತೇ?

ಬಡವನಾ ಬೆವರಲ್ಲಿ ಜೀವದಾ ಸೆಲೆಯಿಹುದು
ಧನಿಕನಾ ಬೆವರಲ್ಲಿ ಮೋಹದಾ ಕೊಳೆಯಿಹುದು!
ಬಡವನಾ ಬೆವರಲ್ಲಿ ಸುಖ ಶಾಂತಿ ಅರಳುವುದು
ಧನಿಕನಾ ಬೆವರಲ್ಲಿ ಮಾನವತೆ ನರಳುವುದು!
ಯಾಕೆ ಗೊತ್ತೇ?

ಬಡವನ ಬೆವರಲ್ಲಿ ದುಡಿಮೆಯಾ ಸಾರ್ಥಕತೆ
ಧನಿಕನಾ ಬೆವರಲ್ಲಿ ಭೋಗದಾ ಸ್ವಾರ್ಥ-ಕತೆ!
ಬಡವನಾ ಬೆವರ ಹನಿ ಕೋಟಿ ಬೆಲೆ ಬಾಳುವುದು
ಧನಿಕನಾ ಬೆವರ ಹನಿ ಕವಡೆಗೂ ಕೀಳಹುದು!
ಬಡವನಾ ಬೆವರ ಹನಿ ಹೊಳೆವ ಮುತ್ತಿನ ಮಣಿಯು
ಧನಿಕನಾ ಬೆವರ ಹನಿ ಕೊಳೆಯು ಮೆತ್ತಿದ ಬನಿಯು!
ಬಡವ ತಾ ಬೆವರಿಳಿಸಿ ಜಗಕೆ ಅನ್ನವ ಕೊಡುವ
ಧನಿಕ ತಿನ್ನುತ ತೇಗಿ ಉಳಿಕೆ ಬೀದಿಗೆ ಎಸೆವ!
ಯಾಕೆ ಗೊತ್ತೇ?

ಬಡವ ಉಣುವನ್ನವನೆ ದೇವರೆಂದೆನುವ
ಧನಿಕ ತಾನೇ ದೇವರೆನುತ ಭ್ರಮೆ ಪಡುವ!
ಬಡವ ಹಸಿದವನನ್ನು ಕರೆದು ಹಂಚುತ ಉಣುವ
ಧನಿಕ ತಾ ಮೊದಲುಂಡು ಉಳಿದವರ ಮರೆವ!
ಯಾಕೆ ಗೊತ್ತೇ?

ಬಡವ ಹಸಿದವನಲ್ಲಿ ಹರಿಯ ಕಾಣುತಲಿರುವ
ಧನಿಕ ದೇವರ ಹುಡುಕಿ ತಿರುಪತಿಗೆ ನಡೆವ!
ಬಡವ ತಾಬೆವರಿಳಿಸಿಕಡೆದು ಕಟ್ಟಿದ ಸೌಧ
ಕೊಡೆಯತಾನೆನ್ನುತಲಿ ಧನಿಕ ದರ್ಪದಿ ಮೆರೆವ!
ಯಾಕೆ ಗೊತ್ತೇ?

ಒಡವೆ ಸಿರಿ ಸೊತ್ತುಗಳು ಕಡೆಗಾಲದೊಳು ತನ್ನ
ಒಡನೆ ಬಾರವು ಎಂಬ ನಿಜ ತಿಳಿಯನಣ್ಣ

-ಜಯರಾಮ ರೈ ಕುಂಜಾಡಿ

ವಿಚಾರ ದೀಪ್ತಿ

ಯಾವೊಂದು ಕ್ಷೇತ್ರದಲ್ಲಿ ಕೆಲಸ ಮಾಡಲೂ ಯೋಗ್ಯತೆಯಿಲ್ಲದ ವ್ಯಕ್ತಿಗಳಿಂದ ಕೆಲಸ ಮಾಡಿಸುವ ಸ್ಥಿತಿಯನ್ನು ಸಮಾಜ ನಿರ್ಮಿಸಿಕೊಂಡಿದೆ. ಹೀಗಾಗಿ ಹಣ ಕೊಟ್ಟು ನಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿದರೆ ಅಲ್ಲಿ ಹಣಬಲದ ಮೇಲೆ, ಕೆಲಸ ತೆಗೆದುಕೊಂಡ ಮೂರ್ಖನೊಬ್ಬ ನಮ್ಮ ಮಕ್ಕಳಿಗೆ ಪಾಠ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಶ್ರೇಷ್ಠತೆಯ ಹಂಗಿಲ್ಲದ, ಕಸುಬುದಾರಿಕೆಗೆ ಬೆಲೆ ಕೊಡದ ಸಮಾಜ, ಯಾವತ್ತೂ ಉಳಿದು, ಬೆಳೆಸಲಾರದು. ಹಣವೊಂದನ್ನು ಮಾತ್ರ ಯಾವ ರೀತಿಯಿಂದಲಾದರೂ ಗಳಿಸುವ ಮತ್ತು ಅಂತಹ ಗಳಿಕೆಗೆ ಒಳದಾರಿಗಳನ್ನು ಹುಡುಕುವ ಮನಃಸ್ಥಿತಿಗೆ ನಮ್ಮ ಇಂದಿನ ಭ್ರಷ್ಟತೆ ಕಾರಣ ಎನ್ನುವುದನ್ನು ನಾವು ಮೊದಲಿಗೆ ಒಪ್ಪಿಕೊಳ್ಳಲೇಬೇಕು. ನಾವು ಹಲವು ವೈರುಧ್ಯ ಮತ್ತು ಸಂಕಟಗಳ ದಿನಗಳಲ್ಲಿದ್ದೇವೆ. ನಮ್ಮ ರಾಜಕಾರಣಿಗಳ ಮೇಲಾಗಲೀ ರಾಜಕೀಯ ವರ್ಗಕ್ಕಿಂತ ನೀಚರಾದ, ಅಧಿಕಾರಿ ವರ್ಗಗಳಿಂದಾಗಲೀ ಯಾವ ನಂಬುಗೆಯನ್ನೂ ಇಡದ ಸ್ಥಿತಿಯಲ್ಲಿ ನಾವಿದ್ದೇವೆ. ನಮ್ಮ ಕುರಿತು ಹೇಳುವುದಾದರೆ ಕರ್ನಾಟಕ ಇಂದು ದೇಶದ ಅತಿ ಭ್ರಷ್ಟ ರಾಜ್ಯಗಳಲ್ಲೊಂದಾಗಿದೆ. ಇಂತಹ ಸ್ಥಿತಿ ಸಂತೋಷ ಹೆಗಡೆಯವರನ್ನು ತಿರುಗಿ ಲೋಕಾಯುಕ್ತದಲ್ಲಿ ಮುಂದುವರೆಯಲು ಆಗ್ರಹಿಸುವುದರ ಮುಖಾಂತರ ಬದಲಾಗುವುದಿಲ್ಲ. ರಾಜ್ಯದ ಮುಖ್ಯ ಮಂತ್ರಿಗಳ ರಾಜೀನಾಮೆ ಕೇಳುವುದರ ಮುಖಾಂತರವೂ ಬದಲಾಗುವುದಿಲ್ಲ. ಏಕೆಂದರೆ ಭ್ರಷ್ಟತೆಯ ಮನಸ್ಸು ನಮ್ಮೊಳಗೇ ಇದೆ. ಇಂದು ಬದಲಾವಣೆಯ ಗಾಳಿ ಬೀಸಬೇಕಾದರೆ, ನಮಗೆ ಗಾಂಧೀಜಿ ಮತ್ತು ರೊನಾಲ್ಡ್ ಕೋಸ್ ಇಬ್ಬರೂ ಪ್ರಸ್ತುತರಾಗುತ್ತಾರೆ. ಭ್ರಷ್ಟತೆಯನ್ನು ಶಿಕ್ಷಿಸುವಲ್ಲಿ ನಮ್ಮ ನ್ಯಾಯಾಂಗದ ಕೈಗಳನ್ನು ಬಲಪಡಿಸುವ ಅಗತ್ಯವಿದೆ. ಸರಕಾರದ ಅಂಗ ಸಂಸ್ಥೆಗಳ ಆಡಳಿತ ನಡೆಸುವ ಅಧಿಕಾರಿ ವರ್ಗದ ಆಡಳಿತ ಕ್ರಮದಲ್ಲಿ ಸಮಗ್ರ ಬದಲಾವಣೆಯನ್ನು ತರಬೇಕಾದ ಅವಶ್ಯಕತೆಯಿದೆ. ಆ ವರ್ಗಕ್ಕೆ ಬದಲಾದ ಆರ್ಥಿಕ ಸಂದರ್ಭದಲ್ಲಿ ಒಂದು ಒಳ್ಳೆಯ ಜೀವನ ನಡೆಸಲು ಬೇಕಾದ ಸಂಬಳ ಕೊಡುವ ಅಗತ್ಯ ಎಷ್ಟಿದೆಯೋ ಅಷ್ಟೇ ಅಗತ್ಯ ಅಧಿಕಾರದ ದುರುಪಯೋಗವನ್ನು, ಅಸಮರ್ಥತೆಯನ್ನು ಶಿಕ್ಷಿಸುವಲ್ಲಿಯೂ ತೋರಬೇಕಾಗುತ್ತದೆ.

–ಡಾ. ಅಶೋಕ ಹೆಗಡೆ

* * *

ನಲಗುತ್ತಿರುವ ಕಾಶ್ಮೀರ ಅದಕ್ಕೇನು ಪರಿಹಾರ?

- ಸುರೇಂದ್ರ ಕೌಲಗಿ

ಭಾರತ ತನ್ನ ಅರವತ್ತಮೂರನೆಯ ಸ್ವಾತಂತ್ರ್ಯೋತ್ಸವದ ಸಂಭ್ರಮದಲ್ಲಿದೆ. ಆದರೆ ಭಾರತದ ಅವಿಭಾಜ್ಯ ರಾಜ್ಯವೆಂದೇ ಪರಿಗಣಿಸಲಾಗಿರುವ ಜಮ್ಮು-ಕಾಶ್ಮೀರದಲ್ಲಿ ರಕ್ತಪಾತವಾಗುತ್ತಿದೆ. ಅಲ್ಲಿಯ ಜನರು ಸ್ವತಂತ್ರ ಭಾರತದ ಸೈನಿಕರ ಗುಂಡಿಗೆ ಬಲಿಯಾಗುತ್ತಿದ್ದಾರೆ. ಅಲ್ಲಿಯ ಯುವಕರು ಸೈನಿಕರತ್ತ ಕಲ್ಲುಗಳ ಸುರಿಮಳೆ ಮಾಡುತ್ತಿದ್ದಾರೆ. ಹತ್ತು ಹದಿನೈದು ದಿನ ಕರ್ಫ್ಯೂವಿನ ಉಸಿರುಗಟ್ಟುವ ವಾತಾವರಣದಲ್ಲಿದ್ದಾರೆ. ಭಾರತದ ಒಂದು ರಾಜ್ಯವಾದ ಕಾಶ್ಮೀರದಲ್ಲಿ ದೂರಗಾಮಿ ಪರಿಣಾಮದ ರಾಜಕೀಯ ಬೆಳವಣಿಗೆಗಳಾಗುತ್ತಿರುವಾಗ, ಅಲ್ಲಿಯ ಜನತೆ ಪ್ರವಾಹದ ಹಾವಳಿಗೆ ತುತ್ತಾಗುತ್ತಿರುವಾಗ ಭಾರತದ ಇನ್ನುಳಿದ ರಾಜ್ಯಗಳಲ್ಲಿಯ ಜನರು ಕಣ್ಣುಮುಚ್ಚಿ ಕುಳಿತಿದ್ದಾರೆ, ಸಂವೇದನಾರಹಿತರಾಗಿದ್ದಾರೆ, ದೇಶದ ಐಕ್ಯತೆಗೂ, ಭದ್ರತೆ-ಗೂ ಧಕ್ಕೆ ಒದಗುವ ಸಂಭವವಿದ್ದರೂ ಕೈಕಟ್ಟಿ ಕುಳಿತಂತಿದ್ದಾರೆ. ಪಾಕಿಸ್ತಾನ ಮತ್ತು ಹಿಂದುಸ್ತಾನಗಳ ರಾಜಕೀಯ ಮೇಲಾಟದಲ್ಲಿ ಸಿಕ್ಕಿಹಾಕಿಕೊಂಡ ಕಾಶ್ಮೀರ ನಲುಗುತ್ತಿದೆ. ಕಾಶ್ಮೀರ ರಾಜ್ಯದ ಉದಯವೇ ಅತಿ ಘೋರ ಪ್ರಸವವೇದನೆಯಿಂದಾಯಿತು. ಅದು ಅಸ್ತಿತ್ವಕ್ಕೆ ಬಂದು ಅರವತ್ತನಾಲ್ಕು ವರ್ಷಗಳು ಸಂದರೂ ಆ ರಾಜ್ಯದ ಬವಣೆ ತಪ್ಪುವ ಲಕ್ಷಣಗಳು ಗೋಚರಿಸುತ್ತಿಲ್ಲ. ಬದಲಿಗೆ ಅದು ಹೆಚ್ಚುತ್ತಾ ಹೋಗುತ್ತಿದೆ. ೧೯೪೭ರಲ್ಲಿ ಕಾಶ್ಮೀರದ ವಿವಾದದಲ್ಲಿ ಭಾರತ ಮತ್ತು ಪಾಕಿಸ್ತಾನಗಳೆರಡೇ ಇದ್ದವು ಈಗ ಆ ವಿವಾದದಲ್ಲಿ ಪರೋಕ್ಷವಾಗಿ ಅಮೇರಿಕಾ, ಚೀನಾ ಮತ್ತು ಸಂಯುಕ್ತ ರಾಷ್ಟ್ರ ಸಂಘವೂ ಸೇರಿಕೊಂಡಿವೆ. ಇದರಿಂದಾಗಿ ಕಾಶ್ಮೀರ ಸಮಸ್ಯೆ ತುಂಬ ಜಟಿಲವೂ, ಸಂಕೀರ್ಣವೂ ಆಗಿದೆ. ಜೊತೆಗೆ ಅದು ಅಂತಾರಾಷ್ಟ್ರೀಯ ಸಮಸ್ಯೆಯಾಗಿಯೂ ಉಲ್ಬಣಗೊಂಡಿದೆ. ಕಾಶ್ಮೀರ ಸಮಸ್ಯೆ ಬಗೆಹರಿಯಬಾರದೆಂಬುದೂ ಕೆಲ ರಾಷ್ಟ್ರಗಳ ದುರಾಲೋಚನೆಯಾಗಿದೆ. ಇವೆಲ್ಲ ಕಾರಣಗಳಿಂದ ಕಾಶ್ಮೀರ ಕಾಲಕ್ರಮೇಣ ಕ್ಲಿಷ್ಟವೂ, ದೊಡ್ಡದೂ ಆದ ಸಮಸ್ಯೆಯಾಗುತ್ತಾ ಹೋಗುತ್ತಿದೆ. ಸ್ವಾತಂತ್ರ್ಯ ಬರುವ ಮೊದಲು ಕಾಶ್ಮೀರ ಭೂಮಿಯ ಮೇಲಿನ ಸ್ವರ್ಗವಾಗಿತ್ತು. ಅಲ್ಲಿ ಮುಸ್ಲಿಮರೂ, ಹಿಂದುಗಳೂ ಸಹೋದರಭಾವದಿಂದ ಸಹಜೀವನ ನಡೆಸುತ್ತಿದ್ದರು. ಅಲ್ಲಿಯ ಜನತೆ ತಮ್ಮದೇ ಆದ ರಾಜಕೀಯ ಮತ್ತು ಆಡಳಿತಾತ್ಮಕ ವ್ಯವಸ್ಥೆಯನ್ನು ಹೊಂದಿದ್ದರು. ಯಾವಾಗ ೧೯೪೭ರಲ್ಲಿ ಭಾರತ, ಪಾಕಿಸ್ತಾನ ಮತ್ತು ಹಿಂದುಸ್ತಾನ ಎಂದು ವಿಭಜನೆಗೊಂಡಿತೋ ಆವಾಗಿನಿಂದ ಕಾಶ್ಮೀರ ಸಮಸ್ಯೆ ಹುಟ್ಟಿಕೊಂಡಿತು. ವಿಭಜನೆಯ ಪರಿಣಾಮ ಕಾಶ್ಮೀರದ ಮೇಲೆ ಆಗದೇ ಇರಲಿಲ್ಲ. ದೇಶ ವಿಭಜನೆ ಧರ್ಮಾಧಾರಿತ ಅಥವಾ ಕೋಮಿನ ಆಧಾರಿತವಾದದ್ದರಿಂದ ಕಾಶ್ಮೀರ ಸಹ ಅದೇ ಆಧಾರದ ಮೇಲೆ ವಿಭಜನೆಗೊಂಡಿತು.

ದೇಶದ ಉಳಿದ ಭಾಗದ ವಿಭಜನೆ ಮಾತುಕತೆ ಮತ್ತು ಸಂಧಾನ ಇತ್ಯಾದಿಗಳ ಮೂಲಕವಾದರೆ ಕಾಶ್ಮೀರದ ವಿಭಜನೆ ಆಂತರಿಕ ಯುದ್ಧದ ಮೂಲಕವಾಯಿತು. ಈ ಯುದ್ಧಕ್ಕೆ ಕೋಮು ಭಾವನೆ ಪ್ರಚೋದಕವಾಯಿತು. ನಂತರ ಕಾಶ್ಮೀರ ವಿಭಜನೆಗೊಳಗಾದ ಎರಡು ದೇಶಗಳ ರಾಜಕಾರಣದ ದಾಳವಾಯಿತು. ಈ ರೀತಿಯಾಗಿ ಕೋಮು ಭಾವನೆ ಮತ್ತು ರಾಜಕಾರಣ ಎರಡೂ ಸೇರಿ ಕಾಶ್ಮೀರ ರಾಜ್ಯವನ್ನು ಕಳೆದ ಆರು ದಶಕಗಳಿಂದ ಗಾಣದಲ್ಲಿ ಅರೆಯಲ್ಪಡುವ ಕಬ್ಬಿನಂತೆ ಮಾಡಲಾಗಿದೆ. ಹಾಗೆ ಅರೆಯಲ್ಪಡುವ ನಿಜವಾದ ಕಬ್ಬು ಸಿಹಿ ರಸವನ್ನೇ ಕೊಡುತ್ತಾ ಹೋದರೆ ಇಲ್ಲಿ ಕಾಶ್ಮೀರದಲ್ಲಿ ಜನತೆಯ ರಕ್ತ ಹರಿಯುತ್ತಿದೆ. ಒಂದು ಅಂದಾಜಿನ ಪ್ರಕಾರ ಇದುವರೆಗೆ ಕಾಶ್ಮೀರದ ಕಾಳಗದಲ್ಲಿ ಸತ್ತವರ ಸಂಖ್ಯೆ ಒಂದು ಮಹಾ ಯುದ್ಧದಲ್ಲಿ ಸತ್ತವರ ಸಂಖ್ಯೆಗೆ ಸಮವಾಗಿದೆ. ಅಲ್ಲದೆ ಭಾರತ ಸರ್ಕಾರ ಅಲ್ಲಿ ಶಾಂತಿ, ಸುವ್ಯವಸ್ಥೆಗಾಗಿ ವ್ಯಯಿಸುತ್ತಿರುವ ಖರ್ಚು ವರ್ಷಂಪ್ರತಿ ಹೆಚ್ಚಾಗುತ್ತಲೇ ಇದೆ. ಇದೇ ಪರಿಸ್ಥಿತಿ ಪಾಕಿಸ್ತಾನದ್ದೂ ಆಗಿದೆ. ಅಂದರೆ ಈ ಆಂತರಿಕ ಸಮರದ ಕಾರಣದಿಂದ ಎರಡೂ ದೇಶಗಳ ಸೈನ್ಯ ಕಾರ್ಯಾಚರಣೆಯ ಖರ್ಚು ಸಟ್ಲೆಜ್ ಮತ್ತು ಗಂಗಾ ನದಿಯಲ್ಲಿ ಹರಿಯುವ ನೀರಿಗೆ ಸಮವಾಗುತ್ತಿದೆ.

ಕಾಶ್ಮೀರ ಸಮಸ್ಯೆಯನ್ನು ರಾಜಕೀಯ ಸಮಸ್ಯೆಯನ್ನಾಗಿ ಪರಿಗಣಿಸಬೇಕೇ ಅಥವಾ ಭಾರತ ಮತ್ತು ಪಾಕಿಸ್ತಾನ ಮಧ್ಯದ ಪ್ರಾದೇಶಿಕ ಒಡೆತನದ ಸಮಸ್ಯೆಯನ್ನಾಗಿ ಪರಿಗಣಿಸಬೇಕೇ ಅಥವಾ ಎರಡು ಕೋಮುಗಳ ಮಧ್ಯದ ಶಾಶ್ವತ ದ್ವೇಷದ ಸಂಕೇತವನ್ನಾಗಿ ಪರಿಗಣಿಸಬೇಕೇ ಎಂಬ ಹಲವಾರು ಪ್ರಶ್ನೆಗಳು ಉದ್ಭವವಾಗುತ್ತವೆ. ಈ ಪ್ರಶ್ನೆಗಳು ಕೇವಲ ಭಾರತಕ್ಕೆ ಮಾತ್ರ ಅನ್ವಯಿಸುವುದಿಲ್ಲ. ಇವು ಪಾಕಿಸ್ತಾನಕ್ಕೂ ಅನ್ವಯಿಸುತ್ತವೆ. ಅಲ್ಲದೆ, ಕಾಶ್ಮೀರದಲ್ಲಿ ವಾಸಿಸುವ ಜನತೆಗೂ ಅನ್ವಯಿಸುತ್ತವೆ.

೧೯೪೭ರಿಂದ ೨೦೧೦ರ ವರೆಗಿನ ಅರವತ್ತಮೂರು ವರ್ಷಗಳ ಕಾಶ್ಮೀರದ ದುರಂತ ರಾಜಕೀಯ ಇತಿಹಾಸವನ್ನು ಕಾಶ್ಮೀರ ಸಮಸ್ಯೆಗೆ ಕಾರಣರಾದವರೆಲ್ಲರೂ ಮರೆಯಲೇಬೇಕು. ಇತ್ತೀಚೆಗೆ ಕಾಶ್ಮೀರದ ಲೇಹ್ ಮತ್ತು ಕಾರ್ಗಿಲ್‌ನಲ್ಲಿ ಪ್ರವಾಹ ಬಂದು ಭೀಕರ ಮಾನವಿಕ ಸಮಸ್ಯೆಗಳನ್ನು ಉಂಟುಮಾಡಿದೆ. ಅದೇ ರೀತಿ ಪಾಕಿಸ್ತಾನದಲ್ಲಿಯೂ ಆಗಿದೆ. ಇದೆಲ್ಲ ಮಹಾತ್ಮಾ ಗಾಂಧೀಜಿಯವರ ವಿಶೇಷ ಜೀವನ ದೃಷ್ಟಿಕೋನದಂತೆ ಕಾಶ್ಮೀರದಲ್ಲಿ ಮಾಡಲಾಗುತ್ತಿರುವ ಒಟ್ಟು ಪಾಪದ ಫಲ!

ಅರವತ್ತಮೂರು ವರ್ಷಗಳಿಂದ ಎಲ್ಲ ಬಗೆಯ ಕಷ್ಟವನ್ನು ಅನುಭವಿಸುತ್ತಿರುವ ಅಲ್ಲಿಯ ಪ್ರಜೆಗಳು ಭಾರತ ಮತ್ತು ಪಾಕಿಸ್ತಾನಗಳ ಒತ್ತಡವನ್ನು ಕಿತ್ತೆಸೆಯುವ ಸಾಹಸ ಮಾಡಬೇಕು. ತಮ್ಮತನವನ್ನು ಅರಿತುಕೊಳ್ಳಬೇಕು. "ಗೋ ಇಂಡಿಯಾ" ಎಂದು ಹೇಳುವಂತೆ "ಗೋ ಪಾಕಿಸ್ತಾನ"ವೆಂದೂ ಹೇಳಬೇಕು. ಎರಡೂ ದೇಶಗಳನ್ನು ಸಮಾನವಾಗಿ ದೂರವಿಡಬೇಕು. ಎರಡೂ ದೇಶಗಳ ರಾಜಕೀಯ ಮತ್ತು ಬಂದೂಕಿನ ಒತ್ತಡಕ್ಕೆ ಮಣಿಯದೇ ತಟಸ್ಥವಾಗಿ ನಿಲ್ಲಬೇಕು. ೧೯೪೭ರ ಪೂರ್ವ ಸ್ಥಿತಿಗೆ ಹೋಗಲು ಯತ್ನ ನಡೆಸಬೇಕು. ಈಗ ಕಾಶ್ಮೀರದ ರಾಜಕಾರಣದಲ್ಲಿ ಸಕ್ರಿಯವಾಗಿರುವ ಪ್ರಜಾಸತ್ತಾತ್ಮಕ ಪಕ್ಷದ ಅಧ್ಯಕ್ಷರಾಗಿರುವ ಮೆಹಬೂಬ್ ಮುಫ್ತಿ, ಸರ್ವ ಪಕ್ಷ ಹುರಿಯತ್ ಕಾನ್ಫರೆನ್ಸಿನ ಮಹಮ್ಮದ್ ಉಮರ್ ಫರೂಕ್, ಹುರಿಯತ್‌ನ

ಉಗ್ರವಾದಿ ತಂಡದ ನಾಯಕ ಸಯ್ಯದ್ ಅಲಿಶಹ ಗಿಲಾನಿ ಮತ್ತು ಇತರ ನಾಯಕರು ಕೂಡ ತಮ್ಮ ತಮ್ಮ ರಾಜಕೀಯ ಉದ್ದೇಶಗಳಿಗೆ ಗೋರಿ ಕಟ್ಟಿ ಕಾಶ್ಮೀರದ ಒಟ್ಟು ಜನತೆಯ ಸಂಪೂರ್ಣ ಹಿತದ ರಾಜಕಾರಣಕ್ಕೆ ತಮ್ಮನ್ನು ತೊಡಗಿಸಿಕೊಳ್ಳಬೇಕು.

ಪಾಕಿಸ್ತಾನದಲ್ಲಿ ಉಂಟಾಗಿರುವ ಭೀಕರ ಪ್ರವಾಹದ ನಷ್ಟದ ಪರಿಹಾರಕ್ಕಾಗಿ ಭಾರತ ಮಾನವೀಯ ಅನುಕಂಪ ಪ್ರೇರಿತವಾಗಿ ಕೊಟ್ಟ ಐದು ಲಕ್ಷ ಡಾಲರ್‌ಗಳ ಸಹಾಯವನ್ನು ನಿರಾಕರಿಸಿದಾಗ ಭಾರತದ ಪ್ರಧಾನಿ ಮನಮೋಹನ ಸಿಂಗ್ ತಮ್ಮ ಧರ್ಮ ಬೋಧನೆಯ ನೀತಿಯಂತೆ ಸಹಾಯದ ಮೊತ್ತವನ್ನು ಹೆಚ್ಚಿಸಿದರು. ಕಾಶ್ಮೀರದಲ್ಲಿ ಎಲ್ಲ ಪ್ರಕಾರದ ಗ್ಲಾನಿಗಳಿಗೆ ಕಾರಣವಾಗುತ್ತಿರುವ ಧರ್ಮಗಳ ಮೂಲಭೂತವಾದವನ್ನು ಬದಿಗಿರಿಸಿ ಧರ್ಮಗಳ ಮೂಲ ತತ್ವವನ್ನು ಹಿಡಿದು ಸಹಾಯ ಮಾಡಿದ ಭಾರತದ ರೀತಿಯನ್ನು ಪಾಕಿಸ್ತಾನ ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಎಲ್ಲಿಯವರೆಗೆ ಜನತೆಯನ್ನೂ, ಸರ್ಕಾರವನ್ನೂ ಸಮೀಕರಿಸುತ್ತ ಹೋಗುವೆವೋ ಅಲ್ಲಿಯವರೆಗೆ ಸಮಸ್ಯೆಗೆ ನಿಜವಾದ ಪರಿಹಾರ ಸಿಗುವುದಿಲ್ಲ. ಸರ್ಕಾರವೆಂದರೆ ಜನತೆಯಲ್ಲ. ಜನತೆಗೆ ತಮ್ಮದೇ ಆದ ವ್ಯಕ್ತಿತ್ವವಿದೆ, ಭಾವನೆಗಳಿವೆ, ಆಶೋತ್ತರಗಳಿವೆ. ಅದು ಸಜೀವವಾದುದು, ಚೈತನ್ಯಯುತವಾದುದು. ಇದಕ್ಕೆ ವ್ಯತಿರಿಕ್ತವಾಗಿ ಸರ್ಕಾರ ಒಣಗಿದ ಮರದ ದಿಮ್ಮಿ. ಆದ್ದರಿಂದ ಸರ್ಕಾರಗಳು ಪರಸ್ಪರ ವ್ಯವಹರಿಸುವಾಗ ತಮ್ಮ ರಾಜಕೀಯ ಉದ್ದೇಶಗಳನ್ನು ಬದಿಗಿಟ್ಟು ತಮ್ಮ ಜನತೆಯ ಹಿತವನ್ನು ಮಾತ್ರ ಗಮನದಲ್ಲಿರಿಸಿಕೊಳ್ಳಬೇಕು.

ಕಾಶ್ಮೀರದ ಜನತೆ ಸ್ವಾತಂತ್ರ್ಯವನ್ನು ಬಯಸುತ್ತಾರೆ. ಇಂದಿನ ಭಾರತ ಮತ್ತು ಪಾಕಿಸ್ತಾನ ಸರ್ಕಾರಗಳ ಇಕ್ಕಳಕ್ಕೆ ಸಿಲುಕಿಕೊಂಡಿರುವ ಕಾಶ್ಮೀರ ಪೂರ್ಣ ಸ್ವಾತಂತ್ರ್ಯವನ್ನಂತೂ ಹೊಂದಲು ಖಂಡಿತಾ ಸಾಧ್ಯವಿಲ್ಲ. ಇದಕ್ಕೆ ಬದಲಾಗಿ ಕಾಶ್ಮೀರದ ಜನತೆ ಏಕೀಕೃತ ಕಾಶ್ಮೀರಕ್ಕಾಗಿ, ಅಖಂಡ ಕಾಶ್ಮೀರಕ್ಕಾಗಿ ಪ್ರಯತ್ನಿಸಬೇಕು, ಹೋರಾಟ ನಡೆಸಬೇಕು. ಏಕೀಕೃತ ಕಾಶ್ಮೀರದಲ್ಲಿಯೇ, ಅಖಂಡ ಕಾಶ್ಮೀರದಲ್ಲಿಯೇ ಸ್ವಾತಂತ್ರ್ಯದ ಎಲ್ಲ ಸಮಾಧಾನವನ್ನೂ ಪಡೆಯಬಹುದು. ತಮ್ಮ ಕಾಶ್ಮೀರವನ್ನು ಕಾಶ್ಮೀರಿಗಳು ಎಂದಿಗೂ ವಿಶ್ವ ರಾಜಕಾರಣದ ಸ್ವಾರ್ಥತೆಯಿಂದ ಬಿಡುಗಡೆಗೊಳಿಸಿಕೊಳ್ಳಲಾರರು. ಇಂದಿನ ಪರಿಸ್ಥಿತಿಯನ್ನು ಅವಲೋಕಿಸಿದಾಗ ಕಾಶ್ಮೀರದಲ್ಲಿಯ ಕದನ ಅಫಘಾನಿಸ್ತಾನದ ಮಾದರಿಯ ಕದನವಾಗಿ ಮಾರ್ಪಡುವ ಎಲ್ಲ ಭೀತಿಗಳೂ, ಸಂಕೇತಗಳೂ ಕಾಣುತ್ತಿವೆ. ಇಂಥ ದುರ್ಘಟನೆಯೇ ಸಂಭವಿಸಿದಲ್ಲಿ ಪಾಕಿಸ್ತಾನ, ಭಾರತ ಮತ್ತು ಕಾಶ್ಮೀರ ಮೂರೂ ಪ್ರದೇಶಗಳೂ ಅನವರತ ಗೋಳನ್ನು ಅನುಭವಿಸಬೇಕಾಗಿ ಬರುತ್ತದೆ. ಈ ಸಂಗತಿಯನ್ನು ಪಾಕಿಸ್ತಾನ ಮತ್ತು ಕಾಶ್ಮೀರಿಗಳು ಅರ್ಥಮಾಡಿಕೊಳ್ಳಬೇಕು.

ಕಾಶ್ಮೀರ ಸಮಸ್ಯೆಯನ್ನು ಪರಿಹರಿಸುವಲ್ಲಿ ಭಾರತೀಯ ಮುಸ್ಲಿಮರ ಪಾತ್ರವೂ ಬಹು ಹಿರಿದಾಗಿದೆ. ಭಾರತದಲ್ಲಿರುವ ಮುಸ್ಲಿಂ ಬಾಂಧವರು ಕಳೆದ ಆರು ದಶಕಗಳಿಂದ ಪ್ರಜಾಸತ್ತಾತ್ಮಕ ಹಾಗೂ ಧರ್ಮ ನಿರಪೇಕ್ಷ ಆಡಳಿತದ ಅನುಭವವನ್ನೂ, ಪ್ರಯೋಜನವನ್ನೂ ಪಡೆದಿದ್ದಾರೆ. ಪಾಕಿಸ್ತಾನದಲ್ಲಿರುವ ಮುಸ್ಲಿಮರಿಗೆ, ಪಾಕ್ ಆಕ್ರಮಿತ ಕಾಶ್ಮೀರಿಗಳಿಗೂ ಈ ಲಾಭ ದೊರೆತಿಲ್ಲ. ಆದ್ದರಿಂದ ಭಾರತೀಯ ಮುಸ್ಲಿಂ ಬಾಂಧವರು ಒಂದೇ ವೇದಿಕೆಯ ಮೇಲೆ ಬಂದು ಪಾಕಿಸ್ತಾನದಲ್ಲಿಯ

ಮುಸಲ್ಮಾನರಿಗೂ ಕಾಶ್ಮೀರದಲ್ಲಿಯ ಪ್ರತ್ಯೇಕತಾವಾದಿ ಮುಸಲ್ಮಾನರಿಗೂ ಭಾರತದಲ್ಲಿಯ ತಮ್ಮ ಪ್ರಜಾಸತ್ತಾತ್ಮಕ ಮತ್ತು ಧರ್ಮ ನಿರಪೇಕ್ಷ ದೇಶದಲ್ಲಿಯ ಸಕಾರಾತ್ಮಕ ಅನುಭವಗಳನ್ನು ತಮ್ಮ ತಮ್ಮ ಮನೆ ಮಾಳಿಗೆಯ ಮೇಲೆ ನಿಂತು, ಭಾರತದಲ್ಲಿಯ ಎಲ್ಲ ಮಸೀದಿಗಳ ಧ್ವನಿವರ್ಧಕಗಳ ಮೂಲಕ ಕೇಳುವಂತೆ, ಮುಖ್ಯವಾಗಿ ಹಿಂಸೆಯನ್ನೂ, ಭಯೋತ್ಪಾದನೆಯನ್ನೂ ಬಿಡಲು ಹೇಳಬೇಕು. ಪ್ರಜಾಸತ್ತಾತ್ಮಕವೂ, ಧರ್ಮನಿರಪೇಕ್ಷವೂ ಆದ ಭಾರತದ ವಿರುದ್ಧ ಸದಾ ಸರ್ವಾಧಿಕಾರಿ ಪ್ರಭುತ್ವ ಮತ್ತು ಮೂಲಭೂತವಾದಿಗಳ ಪ್ರಭುತ್ವದಲ್ಲಿಯೇ ಆರು ದಶಕಗಳನ್ನು ಕಳೆದ ಪಾಕಿಸ್ತಾನಕ್ಕೆ ಮಾತನಾಡಲು ಯಾವುದೇ ನೈತಿಕ ಅಧಿಕಾರವಿಲ್ಲವೆಂದೂ ಹೇಳಬೇಕು. ಭಾರತದ ಮುಸಲ್ಮಾನರ ನೈತಿಕ ಬಲದ ಕಾರಣದಿಂದ ಪಾಕಿಸ್ತಾನದಲ್ಲಿಯೂ ಪ್ರಜಾಸತ್ತಾತ್ಮಕ, ಧರ್ಮನಿರಪೇಕ್ಷ ಸರ್ಕಾರದ ರಚನೆಯಾಗುವಂತೆ ಮಾಡಬೇಕು. ಆಗ ಕಾಶ್ಮೀರ ಸಮಸ್ಯೆಯೂ ಬಗೆಹರಿಯುವುದಲ್ಲದೆ ಭಾರತ ಉಪಖಂಡದಲ್ಲಿ ಶಾಂತಿಯೂ ನೆಲೆಸುವುದು.

ಕಾಶ್ಮೀರ ಭಾರತದ ಒಂದು ಭಾಗವಾಗಿ ಉಳಿಯಬೇಕೆನ್ನುವುದಾದರೆ ಭಾರತದ ಹಿಂದೂ ಧರ್ಮೀಯರ ಮೇಲೂ ಹೊಣೆಗಾರಿಕೆಯಿದೆ. ಸಂವಿಧಾನಬದ್ಧವಾಗಿ ಘೋಷಿತವಾದ ಧರ್ಮನಿರಪೇಕ್ಷ ಆಡಳಿತ ಪದ್ಧತಿಯನ್ನು ಬಲಗೊಳಿಸಲು ಹೆಚ್ಚಿನ ಯತ್ನ ಮಾಡಬೇಕೇ ಹೊರತು ಯವುದೇ ಕಾರಣದಿಂದ ಅದನ್ನು ದುರ್ಬಲಗೊಳಿಸಬಾರದು.

ಭಾರತದ ಧರ್ಮನಿರಪೇಕ್ಷ ಆಡಳಿತ ನೀತಿಗೆ ಧಕ್ಕೆ ಬಾರದಂತೆ ವರ್ತಿಸಬೇಕಾದುದು ದೇಶದ ಎಲ್ಲ ರಾಜಕೀಯ ಪಕ್ಷಗಳ ಆದ್ಯ ಕರ್ತವ್ಯವಾಗಿದೆ. ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಧರ್ಮಗಳ ಆಧಾರದ ಮೇಲೆ 'ಮತಬ್ಯಾಂಕ್'ಅನ್ನು ಕಟ್ಟುವ ಪ್ರಯತ್ನಗಳನ್ನು ಬಿಡಬೇಕು. ದೇಶದಲ್ಲಿ ಈಗ ಪ್ರಚಲಿತವಿರುವ ಅಲ್ಪ ಸಂಖ್ಯಾತರು, ಬಹು ಸಂಖ್ಯಾತರು ಎಂಬ ಶಬ್ದಗಳನ್ನೇ ಭಾರತದ ರಾಜಕೀಯ ಶಬ್ದಕೋಶದಿಂದ ತೆಗೆದುಹಾಕಬೇಕು. ಈ ಶಬ್ದಗಳೇ ಭಾರತದ ವಿಭಜನೆಗೆ ಕಾರಣವಾದವು. ಇದನ್ನು ಮನಗಂಡಿದ್ದ ಮಹಾತ್ಮಾ ಗಾಂಧೀಜಿಯವರು ತಾವು ಆಫ್ರಿಕಾದಲ್ಲಿದ್ದಾಗಿನಿಂದಲೇ ಹಿಂದೂ ಮುಸ್ಲಿಂ ಬಾಂಧವ್ಯಕ್ಕಾಗಿ ಪ್ರಯತ್ನಿಸಿದರು ಮತ್ತು ಹೋರಾಡಿದರು. ಭಾರತಕ್ಕೆ ಹಿಂದಿರುಗಿದಮೇಲಂತೂ ಕೋಮು ಸೌಹಾರ್ದತೆಯೇ ಅವರ ಉಸಿರಾಯಿತು, ಪ್ರಾಣವಾಯಿತು. ಕೋಮುಗಳ ಆಧಾರದ ದೃಷ್ಟಿಯಿಂದ ದೇಶ ವಿಭಜನೆಯಾಗುವುದಾದರೆ ತಮ್ಮ ದೇಹದ ವಿಭಜನೆ ಪ್ರಥಮವಾಗಿ ಆಗಲೆಂದು ಹೇಳಿದರು. ದೇಶದ ವಿಭಜನೆಯೊಂದಿಗೆ ಸೈನ್ಯದ ವಿಭಜನೆಯಾದಮೇಲಂತೂ ಅವರ ಎದೆಯೊಡೆಯಿತು. ಅವರ ಪ್ರಕಾರ ಸೇನಾ ವಿಭಜನೆ ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಶಾಶ್ವತ ಸೈನ್ಯ ಕಾರ್ಯಾಚರಣೆಗೆ ಕಾರಣವಾಗಿ ಶಾಶ್ವತ ಹಿಂಸೆ, ಶಾಶ್ವತ ಅಶಾಂತಿ, ಶಾಶ್ವತ ಕೋಮುದ್ವೇಷಕ್ಕೆ ಕಾರಣವಾಗುವುದೆಂದು ಹೇಳಿದ್ದರು ಅವರು ಅಂದು ಹೇಳಿದ್ದ ಮಾತುಗಳು ಇಂದು ಅಕ್ಷರಶಃ ಸತ್ಯವಾಗಿದೆ.

ಭಾರತ ಸ್ವತಂತ್ರಗೊಂಡಮೇಲೆ ಲಾರ್ಡ್ ಮೌಂಟ್‌ಬ್ಯಾಟನ್‌ರನ್ನು ಮೊದಲ ಗರ್ವನರ್-ಜನರಲ್‌ರನ್ನಾಗಿ ಆಯ್ಕೆ ಮಾಡಿಕೊಂಡಿತು. ಇದನ್ನು

ಗಾಂಧೀಜಿ ಅರ್ಥಪೂರ್ಣವಾಗಿ ಸಮರ್ಥಿಸಿದರು. ಅದೇ ಕಾಲಕ್ಕೆ ಮಹಮ್ಮದ್ ಅಲಿ ಜಿನ್ನಾರವರು ಪಾಕಿಸ್ತಾನದ ಗವರ್ನರ್ ಜನರಲ್ ಆದರು. ಆಗ ಗಾಂಧೀಜಿ ಹೀಗೆ ಅಂದರು, " ತಮ್ಮ ಹಿರಿಮೆಯನ್ನು ಪ್ರದರ್ಶಿಸುವುದಕ್ಕಾಗಿ ಜಿನ್ನಾರವರು ಆ ಅಧಿಕಾರವನ್ನು ಸ್ವೀಕರಿಸಿರಬಹುದು. ಇಸ್ಲಾಂ ಅಂದರೆ ಏನು ಎಂಬುದನ್ನು ತಿಳಿಸಲು ಅವರು ಬಯಸಿದ್ದಾರೆ. ಅವರು ಯಜಮಾನರಾಗುತ್ತಾರೋ, ಸೇವಕರಾಗುತ್ತಾರೋ ನೋಡೋಣ. ಒಬ್ಬನೇ ಒಬ್ಬ ಸಿಂಧೀ ದೇಶ ಬಿಟ್ಟು ಓಡಿಹೋದರೆ ಅದರ ಜವಾಬ್ದಾರಿ ಗವರ್ನರ್ ಜನರಲ್‌ನದಾಗುತ್ತದೆ. ಅವರು ಎಲ್ಲರೊಂದಿಗೂ ಒಂದೇ ನ್ಯಾಯದಿಂದ ನಡೆದುಕೊಳ್ಳಬೇಕಾಗುತ್ತದೆ. ಅಬೂಬಕರ್‌ನಂತೆ ಅಥವಾ ಓಮರ್‌ನಂತೆ ಅಥವಾ ಅಲೀಯಂತೆ...... ಜಿನ್ನಾರ ನೇತೃತ್ವದಲ್ಲಿ ಪಾಕಿಸ್ತಾನ ಯಾವ ಪ್ರಕಾರದ ಸನ್ನಡತೆಯನ್ನು ತೋರಿಸುತ್ತದೆಯೆಂದು ಜಗತ್ತು ನೋಡುತ್ತದೆ" ಇತ್ಯಾದಿಯಾಗಿ. ಆದರೆ ಪಾಕಿಸ್ತಾನದಲ್ಲಿ ಈಗ ನಡೆಯುತ್ತಿರುವುದೆಲ್ಲ ಆ ನಿರೀಕ್ಷೆಗೆ ವಿರುದ್ಧವಾದುದು. ಗಾಧೀಜಿಯವರ ಈ ಮಾತುಗಳನ್ನು ಭಾರತೀಯ ಮುಸಲ್ಮಾನ ಬಾಂಧವರು ಅರ್ಥ ಮಾಡಿಕೊಳ್ಳಬೇಕು.

ಭಾರತ ಸರ್ಕಾರ ಕಾಶ್ಮೀರದಲ್ಲಿ ಬಂದೂಕಿನಾಟವನ್ನು ನಿಲ್ಲಿಸಬೇಕು. ಬದಲಿಗೆ ಪ್ರೇಮದ, ಸ್ನೇಹದ, ವಿಶ್ವಾಸದ ವಾತಾವರಣವನ್ನು ನಿರ್ಮಿಸಬೇಕು. ಕಾಶ್ಮೀರದಲ್ಲಿರುವ ಬಡತನವನ್ನು, ನಿರುದ್ಯೋಗವನ್ನು, ಅನಾಥಪ್ರಜ್ಞೆಯನ್ನು ಹೋಗಲಾಡಿಸಬೇಕು. ಭಾರತದ ಇತರ ರಾಜ್ಯಗಳ ಜನರು ಹೆಚ್ಚು ಹೆಚ್ಚಾಗಿ ಕಾಶ್ಮೀರಕ್ಕೆ ಹೋಗಿ ಅಲ್ಲಿಯ ಜನರೊಂದಿಗೆ ತಾದಾತ್ಮ್ಯವನ್ನು ಸಾಧಿಸುವುದಕ್ಕೆ ಅವಕಾಶ ಮಾಡಿಕೊಡಬೇಕು, ಪ್ರೋತ್ಸಾಹಿಸಬೇಕು. ಕಾಶ್ಮೀರದ ಜನತೆ ಸ್ವಾಯತ್ತತೆಯ ಅಥವಾ ಸ್ವಾತಂತ್ರ್ಯದ ಮಾತು ಬಿಡುವಂತೆ ಎಲ್ಲ ಮಾನವೀಯ ರಚನಾತ್ಮಕ ಕಾರ್ಯಕ್ರಮಗಳನ್ನು ಯೋಜಿಸಬೇಕು. ಕಾಶ್ಮೀರದ ಯುವಕರು ಭಾರತದ ಯುವಕರೊಂದಿಗೆ ಬೆರೆಯುವಂತೆ ಮಾಡಬೇಕು. ನಲುಗುತ್ತಿರುವ ಕಾಶ್ಮೀರ ನಲಿಯುವ ಕಾಶ್ಮೀರವನ್ನಾಗಿ ಪರಿವರ್ತಿಸುವ ಜವಾಬ್ದಾರಿ ಭಾರತ ಸರ್ಕಾರದ್ದೂ, ಭಾರತೀಯರದ್ದೂ ಆಗಿದೆ.

ಇಬ್ಭಾಗವಾದ ಕಾಶ್ಮೀರ ಒಂದಾಗಬೇಕು. ಇದೇ ಎಲ್ಲ ಕಾಶ್ಮೀರಿಗಳ ಘೋಷಣೆಯಾಗಬೇಕು. ಪಾಕಿಸ್ತಾನ ಜಿಂದಾಬಾದ್, ಭಾರತ ಮಾತಾ ಕಿ ಜೈ ಮುಂತಾದ ಘೋಷಣೆಗಳು ಇಂದಿನ ವೈಜ್ಞಾನಿಕ ಯುಗದಲ್ಲಿ ಅರ್ಥಹೀನವೆನ್ನಿಸುತ್ತದೆ. ಇಂದಿನ ಘೋಷಣೆ ಜೈ ಜಗತ್ ಒಂದೇ. ಈ ಘೋಷಣೆಯಲ್ಲೇ ಇಡೀ ಭಾರತ ಉಪಖಂಡದ ಹಿತವಿದೆ.

* * *

ಜೀವನಾನುಭವದ ಶಿಕ್ಷಣ ಅಗತ್ಯ

– ವಿನೋಬಾ

(ಸೆಪ್ಟೆಂಬರ್ ೫ ಶಿಕ್ಷಕರ ದಿನಾಚರಣೆ ಪ್ರಯುಕ್ತ ಈ ಲೇಖನ)

ಈಗಿನ ವಿಚಿತ್ರ ಶಿಕ್ಷಣ ಪದ್ಧತಿಯ ದೆಸೆಯಿಂದ ಜೀವನ ಎರಡು ಹೋಳಾಗಿದೆ. ಆಯುಷ್ಯದಲ್ಲಿ ಮೊದಲನೆ ಹದಿನೈದು ಇಪ್ಪತ್ತು ವರ್ಷ ಬದುಕಿನ ಜಂಜಾಟದಲ್ಲಿ ಬೀಳದೆ ಮನುಷ್ಯ ಕೇವಲ ಶಿಕ್ಷಣ ಪಡೆಯುವುದರಲ್ಲಿಯೇ ಕಳೆಯುತ್ತಾನೆ. ಆಮೇಲೆ ಸಾಯುವವರೆಗೆ ಶಿಕ್ಷಣವನ್ನು ಮೂಟೆ ಕಟ್ಟಿಟ್ಟು ಬದುಕುತ್ತಾನೆ.

ಇದು ಪ್ರಕೃತಿಯ ಯೋಜನೆಗೆ ವಿರುದ್ಧ. ಒಂದು ಮೊಳದುದ್ದದ ಹುಡುಗ ಮೂರೂವರೆ ಮೊಳದವನು ಹೇಗಾದನೆಂದು ಅವನಿಗಾಗಲಿ ಇತರರಿಗಾಗಲಿ ಗಮನಕ್ಕೆ ಬಾರದು. ಮೈ ದಿನವೂ ಬೆಳೆಯುತ್ತಿರುತ್ತದೆ. ಸಾವಕಾಶವಾಗಿ ಕ್ರಮ ಕ್ರಮವಾಗಿ ಸ್ವಲ್ಪ ಸ್ವಲ್ಪ ಬೆಳೆಯುತ್ತದೆ. ಆದುದರಿಂದ ಅದು ಬೆಳೆಯುವುದು ತಿಳಿಯುವುದೇ ಇಲ್ಲ. ರಾತ್ರಿ ಮಲಗಿದಾಗ ಎರಡು ಅಡಿ, ಬೆಳಿಗ್ಗೆ ಎದ್ದಾಗ ಎರಡೂವರೆ– ಹೀಗೆ ಆಗುವುದಿಲ್ಲ. ಆದರೆ ಇಂದಿನ ಶಿಕ್ಷಣ ಪದ್ಧತಿಯಲ್ಲಿ, ಮನುಷ್ಯ ಇಂತಿಷ್ಟು ವರ್ಷ ಕಡೆಯ ಗಳಿಗೆಯವರೆಗೂ ಬಾಳಿನ ಬಗ್ಗೆ ಏನೂ ಜವಾಬ್ದಾರಿಯಿಲ್ಲದೆ ಇರಬೇಕು, ಮಾರನೆಯ ವರ್ಷದ ಮೊದಲನೆಯ ದಿನವೇ ಎಲ್ಲಾ ಜವಾಬ್ದಾರಿಯನ್ನು ಹೊರಬೇಕು. ಏನೂ ಜವಾಬ್ದಾರಿಯಿಲ್ಲದ ಸ್ಥಿತಿಯಿಂದ ಪೂರಾ ಜವಾಬ್ದಾರಿಯ ಸ್ಥಿತಿಗೆ ಧುಮುಕಬೇಕು. ಹನುಮಂತನ ನೆಗೆತವೇ ಆಯಿತು. ಹೀಗೆ ಹನುಮಂತ–ಲಂಘನದ ಪ್ರಯತ್ನದಲ್ಲಿ ಕೈಕಾಲು ಮುರಿದು ಹೋದರೆ ಏನು ಅಚ್ಚರಿ!

ಭಗವಂತ ಅರ್ಜುನನಿಗೆ ಕುರುಕ್ಷೇತ್ರದಲ್ಲಿ ಭಗವದ್ಗೀತೆಯನ್ನು ಹೇಳಿದ. ಮೊದಲು ಭಗವದ್ಗೀತೆಯ ಪಾಠ ಮಾಡಿ ಆಮೇಲೆ ಅರ್ಜುನನನ್ನು ಕುರುಕ್ಷೇತ್ರಕ್ಕೆ ನೂಕಲಿಲ್ಲ. ಆಗ ಅರ್ಜುನನಿಗೆ ಗೀತೆ ಅರಗಿತು. ಜೀವನದ ಸಿದ್ಧತೆಯ ಜ್ಞಾನ ಎನ್ನುವುದನ್ನು ನಾವು ಜೀವನದಿಂದ ಪೂರಾ ಅಲಿಪ್ತವಾಗಿಡಬಯಸುತ್ತೇವೆ. ಆದುದರಿಂದ ಆ ಜ್ಞಾನದಿಂದ ಸಾವಿನ ಸಿದ್ಧತೆ ಆಗುತ್ತದೆ.

ಇಪ್ಪತ್ತು ವರ್ಷದ ಹುರುಪಿನ ತರುಣ ಅಧ್ಯಯನದಲ್ಲಿ ಮಗ್ನನಾಗಿದ್ದಾನೆ. ಬಗೆಬಗೆಯ ಉಚ್ಚ ವಿಚಾರದ ಸೌಧವನ್ನು ಕಟ್ಟಿದ್ದಾನೆ. 'ಶಿವಾಜಿಯಂತೆ ತಾಯಿನಾಡಿನ ಸೇವೆ ಮಾಡುತ್ತೇನೆ. ವಾಲ್ಮೀಕಿಯಂಥ ಕವಿಯಾಗುತ್ತೇನೆ. ನ್ಯೂಟನ್ನಿನಂತೆ ಶೋಧನೆ ಮಾಡುತ್ತೇನೆ' ಒಂದು, ಎರಡು, ನಾಲ್ಕು, ಎಷ್ಟೋ ಕಲ್ಪನೆ. ಇಂಥ ಕಲ್ಪನೆ ಮಾಡುವ ಭಾಗ್ಯವೂ ಕೆಲವರಿಗೆ ಮಾತ್ರವೇ. ಅವರ ಮಾತನ್ನೇ ನೋಡೋಣ. ಈ ಕಲ್ಪನೆಗಳ ಮುಂದಿನ ಫಲ? ಉಪ್ಪು ಮೆಣಸಿನಕಾಯಿ ಅಕ್ಕಿ ಬೇಳೆಯ ಗೊಂದಲದಲ್ಲಿ ಸಿಕ್ಕಾಗ, ಹೊಟ್ಟೆಯ ಪ್ರಶ್ನೆ ಬಂದು ನಿಂತಾಗ, ಪಾಪ, ಏನೇನಾಗುತ್ತಾನೆ. ಜೀವನದ ಜವಾಬ್ದಾರಿ ಎಂಥದ್ದೋ, ಇಂದಿನವರೆಗೆ ಅವನಿಗೆ ಕಲ್ಪನೆಯೇ ಇರಲಿಲ್ಲ. ಈಗ ಗುಡ್ಡವೇ ಎದುರಿಗೆ ಬಂದು ನಿಂತಿದೆ. ಏನು ಮಾಡಬೇಕು? ಒಮ್ಮೆ ನೌಕರಿ, ಒಮ್ಮೆ ಹೆಂಡತಿ,

ಒಮ್ಮೆ ಮಗಳಿಗೊಬ್ಬ ಗಂಡು, ಕಡೆಗೆ ಸ್ಮಶಾನ, ಹೊಟ್ಟೆಯ ಪಾಡಿಗಾಗಿ ಎಲ್ಲವನ್ನು ಬಿಟ್ಟು ಕಾಡು-ಮೇಡು ಅಲೆಯುವ ಶಿವಾಜಿ, ಕರುಣೆಯ ಗೀತೆಯನ್ನು ಹಾಡುವ ವಾಲ್ಮೀಕಿ; ಶೋಧನೆ ಮಾಡುವ ನ್ಯೂಟನ್'- ಹೀಗೆ ತನ್ನ ಕಲ್ಪನೆಗಳನ್ನು ಸಮಾಧಾನ ಪಡಿಸಬೇಕು. ಇದು ಹನುಮಂತ-ಲಂಘನದ ಫಲ.

ಮೆಟ್ರಿಕ್ ವಿದ್ಯಾರ್ಥಿಯೊಬ್ಬನನ್ನು ಕೇಳಿದೆ- 'ಮುಂದೇನು ಮಾಡುತ್ತೀ?'

'ಮುಂದೇನು? ಮುಂದೆ ಕಾಲೇಜು.'

'ಸರಿ, ಒಳ್ಳೆಯದೇ. ಕಾಲೇಜು ಆದ ಮೇಲೇನು? ಈ ಪ್ರಶ್ನೆ ಕಾದೇ ಇದೆಯಲ್ಲ.'

'ಈಗಿನಿಂದ ಅದನ್ನೇಕೆ ವಿಚಾರ ಮಾಡಬೇಕು? ಮುಂದೆ ನೋಡೋಣ.'

ಮೂರು ವರ್ಷ ಕಳೆದ ಮೇಲೆ ಅದೇ ವಿದ್ಯಾರ್ಥಿಯನ್ನು ಮತ್ತೆ ಅದೇ ಪ್ರಶ್ನೆಯನ್ನು ಕೇಳಿದೆ.

'ಇಲ್ಲಿಯವರೆಗೆ ಆ ವಿಚಾರವೇ ಇಲ್ಲ.'

'ಹಾಗೆಂದರೆ? ವಿಚಾರ ಮಾಡಲಿಲ್ಲವೆ?'

'ಇಲ್ಲಣ್ಣ, ವಿಚಾರ ಮಾಡಲಿಲ್ಲ. ಏನು ಮಾಡುವುದು? ಏನೂ ಹೊಳೆಯುವುದೇ ಇಲ್ಲ. ಇನ್ನೂ ಒಂದೂವರೆ ವರ್ಷವಿದೆ. ಮುಂದೆ ನೋಡೋಣ.'

ಮುಂದೆ ನೋಡೋಣ! ಮೂರು ವರ್ಷದ ಕೆಳಗೆ ಹೇಳಿದ ಶಬ್ದ ಇದೇ. ಮೊದಲು ಧ್ವನಿಯಲ್ಲಿ ನಿಶ್ಚಿಂತೆಯಿತ್ತು. ಈಗ ಸ್ವಲ್ಪ ಚಿಂತೆಯ ಸೂಚನೆಯಿದೆ.

ಆಮೇಲೆ ಒಂದೂವರೆ ವರ್ಷದ ತರುವಾಯ ಅದೇ ವಿದ್ಯಾರ್ಥಿಯನ್ನು, ಈಗ ಗೃಹಸ್ಥ, ಅದೇ ಪ್ರಶ್ನೆಯನ್ನು ಕೇಳಿದೆ. ಈಗ ಅವನ ಮೋರೆ ಚಿಂತಾಗ್ರಸ್ತವಾಗಿದೆ. ಧ್ವನಿಯಲ್ಲಿ ನಿಶ್ಚಿಂತೆ ಮಾಯವಾಗಿತ್ತು, 'ತತಃ ಕಿಂ, ತತಃ ಕಿಂ?' ಶಂಕರಾಚಾರ್ಯರು ಕೇಳಿದ ಈ ಸನಾತನ ಪ್ರಶ್ನೆ ಅವನ ತಲೆಯಲ್ಲಿ ವೇಗವಾಗಿ ಸುಳಿಯುತ್ತಿತ್ತು. ಆದರೆ ಅದಕ್ಕೆ ಉತ್ತರ ಅವನ ಬಳಿ ಇರಲಿಲ್ಲ.

ಇವೊತ್ತಿನ ಸಾವನ್ನು ನಾಳೆಗೆ ತಳ್ಳುತ್ತ ತಳ್ಳುತ್ತ ಒಂದು ದಿನ ಸಾಯಲೇಬೇಕಾಗುತ್ತದೆ. ಆದರೆ ಸಾಯುವ ಮೊದಲೇ ಸತ್ತವನಿಗೆ, ತನ್ನ ಸಾವನ್ನು ತನ್ನ ಕಣ್ಣಿಂದಲೇ ಕಂಡವನಿಗೆ ಈ ಪ್ರಸಂಗ ಬಾರದು. ಸಾವಿನ ಅನುಭವವನ್ನು ಮುಂಗಡವಾಗಿಯೇ ಪಡೆದವನ ಸಾವು ಹಿಂದೆ ಸರಿಯುತ್ತದೆ. ಈ ಮುಂಗಡ ಅನುಭವವನ್ನು ತಪ್ಪಿಸಿಕೊಂಡು ಬಾಳನ್ನು ಕದ್ದವನ, ಮನ ಕದ್ದವನ ಎದೆಯ ಮೇಲೆ ಬಂದು ಕೂಡುತ್ತದೆ ಸಾವು. ಇದಿರಿಗೇ ಕಂಬವಿದೆ. ಆದರೆ ಕುರುಡನಿಗೆ ಆ ಕಂಬ ಎದೆಗೆ ತಗುಲಿದಾಗಲೇ ಅದು ಗೊತ್ತು. ಕಣ್ಣಿದ್ದವನಿಗೆ ಮೊದಲೇ ಕಾಣುತ್ತದೆ. ಆದ್ದರಿಂದ ಅವನ ಎದೆಗೆ ಪೆಟ್ಟು ತಗಲದು.

ಬಾಳಿನ ಜವಾಬ್ದಾರಿ ಬೆದರುಗೊಂಬೆಯೇನಲ್ಲ. ಆನಂದದಿಂದ ಓತಪ್ರೋತವಾಗಿದೆ. ಒಂದೇ ನಿಯಮ, ದೇವರು ರಚಿಸಿದ ಜೀವನದ ಸರಳ ಯೋಜನೆಯಂತೆ ನಡೆದು, ಅಯುಕ್ತ ವಾಸನೆಗಳನ್ನು ತುಳಿಯಬೇಕು. ಅದರಲ್ಲಿ ಆನಂದ ತುಬಿರುವಂತೆ ಶಿಕ್ಷಣವೂ ತುಂಬಿದೆ, ಬಾಳು-ಬದುಕಿನ ಜವಾಬ್ದಾರಿಯನ್ನು ತಪ್ಪಿಸಿದವನಿಗೆ ಇಡೀ ಶಿಕ್ಷಣವೇ ತಪ್ಪಿಹೋಯಿತು; ಈ ಮಾತು ದೃಢ, ಬಾಲ್ಯದಲ್ಲಿಯೇ ಬಾಳು ಬದುಕಿನ ಜವಾಬ್ದಾರಿಯ ಯೋಚನೆ ಹುಟ್ಟಿದರೆ ಬಾಳು ಬಾಡಿಹೋಗುತ್ತದೆ

ಎಂದು ಅನೇಕರು ತಿಳಿದಿದ್ದಾರೆ. ಹಾಗೆ ಜೀವನದ ಹೊಣೆಗಾರಿಕೆಯ ಭಾರದಿಂದ ಜೀವನ ಬಾಡಿ ಹೋಗುವಂತಿದ್ದರೆ ಅದು ಬಾಳೇ ಅಲ್ಲ, ಜೀವನ ವಸ್ತುವಾಗಲು ಯೋಗ್ಯವಲ್ಲ.

ಆದರೆ ಈಗ ಅನೇಕ ಶಿಕ್ಷಣ ಪಂಡಿತರಿಗೂ ಇದೇ ಧೋರಣೆ ಇದೆ. ಅದಕ್ಕೆ ಕಾರಣ– ಜೀವನದ ಬಗ್ಗೆ ದುಷ್ಟ ಕಲ್ಪನೆ, ಜೀವನವೆಂದರೆ ಜಗಳ ಎಂದು ತಿಳಿದಿದ್ದಾರೆ. ಈಸೋಪನ ನೀತಿಕಥೆಗಳಲ್ಲಿ ಅರಸಿಕ ಎನಿಸಿಕೊಂಡರೂ ಮರ್ಮಗ್ರಾಹಿಯಾದ ಕೋಳಿಯೊಂದು ಬರುತ್ತದೆ. ಅದು ಮುತ್ತನ್ನು ತಳ್ಳಿಹಾಕಿ ಜೋಳದ ಕಾಳನ್ನೇ ಆರಿಸಿಕೊಂಡಿತು. ಆ ಕೋಳಿಯಿಂದ ಪಾಠ ಕಲಿತರೆ ಎಲ್ಲಾ ಜಗಳವೂ ಮಾಯವಾಗುತ್ತದೆ, ಬಾಳಿನಲ್ಲಿ ಸಹಕಾರ ಬರುತ್ತದೆ. 'ಕೋತಿ ಕೈಯಲ್ಲಿ ಮಾಣಿಕ್ಯ' ಎಂಬ ಗಾದೆ ರಚಿಸಿದವನು ಮನುಷ್ಯನ ಪೂರ್ವಜರ ಬಗ್ಗೆ ಡಾರ್ವಿನ್ನನ ಸಿದ್ಧಾಂತವನ್ನು ಒಪ್ಪಿದ. ಹನುಮಂತನ ಕೈಯಲ್ಲಿ ಮುತ್ತಿನ ಹಾರದ ಕಥೆಯನ್ನು ರಚಿಸಿದವನು ಮನುಷ್ಯತ್ವಕ್ಕೆ ಗೌರವ ಕೊಟ್ಟ'

ಬಾಳು ಭಯಾನಕ ವಸ್ತು, ಬರೀ ಜಗಳ ಎಂದಾದರೆ ಅದರಲ್ಲಿ ಹುಡುಗರನ್ನು ನೂಕುವುದೇಕೆ, ನಾವಾದರೂ ಹೋಗುವುದೇಕೆ? ಹಾಗಲ್ಲದೆ ಬಾಳಬೇಕಾದ ವಸ್ತುವೆಂದರೆ ಅದರಲ್ಲಿ ಹುಡುಗರನ್ನು ಅವಶ್ಯವಾಗಿ ಸೇರಿಸೋಣ. ಸೇರಿಸದಿದ್ದರೆ ಅವರಿಗೆ ಶಿಕ್ಷಣ ಸಿಗದು. ಭಗವದ್ಗೀತೆಯನ್ನು ಕುರುಕ್ಷೇತ್ರದಲ್ಲಿ ಹೇಳಿದಂತೆ ಶಿಕ್ಷಣವನ್ನು ಜೀವನ ಕ್ಷೇತ್ರದಲ್ಲಿ ಕೊಡಬೇಕು, ಕೊಡಬಹುದು. ಕೊಡಬಹುದು ಎಂಬುದೂ ಸರಿಯಲ್ಲ, ಜೀವನ ಕ್ಷೇತ್ರದಲ್ಲಿ ಸಿಗಬಹುದು.

ಪ್ರತ್ಯಕ್ಷ ಕರ್ತವ್ಯ ಮಾಡುವಾಗ ಅರ್ಜುನನ ಇದಿರಿಗೆ ಪ್ರಶ್ನೆ ಉದ್ಭವಿಸಿತು. ಅದಕ್ಕೆ ಉತ್ತರ ಕೊಡಲು ಭಗವದ್ಗೀತೆ ನಿರ್ಮಿತವಾಯಿತು. ಇದರ ಹೆಸರೇ ಶಿಕ್ಷಣ. ಹುಡುಗರು ಹೊಲದಲ್ಲಿ ಕೆಲಸ ಮಾಡಲಿ. ಅಲ್ಲಿ ಯಾವುದಾದರೂ ಪ್ರಶ್ನೆ ಹುಟ್ಟಿದರೆ ಅದಕ್ಕೆ ಉತ್ತರ ಕೊಡಲು ಸೃಷ್ಟಿಶಾಸ್ತ್ರ ಅಥವಾ ಪದಾರ್ಥ ವಿಜ್ಞಾನದ, ಯಾವುದು ಅಗತ್ಯವಾದರೆ ಅದರ, ಜ್ಞಾನವನ್ನು ಮಾಡಿಕೊಡಿ. ಇದು ನಿಜವಾದ ಶಿಕ್ಷಣವಾದೀತು. ಹುಡುಗರು ಅಡಿಗೆ ಮಾಡಲಿ. ಅಗತ್ಯವಾದಲ್ಲಿ ಆಗ ರಸಾಯನ ಶಾಸ್ತ್ರವನ್ನು ಕಲಿಸಿ. ಮುಖ್ಯ ಮಾತು, ಅವರು ಬಾಳನ್ನು 'ಬಾಳಲಿ, ಬದುಕಲಿ'. ವ್ಯವಹಾರದಲ್ಲಿ ಕೆಲಸ ಮಾಡುವವನಿಗೂ ಶಿಕ್ಷಣ ಸಿಗುತ್ತಲೇ ಇರುತ್ತದೆ. ಹಾಗೆಯೆ ಮಕ್ಕಳಿಗೂ ಸಿಗಲಿ. ಇಷ್ಟೇ ವ್ಯತ್ಯಾಸ. ಮಕ್ಕಳ ಪಕ್ಕದಲ್ಲಿ ಸಂದರ್ಭಾನುಸಾರ ಮಾರ್ಗದರ್ಶನ ಮಾಡುವ ಮನುಷ್ಯ ಇರಬೇಕು. ಈ ಮನುಷ್ಯ 'ಕಲಿಸುವವ'ನಾಗಿ 'ನಿಯುಕ್ತ'ನಾಗಬಾರದು. ಅವನೂ ಬಾಳನ್ನು ಬಾಳುವವನಾಗಬೇಕು, ವ್ಯವಹಾರದಲ್ಲಿ ಮನುಷ್ಯ ಬಾಳುವಂತೆ. ಭೇದವಿಷ್ಟೇ 'ಶಿಕ್ಷಕ'ರೆನಿಸಿಕೊಳ್ಳುವ ಇವರ ಬಾಳು ವಿಚಾರಮಯವಾಗಿದ್ದೀತು, ಅದರೊಳಗಿನ ವಿಚಾರವನ್ನು ಸಮಯ ನೋಡಿ ಹುಡುಗರಿಗೆ ತಿಳಿಸುವ ಯೋಗ್ಯತೆ ಇವರಿಗಿದ್ದೀತು.

ಶಿಕ್ಷಕ ಎಂಬ ಸ್ವತಂತ್ರ ಕಸುಬು ಒಂದು ಅಗತ್ಯವಿಲ್ಲ. ಮನುಷ್ಯ ಕೋಟಿಯನ್ನು ಬಿಟ್ಟು ಹೊರಗಡೆ ವಿದ್ಯಾರ್ಥಿಯೆಂಬ ಪ್ರಾಣಿ ಯಾವುದೂ ಬೇಡ. ಏನು ಮಾಡುತ್ತೀಯೆ ಎಂದು ಕೇಳಿದರೆ, ಓದುತ್ತಿದ್ದೇನೆ ಅಥವಾ ಓದಿಸುತ್ತಿದ್ದೇನೆ ಎಂಬ ಉತ್ತರಗಳೂ ಅಗತ್ಯವಲ್ಲ. ಹೊಲ ಮಾಡುತ್ತೇನೆ, ನೇಯುತ್ತೇನೆ ಎಂದು ಶುದ್ಧ ಕಸುಬು ಹೇಳಬೇಕು. ಅಥವಾ ವ್ಯವಹಾರ ಮಾಡುತ್ತೇನೆ ಎನ್ನಲಿ. ಅಂತೂ

ಬಾಳಿನೊಳಗಿಂದ ಬರಬೇಕು ಉತ್ತರ.

ರಾಮ-ಲಕ್ಷ್ಮಣರಂಥ ವಿದ್ಯಾರ್ಥಿಗಳು, ವಿಶ್ವಾಮಿತ್ರನಂಥ ಗುರು, ಈ ಉದಾಹರಣೆ ತೆಗೆದುಕೊಳ್ಳಿ. ವಿಶ್ವಾಮಿತ್ರ ಯಜ್ಞ ಮಾಡುತ್ತಿದ್ದ. ಅದರ ರಕ್ಷಣೆಗಾಗಿ ಹುಡುಗರನ್ನು ಕಳಿಸೆಂದು ದಶರಥನನ್ನು ಬೇಡಿದ. ಆ ಕೆಲಸಕ್ಕಾಗಿ ದಶರಥ ಮಕ್ಕಳನ್ನು ಕಳಿಸಿದ, ಆ ಹುಡುಗರಲ್ಲೂ ನಾವು ಯಜ್ಞ ರಕ್ಷಣೆಗಾಗಿ ಹೋಗುತ್ತಿದ್ದೇವೆ ಎಂಬ ಹೊಣೆಗಾರಿಕೆಯಿತ್ತು. ಅದರಲ್ಲಿ ಅವರಿಗೆ ಅಪೂರ್ವ ಶಿಕ್ಷಣ ದೊರೆಯಿತು. ಆದರೆ ರಾಮ ಲಕ್ಷ್ಮಣರು ಏನು ಮಾಡಿದರು ಎಂದರೆ ಯಜ್ಞ ರಕ್ಷಣೆ ಮಾಡಿದರು ಎನ್ನಬೇಕಲ್ಲವೇ, ಅವರು ಶಿಕ್ಷಣ ಪಡೆದರು ಎನ್ನುವುದಿಲ್ಲವಲ್ಲ. ಆದರೆ ಅವರಿಗೆ ಸಿಗಬೇಕಾಗಿದ್ದ ಶಿಕ್ಷಣ ಸಿಕ್ಕಿತು.

ಕರ್ತವ್ಯ ಕರ್ಮದ ಆನುಷಂಗಿಕ ಫಲ ಶಿಕ್ಷಣ. ಕರ್ತವ್ಯ ಮಾಡುವವನಿಗೆ ತಿಳಿದೋ ತಿಳಿಯದಯೋ ಅದು ಸಿಗುತ್ತದೆ. ಹುಡುಗರಿಗೂ ಅದೇ ರೀತಿ ಸಿಗಬೇಕು. ಉಳಿದವರಿಗೆ ಒಂದು ಶಿಕ್ಷಣ ಸಿಗುತ್ತದೆ. ಚಿಕ್ಕಮಕ್ಕಳಿಗೆ ಅಷ್ಟು ಶಕ್ತಿಯಿಲ್ಲ. ಆದುದರಿಂದ ಅವರಿಗೆ ಹೆಚ್ಚು ಪೆಟ್ಟು ಬೀಳದಂತೆ, ಮೆಲ್ಲ ಮೆಲ್ಲನೆ ಅವರು ಸ್ವಾವಲಂಬಿಗಳಾಗುವಂತೆ ಅವರ ಸುತ್ತ ವಾತಾವರಣವನ್ನು ಕಲ್ಪಿಸಬೇಕು. ಇಂಥ ಯೋಜನೆ ಮಾಡಬೇಕು. ಶಿಕ್ಷಣ ಒಂದು ಫಲ, 'ಮಾ ಫಲೇಷು ಕದಾಚನ' ಎಂಬ ಮಾತು ಈ ಫಲಕ್ಕೂ ಉಂಟು.

ಶಿಕ್ಷಣಕ್ಕಾಗಿಯೇ ಒಂದು ಕರ್ಮ ಮಾಡುವುದು ಸಕಾಮವೇ. ಅದರಲ್ಲಿ 'ಇದಮದ್ ಮಯಾ ಲಬ್ದಂ'-ಇದು ನನಗೆ ಸಿಕ್ಕಿತು, 'ಇದಂ ಪ್ರಾಪ್ಸ್ಯೇ'-ನಾಳೆ ಅದನ್ನು ಪಡೆಯುತ್ತೇನೆ ಎಂಬ ವಾಸನೆಯಿದೆ. ಈ ಬಗೆಯ 'ಶಿಕ್ಷಣ ಮೋಹ'ದಿಂದ ಪಾರಾಗಲೇಬೇಕು. ಈ ಮೋಹದಿಂದ ಪಾರಾದವನಿಗೆ ಸರ್ವೋತ್ತಮ ಶಿಕ್ಷಣ ಸಿಕ್ಕಿತು ಎಂದು ತಿಳಿಯಬೇಕು. ತಾಯಿಗೆ ರೋಗ ಬಂದರೆ, ಆಕೆಯ ಸೇವೆ ಮಾಡುವಾಗ ನನಗೆ ಬೇಕಾದಷ್ಟು ಶಿಕ್ಷಣ ಸಿಗುತ್ತದೆ. ಈ ಶಿಕ್ಷಣ ಲೋಭದಿಂದ ನಾನು ತಾಯಿಯ ಸೇವೆ ಮಾಡಲಾಗದು. ಅದು ನನ್ನ ಪವಿತ್ರ ಕರ್ತವ್ಯ ಎಂಬ ಭಾವನೆಯಿಂದ ತಾಯಿಯ ಸೇವೆ ಮಾಡಬೇಕು. ಅಥವಾ ತಾಯಿಯು ಹಾಸಿಗೆ ಹಿಡಿದಿದ್ದಾಳೆ, ಆಕೆಯ ಸೇವೆ ಮಾಡುತ್ತಾ ಕೂತರೆ ನಾನು 'ಶಿಕ್ಷಣ'ವೆದು ತಿಳಿದುಕೊಂಡುದು ತಪ್ಪಿಹೋಗುತ್ತದೆಯಲ್ಲ ಎಂಬ ಅಂಜಿಕೆಯಿಂದ ತಾಯಿಯ ಸೇವೆಯನ್ನು ತಪ್ಪಿಸಕೂಡದು.

ಪ್ರಾಥಮಿಕ ಮಹತ್ವದ ಜೀವನೋಪಯೋಗಿ ಪರಿಶ್ರಮಕ್ಕೆ ಶಿಕ್ಷಣದಲ್ಲಿ ಸ್ಥಾನ ಸಿಗಬೇಕು ಎನ್ನುವ ಶಿಕ್ಷಣಪಂಡಿತರು ಕೆಲವರು, ಈ ಪರಿಶ್ರಮ ಶಿಕ್ಷಣದ ದೃಷ್ಟಿಯಿಂದ ನಡೆಯಬೇಕು, 'ಹೊಟ್ಟೆ ಹೊರೆಯಲು' ಅಲ್ಲ ಎನ್ನುತ್ತಾರೆ. 'ಹೊಟ್ಟೆ ಹೊರೆಯುವುದಕ್ಕೆ' ಈಗ ವಿಕೃತ ಅರ್ಥ ಬಂದಿದೆ. ಅದನ್ನು ಕಂಡು ಅಂಜಿ ಅವರು ಹೀಗೆ ಹೇಳುತ್ತಾರೆ. ಅಷ್ಟರ ಮಟ್ಟಿಗೆ ಅದು ಸರಿ. ಆದರೆ ಮನುಷ್ಯನಿಗೆ 'ಹೊಟ್ಟೆ'ಯನ್ನು ಕೊಟ್ಟಿದ್ದರಲ್ಲಿ ದೇವರಿಗೂ ಏನೋ ಉದ್ದೇಶವಿರಬೇಕು. ಪ್ರಮಾಣಿಕತೆಯಿಂದ ಹೊಟ್ಟೆಹೊರೆಯುವುದನ್ನು ಮನುಷ್ಯ ಸಾಧಿಸಿದರೆ, ಸಮಾಜದ ದುಃಖದಲ್ಲಿಯ ಹೆಚ್ಚು ಭಾಗವೂ, ಪಾತಕವೂ ಅಳಿದೀತು. ಆದ್ದರಿಂದಲೇ- 'ಯೋ ಅರ್ಥಶುಚಿಃ ಸ ಹಿ ಶುಚಿಃ' ಎಂದು ಹೇಳಿದ್ದಾನೆ ಮನು. ಆರ್ಥಿಕ ದೃಷ್ಟಿಯಿಂದ ಪವಿತ್ರವಾದುದೇ ಪವಿತ್ರ. 'ಸರ್ವೇಷಾಂ ಅವಿರೋಧೇನ'-ಹೀಗೆ ಬದುಕಬೇಕೆಂಬುದರಲ್ಲಿ ಶಿಕ್ಷಣವೆಲ್ಲವೂ

ಅಡಕವಾಗಿದೆ. ಅವಿರೋಧ ವೃತ್ತಿಯಿಂದ ಶರೀರ ಯಾತ್ರೆ ನಡೆಸುವುದು ಮನುಷ್ಯನ ಪ್ರಥಮ ಕರ್ತವ್ಯ. ಈ ಕರ್ತವ್ಯ ಮಾಡುವುದರಿಂದಲೇ ಆಧ್ಯಾತ್ಮಿಕ ಉನ್ನತಿಯಾಗುತ್ತದೆ. ಇದರಿಂದ ಶರೀರ ಯಾತ್ರೆಗೆ ಉಪಯುಕ್ತವಾದ ಪರಿಶ್ರಮ ಮಾಡಲಿಕ್ಕೇ ಶಾಸ್ತ್ರಕಾರರು 'ಯಜ್ಞ' ಎಂಬ ಹೆಸರನ್ನಿಟ್ಟಿದ್ದಾರೆ. ಇದು 'ಉದರಂಭರಣವಲ್ಲ, ಯಜ್ಞ ಕರ್ಮವೆಂದು ತಿಳಿ' ಎಂದು ವಾಮನ ಪಂಡಿತರ ಪ್ರಸಿದ್ಧ ವಚನವಿದೆ. ಶರೀರ ಯಾತ್ರೆಗೆ ನಾನು ಪರಿಶ್ರಮ ಮಾಡುತ್ತೇನೆ ಎಂಬ ಭಾವನೆ ಸರಿಯೇ ಸರಿ. ಶರೀರ ಯಾತ್ರೆಯೆಂದರೆ ಈ ಮೂರೂವರೆ ಮೊಳದ ದೇಹದ್ದಲ್ಲ. ಸಮಾಜದ ಶರೀರ ಯಾತ್ರೆಯೆಂಬ ಉದಾರ ಅರ್ಥವನ್ನು ಮನಸ್ಸಿನಲ್ಲಿ ನೆಡಬೇಕು. ನನ್ನ ಶರೀರ ಯಾತ್ರೆ ಎಂದರೆ ಸಮಾಜ ಸೇವೆ, ಆದುದರಿಂದ ಈಶ್ವರ ಪೂಜೆ, ಇಷ್ಟು ಸಮೀಕರಣ ದೃಢವಾಗಬೇಕು. ಈ ಈಶ್ವರ ಸೇವೆಯಲ್ಲಿ ನನ್ನ ದೇಹವನ್ನು ಸವೆಸುವುದು ನನ್ನ ಕರ್ತವ್ಯ, ಅದನ್ನು ನಾನು ಮಾಡಬೇಕು, ಈ ಭಾವನೆ ಪ್ರತಿಯೊಬ್ಬನಲ್ಲೂ ಇರಬೇಕು.

ಆದುದರಿಂದ ಈ ಭಾವನೆ ಚಿಕ್ಕ ಮಕ್ಕಳಲ್ಲೂ ಇರಬೇಕು. ಅದಕ್ಕಾಗಿ ಅವರಿಗೆ ಯಥಾಶಕ್ತಿ ಜೀವನದಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಬೇಕು. ಜೀವನವನ್ನು ಮುಖ್ಯ ಕೇಂದ್ರವನ್ನಾಗಿ ಮಾಡಿ, ಅದರ ಸುತ್ತಮುತ್ತಲೂ ಅವಶ್ಯಕತಾನುಸಾರ ಇಡೀ ಶಿಕ್ಷಣವನ್ನು ರಚಿಸಬೇಕು.

ಹೀಗಾದರೆ ಬಾಳು ಎರಡು ಹೋಳಾಗದು. ಜೀವನದ ಜವಾಬ್ದಾರಿ ಏಕಾಏಕಿ ಮೇಲೆ ಬಿದ್ದರೆ ಆಗುವ ಅಡಚಣೆ ಆಗಲಾರದು. ತಿಳಿಯದಂತೆಯೆ ಶಿಕ್ಷಣ ಸಿಗುತ್ತಿದ್ದೀತು. ಅಂದರೆ 'ಶಿಕ್ಷಣ–ಮೋಹ' ಅಂಟದು, ನಿಷ್ಕಾಮ ಕರ್ಮ–ಪ್ರವೃತ್ತಿ ಉಂಟಾದೀತು.

ಸಂತಾಪ

ನರಸಿಂಹ ದಾಬಡೆ ಇನ್ನಿಲ್ಲವಾದರು. ಕರ್ನಾಟಕದಲ್ಲಿಯ ಸ್ವಾತಂತ್ರ್ಯ ಚಳುವಳಿ ಮತ್ತು ಖಾದಿ ಕ್ಷೇತ್ರದಲ್ಲಿ ತಮ್ಮ ಇಡೀ ಜೀವನವನ್ನು ಅರ್ಪಿಸಿಕೊಂಡಿದ್ದ ದಾಬಡೆಯವರು ತಮ್ಮ 96ನೇ ವರ್ಷದಲ್ಲಿ ಭಾರತದ ಸ್ವಾತಂತ್ರ್ಯ ತಿಂಗಳಾದ ಆಗಸ್ಟ್ 8ರಂದು ಮಹಾತ್ಮಾ ಗಾಂಧೀಜಿಯವರ ಪಾದವನ್ನು ಸೇರಿದರು. ತಮ್ಮ 19ನೇ ವರ್ಷದ ಪ್ರಾಯದಿಂದ 96ರ ಇಳಿವಯಸ್ಸಿನವರೆಗೂ ಗಾಂಧೀಜಿಯವರ ಆಣತಿಯಂತೆ ರಚನಾತ್ಮಕ ಕಾರ್ಯಕ್ರಮಗಳ ದಿನಕರನಂತಿರುವ ಖಾದಿ ಕ್ಷೇತ್ರಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದರು. ಗಾಂಧೀಜಿಯವರು ರಾಮ ನಾಮ ಹೇಳುತ್ತಲೇ ಹುತಾತ್ಮರಾದಂತೆ ನರಸಿಂಹ ದಾಬಡೆಯವರು ಖಾದಿ ಮಂತ್ರವನ್ನು ಜಪಿಸುತ್ತ ಅಮರರಾದರು. ದಾಬಡೆಯವರಿಗೆ 'ಜನಪದ ವಿಚಾರ'ವು ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

* * *

ಕಿ.ರಂ. ನಾಗರಾಜ ಕನ್ನಡ ಸಾಹಿತ್ಯದ ಸುಪ್ರಸಿದ್ಧ ವಿಮರ್ಶಕ. ಯುವ ಸಾಹಿತಿಗಳನ್ನು ಪ್ರೋತ್ಸಾಹಿಸುತ್ತಿದ್ದ ಕಿ. ರಂ. ನಿಧನಕ್ಕೆ ಜನಪದ ವಿಚಾರವು ತನ್ನ ಸಂತಾಪ ಸೂಚಿಸುತ್ತದೆ.

ಬಯಲೆಂಬ ಶಾಲೆ

– *ಸತ್ಯಕಾಮ*

ಬದುಕು ಒಂದು ಅದ್ಭುತ ವಸ್ತು.
ಕಾಲ ತುಂಬ ವಿಚಿತ್ರ ಸಂಘಟನೆ.
ಕಾಲದ ಬಯಲಿನಲ್ಲಿ ತಾನು ಕಟ್ಟಿದ ಕಟ್ಟಡಕ್ಕೆ ಬದುಕು ಅನ್ನುತ್ತಾರೆ.
ನಾನು ಮನೆ ಬಿಡುವಾಗ ಇಪ್ಪತ್ತು.
ಮೈ ಬಿಡುವ ಈ ಹೊತ್ತಿನಲ್ಲಿ ನನಗೆ ನಾಲ್ಕಿಪ್ಪತ್ತು!
ಎಲ್ಲರ ಹಾಗೆ ನನ್ನನ್ನು ಹೆತ್ತವನೂ ಮನುಷ್ಯ.

ಮನುಷ್ಯನಾದವನಿಗೆ ದೊಡ್ಡದನ್ನು ಚಿಕ್ಕದು ಮಾಡುವುದೇ ಚಟ. ನನ್ನ ತಂದೆ ನಾನು ಅದರಲ್ಲಿ ಬದುಕಲಿ ಎಂದು ಒಂದು ಬಯಲನ್ನು ಕೊರೆದು ಅದರಲ್ಲಿ ಗಟ್ಟಿಗೋಡೆ ಕಟ್ಟಿದ. ಭದ್ರ ಬಾಗಿಲು ಮಾಡಿಸಿದ. ಕೇಳಿದರೆ ಹೇಳುತ್ತಿದ್ದ. "ಮಕ್ಕಳು ಬದುಕಲು ಬೇಕಲ್ಲ". ಮಕ್ಕಳ ಈ ಚಿಂತೆಯೆ ಅವರಿಗೆ ಹೆತ್ತವರು ಒದಗಿಸುವ ಅಭದ್ರತೆ. ತನ್ನ ಮನೆ ತಾನು ನಿರ್ಮಿಸಿಕೊಳ್ಳದವ ಹುಟ್ಟಬಾರದು. ಮೈಯೇ ನಿಜವಾದ ತನ್ನ ಮನೆ.

ಇಪ್ಪತ್ತು ಅಂದರೆ ನನ್ನ ಮುಖ ರೋಮಾಂಚಿತವಾಗುವ ಹೊತ್ತು. ನನ್ನ ಲಿಂಗವನ್ನು ನನಗೆ ತಿಳಿಸುವ ದಿನಗಳು. ನನಗೆ ಅಸ್ಪಷ್ಟವಾದ ಒಂದು ತಿಳುವಳಿಕೆಯಿತ್ತು. ತಂದೆ ಕೊಟ್ಟದ್ದು ಮನೆ ಅಲ್ಲ. ತನು ತೊಟ್ಟದ್ದು ಮಾತ್ರ ಮನೆ. ತಂದೆ ನನ್ನನ್ನು ಇಟ್ಟ ಮನೆ ಬಿಟ್ಟೆ. ಮನೆ ಎಂದರೆ ನಾನು ಇದ್ದಲ್ಲಿ ಇರಬೇಕು. ನಾನು ಎಲ್ಲಿ ಇಲ್ಲವೋ ಅಲ್ಲಿ ಇರುವುದು ಹೇಗೆ?

ನಾವು, ನೀವು ಸಾಮಾನ್ಯವಾಗಿ ವಾಸಕ್ಕೆ ಕಟ್ಟಿದ ಬಂಧನದ ಗುರುತಿಗೆ ಮಾತ್ರ ಮನೆ ಎನ್ನುತ್ತ ಬಂದೆವು. ನಾವು ಬದುಕುವ ಜಾಗೆಯನ್ನು ಇನ್ನೊಬ್ಬರು ಕಟ್ಟಿಕೊಡಬೇಕು ಎನ್ನುವಷ್ಟು ಪರಾಧೀನರು ನಾವು. ಪಾರತಂತ್ರ್ಯವನ್ನೆ ಪಿತ್ರಾರ್ಜಿತ ಎಂಬ ಒಣ ಅಭಿಮಾನದಿಂದ ಅನುಭವಿಸುತ್ತೇವೆ. ಪಾರತಂತ್ರ್ಯವೆ ನಮ್ಮ ಬೆಳವಣಿಗೆಯ ಶೈಲಿಯಾಗಿಬಿಟ್ಟಿದೆ. ನಿತ್ಯ ನನ್ನ ಸಹವಾಸದಲ್ಲಿರುವ ನನ್ನ ಮೈಯೊಡನೆ ಒಂದು ದಿನ ತಂದೆ ತಾಯಿ ಅಭಿಮಾನದಿಂದ ತೋಡಿದ ಗೋರಿಯಿಂದ ಹೊರಬಿದ್ದೆ.

ನಾನು ಮನೆಯಿಂದ ನನ್ನ ಮೈಯೊಡನೆ ಯಾಕೆ ಹೊರಬಿದ್ದೆ?

ನನ್ನ ಬಗ್ಗೆ ಅಭಿಮಾನದಿಂದ, ಅನಾದರದಿಂದ ಪ್ರಚೋದಿತರಾದವರನ್ನು ಕಾಡುವ ಪ್ರಶ್ನೆ. ಇದ್ದಷ್ಟೇ ಇರುವುದು ನನ್ನ ಜಾಯಮಾನಕ್ಕೆ ಒಗ್ಗದ ಮಾತು. ನಾನು ಎಷ್ಟು ಇರಬೇಕು ಇದು ನನ್ನ ಪ್ರಶ್ನೆಯೆ ಹೊರತು ನನ್ನನ್ನು ನೆಲಕ್ಕೆ ತಂದವರದಲ್ಲ. ನನ್ನ ತಂದೆ ಎಂಬುವವರು ನಾನು ಇಂಥವನಿರಬೇಕು ಎಂದು ನನ್ನನ್ನು ಸಂಕಲ್ಪಿಸಿ ನಿರ್ಮಿಸಿದವರೂ ಅಲ್ಲ. ಅವರು ತಮ್ಮ ಇರುವಿನ ಬಗ್ಗೆಯೂ ಅಷ್ಟೇ ಅಪಾರದರ್ಶಕ ತಿಳುವಳಿಕೆ ಇದ್ದವರೆ. ಅವರಿಗೆ ತಾನೊಂದು ಪಾಶವೀ ಸೃಷ್ಟಿ.

ನಾನು ಒಮ್ಮೆ ವಾಮದೇವನೆಂಬ ಒಬ್ಬ ಋಷಿಯ ಕತೆ ಕೇಳಿದ್ದೆ. ಅವನು

ತಾಯಿಯ ಹೊಟ್ಟೆಯಲ್ಲಿ ಕೆಲದಿನ ವಸತಿ ಇದ್ದ. ಹೊರಗೆ ಬರಲು ತುಡಿಯುತ್ತಿದ್ದ. ಹೊತ್ತಿಗೆ ಅದರದೇ ಅದ ಕಟ್ಟುಪಾಡು. ಮಗುವಿನ ಹುಟ್ಟಿನ ಬಗ್ಗೆ ಇರುವ ಅಜ್ಞಾನದ ಮುದ್ದೆಗೇ ತಾಯಿ ಎಂದು ಹೆಸರು. ವಾಮದೇವ ಹೊರಗೆ ಬರಬೇಕೆನ್ನುವ. ತಾಯಿ, ಅವಳ ಶರೀರದ ವ್ಯವಸ್ಥೆ, ಸಮಾಜ ಒಂದು ನಿಸರ್ಗದ ಹೆಸರಿನ ಕಟ್ಟಳೆಯಲ್ಲಿ, ಆತನನ್ನು ಹುಟ್ಟುವ ಮೊದಲೇ ಬಂಧನದಲ್ಲಿ ಇರಿಸಿತ್ತು. ಜೀವಕ್ಕೆ ಪಾರತಂತ್ರ್ಯ ಒಂದು ಅವಸ್ಥೆ. ಅನಿವಾರ್ಯವಾದ ಅಂತಿಮ ವ್ಯವಸ್ಥೆಯಲ್ಲ. ವಾಮದೇವ ತಾಯಿಯ ಹೊಟ್ಟೆಯನ್ನು ಬಗಿದು ಹೊರಬಂದ.

ಸ್ವಾತಂತ್ರ್ಯದ ಬಯಕೆಯಿಂದ ಹೊರಬಂದ, ಹೊರಗೂ ಅದನ್ನೇ ಬದುಕಿದ. ವಾಮದೇವನ ಕತೆ ಕೇಳುವುದರೊಳಗಾಗಿ ನಾನು ಹುಟ್ಟಿ ಆಗಿತ್ತು. ತಡವಾದರೂ ಬೇಕಾದುದನ್ನು ಬದುಕುವುದಕ್ಕಾಗಿ ಮನೆಯನ್ನು ಮೊದಲು ಬಿಡಬೇಕಾಯಿತು. ಗರ್ಭವೂ ಪಾರತಂತ್ರ್ಯ, ಮನೆ ಸ್ವಂತ ಎಂದು ಶ್ರಮಿಸುವುದು ಎಷ್ಟು ವಿಪರ್ಯಾಸ?

ನನಗೆ ಏನು ಬೇಕಾಗಿತ್ತು?

ದೊಡ್ಡದಾಗುವುದು ಸಾಕಾಗಿತ್ತು.

ಬಂಧನ, ಯದಲ್ಲಿ ಯಾರೂ ದೊಡ್ಡವರಾಗಿಲ್ಲ, ಆಗುವುದಿಲ್ಲ. ಇದು ಅತಿ ಸ್ಪಷ್ಟವಾಗಿತ್ತು. ಭಯದಲ್ಲಿ ಅಜ್ಞಾನ ಬದುಕುತ್ತದೆ. ಅಜ್ಞಾನದಲ್ಲಿ ಸಾವು ರಿಂಗಣಗುಣಿಯುತ್ತಿದೆ. ನನು ಸಾವ ನೀಗಲು ಮನೆ ಬಿಡಲಿಲ್ಲ, ಬಂಧನದಿಂದ ದೂರಾಗಬೇಕು, ಅಂದರೆ ಬಯಲು ಸಿಕ್ಕುತ್ತದೆ. ಬಯಲು ದೊಡ್ಡದಲ್ಲದೆ ಇನ್ನಾರಿಂದಲೂ ತುಂಬುವುದಿಲ್ಲ.

ಬದುಕಿಗೆ ನಾಲ್ಕು ಕಾಲು.

ಮೊದಲಿನ ಕಾಲು ಕಲಿಯಲು.

ನನ್ನ ಕಲಿಯುವ ದಿನಗಳು ಕಳೆದುಹೋದವು. ನಾನೇನೂ ಕಲಿಯಲಿಲ್ಲ. ನನ್ನ ಓರಿಗೆಯವರು ಓದಿದರು. ಅವರು ಕಲಿತದ್ದು ಅಂಜುವುದು ಹೇಗೆ ಎಂಬುದನ್ನೆ. ಇದ್ದ ಅಂಜಿಕೆ ಬಿಡುವುದು ಹೇಗೆ ಎಂದು ಓದಿನಿಂದ ಗೊತ್ತಾಗುತ್ತದೆ ಎಂದು ಶಾಲೆಗೆ ಹೋದೆ. ಅದು ಹೆಚ್ಚು ಅಂಜುವುದನ್ನು ಕಲಿಸುತ್ತದೆ. ಕಲಿತನವನ್ನಲ್ಲ. ಗೊತ್ತದ ಕೂಡಲೆ ನನ್ನ ಕಾಲು ಶಾಲೆಯಿಂದ ಹೊರಗೆ. ನಮಗೆ ಓದಿಸುವವರಿದ್ದರು. ಅವರಾದರು ಭೀತಿಯಿಲ್ಲದವರು ಇರಬೇಕಿತ್ತು. ಹೆಚ್ಚು ಅಂಜುವವರನ್ನೆ ಓದಿಸಲು ನಿಯಮಿಸುತ್ತಿದ್ದರು. ತಾನೆ ಅಂಜುವವನು ನಿರ್ಭಯತೆಯನ್ನು ಕಲಿಸಲಾರ.

ನಾನು ಬೇಡವೆಂದರೂ ಶಾಲೆಯಲ್ಲಿ ಅಳಿಸಿ ಹೋಗುವ ಅಕ್ಷರಗಳು ಎದೆಗೆ ಅಂಟಿಕೊಂಡುಬಿಟ್ಟಿತ್ತು. ಶಾಲೆ ಗುರುಕುಲವಲ್ಲ. ಶಿಕ್ಷಕರ ತುರುಮಂದಿ. ನಮಗೆ ಬೇಕಾದ್ದನ್ನು ಅವು ಎಮದೂ ಎರೆಯಲಿಲ್ಲ. ಶಿಕ್ಷಕ ತನಗೆ ಗೊತ್ತಿದ್ದನ್ನು ನಮ್ಮ ಮೇಲೆ ಹನಿಸಿ ನೆನೆಸಿದ. ಶಾಲೆಗೆ ಹೋದವ ಸ್ನಾನ ಮಾಡಿದ ನಿಷ್ಣಾತನಾಗಲಿಲ್ಲ.

ನೀರಿಗೆ ಹೆದರುವವನಿಗೆ ಈಜು ಬರುವುದಿಲ್ಲ.

ಬಯಲಿಗೆ ಬೀಳದವನಿಗೆ ದೊಡ್ಡದು ಗೊತ್ತಾಗುವುದಿಲ್ಲ.

ಏನೂ ಮುಚ್ಚಿಕೊಳ್ಳದವನೇ ಎಲ್ಲವನ್ನೂ ನೋಡುತ್ತಾನೆ.

ಕೋಲ್ಮಿಂಚು ಸೆಳೆದರೆ ಕಾಲಿಗೆ ಬುದ್ಧಿ ಹೇಳಿ ಮನೆ ಸೇರುತ್ತೇವೆ.

ಗುಡುಗಿ ಸದ್ದು ಮಾಡಿದಾಗ ಮನೆಯ ಕದ ಎಳೆದು ಹಾಸಿಗೆಯಲ್ಲಿ

ಹೊರಳುತ್ತೇವೆ. ಮಳೆ ಹುಯ್ಯುವ ಕಾಲದಲ್ಲಿ ಬಯಲಿಗೆ ಬಂದು ನೆನೆಯುವ ಹಿಗ್ಗು ಕಿಟಕಿಯ ಗಾಜಿನಲ್ಲಿ, 'ಅಬ್ಬಾ! ಏನು ಮಳೆ' ಎಂದು ಚಕಿತರಾಗುವವರಿಗೆ ತಿಳಿದೀತೆ? ನಾನು ಮನೆ ಬಿಟ್ಟೆ, ಹೆಜ್ಜೆ ಹೆಜ್ಜೆಗೂ ಹಿಗ್ಗುತ್ತ ಹೋದೆ.

ನನ್ನ ತಲೆಯಲ್ಲಿ ಒಂದು ಕ್ರಿಮಿ ಕೊರೆಯುತ್ತಿತ್ತು.

ಒಂದು ತಿಳಿದರೆ ಎಲ್ಲ ತಿಳಿಯುತ್ತದೆ.

ಗೊತ್ತಿಲ್ಲ, ತಿಳಿಯಲೇ ಬೇಕು. ಅಂತಹ ಒಂದು ತಿಳುವಳಿಕೆ ಇದೆ. ಎತ್ತರದಲ್ಲಿ ಇದ್ದುದು ಎಲ್ಲರಿಗೂ ಕಾಣುತ್ತದೆ. ನಾನು ಎತ್ತರಕ್ಕೆ ಏರಬೇಕು. ನನ್ನ ತಿಳುವಳಿಕೆ ಎತ್ತರವಾಗಬೇಕು. ಅದಕ್ಕಿಂತ ಎತ್ತರವಾದದ್ದು ಇಲ್ಲದಿದ್ದರೆ ಅದರಿಂದ ಎಲ್ಲವೂ ತಿಳಿಯುತ್ತದೆ.

ನಾನು ಓದುವಷ್ಟು ಶಾಲೆಯ ಸೂತಕದಿಂದ ಅಶೌಚ್ಯ ಹೊಂದಿದ್ದೆ.

ನಾನು ಶಾಲೆ ಬಿಟ್ಟು ಬಯಲಿಗೆ ಬಂದದ್ದರಿಂದ ನನಗೆ ಬೇಕಾದುದನ್ನು ಓದಿದೆ. ಬೇಡವಾದುದನ್ನು ಬಿಟ್ಟೆ. ನನಗೆ ತಿಳಿಯಿತು; ಅನ್ನವು ಬದುಕಲು ಬೇಕು. ತಿಂದ ಅನ್ನ ಎಲ್ಲವೂ ಮೈಗೆ ಹತ್ತುವುದಿಲ್ಲ. ಕೆಲವು ರಕ್ತ, ಕೆಲವು ಭಾಗ ವೀರ್ಯ, ಕೆಲವು ಭಾಗ ಮಾಂಸ, ಮೂತ್ರ, ಮಲ ಏನೇನೋ ಆಗುತ್ತದೆ. ಓದಿದ್ದರಲ್ಲಿ ವೀರ್ಯವಾಗುವ ಭಾಗವೆಷ್ಟು? ಮಲವಾಗಿ ಮತ್ತೆ ಹೊರಗೆ ಹೋಗುತ್ತದೆ.

ನಾನು ಓದಿದ್ದು ಸ್ವಲ್ಪ.

ತಿಳಿದದ್ದು ಅಲ್ಪ.

ಉಳಿದದ್ದು ಅತ್ಯಲ್ಪ.

ನಾನು ಬರಿ ಓದಿದ ತಪ್ಪು ಮಾಡಲಿಲ್ಲ. ಓದಿದ್ದು ತಪ್ಪೂ ಅಲ್ಲ.

ಮಂಗ ಕೂಡ ಬಾಳೆಯ ತೋಟದೊಳಗಿದ್ದಾಗ ಬಾಳೆಹಣ್ಣನ್ನು ಸುಲಿದು ಸಿಪ್ಪೆಯನ್ನು ಎಸೆದು ಹಣ್ಣನ್ನು ಮಾತ್ರ ತಿನ್ನುತ್ತದೆ. ಸಿಪ್ಪೆ ತಿಂದು ಹಣ್ಣು ಎಸೆಯುವುದು ಮಂಗಚೇಷ್ಟೆಯೆ!

ನಾನು ಬರಿ ಓದಲಿಲ್ಲ ಬರೆದೆ ಕೂಡ.

ಅದು ಅಷ್ಟೆ! ಬರೆದದ್ದೆಲ್ಲ ನಾನು ಅರಿತದ್ದು ಎಂದೇನಲ್ಲ.

ಅರಿವಿನ ನೆರೆಯೂರಿನದು. ಬಹಳಷ್ಟು ಸಲ ಪರ ಊರಿನದೆ.

ನನ್ನ ಓದಿನಲ್ಲಿ ಅದನ್ನು ಬರೆದವನನ್ನು ನನ್ನೊಳಗೆ ಬಿಡಲಿಲ್ಲ.

ನನ್ನ ಬರಹದಲ್ಲೂ ನಾನು ಪೂರ್ತಿ ಒಳಸೇರಲಿಲ್ಲ. ಅರ್ಚಕನಾದ ಓದುಗನ ತಪೋಬಲದಿಂದ ಆ ಬಳಿಕ ಅವನೊಳಗೆ ಸೇರಿಕೊಂಡೆ. ಅರ್ಚನೆಯೂ ಒಂದು ಬಗೆಯ ಗಾಳಿ. ಅದು ಹೂವಿನ ಮೇಲಿಂದ ಬಂದರೆ ಗಂಧ. ಚರಂಡಿಯ ಮೇಲಿಂದ ಸುಳಿದರೆ ಮೂಗಿಗೆ ಬಟ್ಟೆ! ಅದು ನನ್ನ ಬದುಕಿನ ಬಟ್ಟೆಯಲ್ಲ. ನನ್ನನ್ನು ನಿರ್ಮಿಸಿದ್ದು ನನ್ನ ಓದು ಅಲ್ಲ. ಬರಹವೂ.

ನನಗೆ ಯವ ಭಾಷೆಯ ಮೇಲೂ ಪ್ರಭುತ್ವವಿಲ್ಲ.

ಆದರೆ ನನ್ನ ಎಲ್ಲ ಮಾತೂ ನನ್ನ 'ಸ್ವ'ಕ್ಕೆ ಒಳಗಾಗಿದೆ.

ಎಷ್ಟೋ ದಿನಗಳ ನಂತರ ನಾನು ಮುಂಡಕವನ್ನು ಓದಿದೆ.

ಅಂಗಿರಸ ಎಂಬುವನು ತುಂಬಿದ ಕೊಡ.

ಒಂದು ದಿನ ತಿಳಿವನ್ನು ಬಯಸಿದ ಶೌನಕ ಅವನ ಹತ್ತಿರ ಬಂದು ಕೇಳಿದ.

"ಕಸ್ಮಿನ್ನು ಭಗವೋ ವಿಜ್ಞಾತೇ ಸರ್ವಮಿದಂ ವಿಜ್ಞಾನಂ ಭವತಿ?"

"ಅರಿವು ಬೇಕಾದವನಿಗೆ ಒಂದು ಸಾಲದು, ಎರಡು ಬೇಕು"

ಅಂಗಿರಸ ಹೇಳಿದ ಮಾತಿನಲ್ಲಿ ಒಂದು ಸತ್ಯ ಇದೆ. ಬದುಕಿಗೆ ಎರಡು ಮೈಗಳಿವೆ. ಒಂದರಿಂದ ಇದ್ದುದು ತಿಳಿಯುತ್ತದೆ. ಇನ್ನೊಂದರಿಂದ ಇರುವುದೆಲ್ಲವೂ ಗೊತ್ತಾಗುತ್ತದೆ. ಕಾಲ ತುಂಬ ಓಡಿದೆ. ಈಗ ಒಂದನ್ನು ಅರಿತರೆ ಇದ್ದುದೂ, ಇರುವುದೂ ಎಲ್ಲ ತಿಳಿಯುತ್ತದೆ.

ಅಂಗಿರಸರು ದೊಡ್ಡ ಋಷಿಗಳು.

ಕಂಡದ್ದನ್ನು ತೋರಿಸಿದರು.

ಶೌನಕರೂ ದೊಡ್ಡವರೇ! ಅವರ ಕಣ್ಣಿಗೆ ತೋರದ್ದು ಉಳಿದೇ ಇಲ್ಲ. ಅವರು ಬೆಳಕನ್ನು ಹುಡುಕಿಕೊಂಡು, ಕಂಡು ವಂದ್ಯರಾದರು. ಬೆಳಕೇ ಕುರುಡರನ್ನು ಅರಸಿ ಬರುವುದು ಅಪರೂಪವಾದರೂ ಸತ್ಯವೆ!

ಔಷಧಿಯಲ್ಲದ ಸಸ್ಯ ಇಲ್ಲ.

ಮಂತ್ರವಲ್ಲದ ಅಕ್ಷರ ಇಲ್ಲ.

ಹಾಗೆಯೆ ಋಷಿ ಅಲ್ಲದ ವ್ಯಕ್ತಿಯೂ ಇರಲಾರ.

ಶೋಧನೆಯಾಗಬೇಕು ವಿನಿಯೋಗವಾಗಬೇಕು.

(ಸಾಭಾರ : 'ಸ್ವತಂತ್ರ' ಪುಸ್ತಕ)

ಸನ್ಮಾನ್ಯರಿಂದ...

ಸುಪ್ರಸಿದ್ಧ ಕಾದಂಬರಿಕಾರರಾದ ಡಾ.ಎಸ್. ಎಲ್. ಭೈರಪ್ಪನವರ 'ಕವಲು' ಕಾದಂಬರಿ ಕನ್ನಡದ ಕಂಪನ್ನು ದೇಶ ವಿದೇಶಗಳಲ್ಲಿ ಬೀರುತ್ತಾ ಪುಸ್ತಕ ಬಿಡುಗಡೆಯಾದಾಗಿನಿಂದ ಕೇವಲ ನಲವತ್ತು ದಿವಸಗಳಲ್ಲಿ ಎಂಟು ಮುದ್ರಣಗಳನ್ನು ಕಂಡು ಸಹೃದಯರಾದ ಕನ್ನಡಿಗರು ಬಹಳ ಹೆಮ್ಮೆ ಪಡುವಂತೆ ಮಾಡಿದೆ. ಡಾ. ಎಸ್. ಎಲ್. ಭೈರಪ್ಪನವರನ್ನು ಸದಾ ವಿರೋಧಿಸುವವರು ಕೂಡ 'ಕವಲು' ಕಾದಂಬರಿಯನ್ನು ಓದಿ 'ಓಹ್, ಎಷ್ಟು ಚೆನ್ನಾಗಿದೆ. ಆಧುನಿಕ ಸಮಾಜಕ್ಕೆ ಹಿಡಿದ ಕೈಗನ್ನಡಿಯಂತಿದೆ' ಎಂದು ಹೊಗಳುವಂತಿದೆ.

– ಎಂ. ಜಿ. ಶಿವರಾಮ್, ಬೆಂಗಳೂರು

ಆಗಸ್ಟ್ ತಿಂಗಳ ಸಂಚಿಕೆಯ ಮೊದಲ ಪುಟ ಓದಿದೆ. ಶ್ರೀ ಅಂಬಿಕಾತನಯದತ್ತರು ಈ ಕವನ ರಚಿಸಿದರೆಂದರೆ ಈಗಿನ ಸ್ಥಿತಿಯ ಪಡಿಯಚ್ಚಿನಂತಿದೆ. ಕಾಲ ಬದಲಾಗುವುದೇ ಇಲ್ಲವೇನೋ ಎನ್ನಿಸುತ್ತದೆ. ಜನ-ಮನ ಬದಲಾಗಬೇಕು. ಪಾಪ ಭೀತಿ ಹುಟ್ಟಬೇಕು. ಧರ್ಮ ನೆಲಸಬೇಕು. ಆಗ ಮಾತ್ರ ಮಹಾತ್ಮ ಗಾಂಧೀಜಿಯ ಕನಸಿನ ರಾಮರಾಜ್ಯ ಬಂದೀತು! ಅದೆಂದಿಗೆ "ನಮ್ಮ ನಾಡ ಮಂದಿಗೆ ತಿಳಿವು ಹೊಳೆವುದೆಂದಿಗೆ" ಎಂದು ಮಮ್ಮಲ ಮರುಗುತ್ತೇನೆ. ಇಷ್ಟು ಮಾತ್ರ ನನಗನಿಸಿತು.

– ಶಾರದಾ ಜಡೆ, ಸಾಂಗಲಿ

ಪ್ರೇರಣಾದಾಯಿ ನದಿ ಮತ್ತು ಸೂರ್ಯೋದಯ

– *ವಿನೋಬಾ*

ಅತಿಷ್ಠಂತೀ ನಾಮ ನಿವೇಶನಾನಾಮ್

ನದಿ ಅಖಂಡವಾಗಿ ಹರಿಯುತ್ತದೆ. ಅದರದ್ದೇ ಆದ ಯಾವ ಸಂಸಾರ ಇಲ್ಲ. ಅದು ಸನ್ಯಾಸಿ. ಇಂಥ ಪವಿತ್ರ ನದಿ ಒಂದು ಕ್ಷಣದಲ್ಲಿ ನನ್ನ ಮನಸ್ಸನ್ನು ಏಕಾಗ್ರಗೊಳಿಸುತ್ತದೆ. ಇಂಥ ಸುಂದರ ನದಿಯನ್ನು ನೋಡಿ ನನ್ನ ಮನಸ್ಸಿನಲ್ಲಿ ಪ್ರೇಮದ, ಜ್ಞಾನದ ನದಿಯನ್ನು ಏಕೆ ನಿರ್ಮಿಸಿಕೊಳ್ಳಬಾರದು? ಹೊರಗಿನ ಈ ಜಡ ನೀರು ಕೂಡ ನನ್ನ ಮನಸ್ಸಿಗೆ ಶಾಂತಿ ತಂದುಕೊಡುವುದಾದರೆ ನನ್ನ ಮಾನಸ ಸಮುದ್ರದಲ್ಲಿ ಭಕ್ತಿ ಮತ್ತು ಜ್ಞಾನದ, ಶಾಂತಿ ಮತ್ತು ಜ್ಞಾನದ ಚಿನ್ಮಯ ಪ್ರವಾಹ ಹರಿಯಲಾರಂಭಿಸಿದರೆ ಶಾಂತಿ ಪ್ರಾಪ್ತವಾಗುವುದು.

ಊರ್ಧ್ವೋ ನಃ ಪಾಪ್ರಾಂಹಸೋ ನಿಕೇತುನಾ ವಿಶ್ವಂ ಸಮತ್ರಿಣಂ ದಹ
ಕೃಧೀನ ಊರ್ಧ್ವಾಂ ಚರಥಾಯ ಜೀವಸೆ ವಿದಾ ದೇವೇಷು ನೋ ದುವಃ

ಹೇ ಅಗ್ನಿ! ನಿಂತುಕೊಂಡು ನಿನ್ನ ಜ್ಞಾನದ ಮೂಲಕ ನನ್ನನ್ನು ಪಾಪದಿಂದ ರಕ್ಷಿಸು. ಎಲ್ಲವನ್ನೂ ತಿನ್ನುವ ರಾಕ್ಷಸಾದಿಗಳನ್ನು ಭಸ್ಮ ಮಾಡು. ನಾನು ನಡೆಯಲು ಸಾಧ್ಯವಾಗುವಂತೆ, ಬದುಕಲು ಸಾಧ್ಯವಾಗುವಂತೆ ನನ್ನನ್ನು ಎದ್ದು ನಿಲ್ಲಿಸು. ನನ್ನ ಉಪಾಸನೆಯನ್ನು ದೇವತೆಗಳವರೆಗೆ ತಲುಪಿಸು.

ಚತುರಶ್ಚಿದ್ ದದಮಾನಾತ್ ಬಿಭೀಯಾದಾ ನಿ ಧಾತೋಃ
ನ ದೂರೂಕ್ತಾಯ ಸ್ಪೃಹಯೇತ್

ನಾಲ್ಕನ್ನು ಹತವೀರ್ಯ ಮಾಡುವವ ಯಾವನೊಬ್ಬನಿದ್ದಾನೋ ಅವನ ಬಗ್ಗೆ ಶರೀರ ಬೀಳುವವರೆಗೂ ಭಯವಿರಲಿ. ದೂಷಿತ ವಾಣಿಯ ಇಚ್ಛೆಯನ್ನು ಮಾಡಬೇಡಿ. "ನಾಲ್ಕನ್ನು ಹತ ಮಾಡುವವ" ಕಾಮದಲ್ಲಿ ಕ್ರೋಧ ಮುಂತಾದ ವಿಕಾರಗಳ ಸಮಾವೇಶವಾಗುತ್ತದೆ. ದೇಹ, ಇಂದ್ರಿಯಗಳು, ಮನಸ್ಸು ಮತ್ತು ಬುದ್ಧಿ ಈ ನಾಲ್ಕರ ಮೇಲೆ ಕಾಮದ ಶಾಸನ ನಡೆಯುತ್ತದೆ.

ಶರೀರವನ್ನು ನಿಗ್ರಹಿಸ ಹೊರಟರೆ ಕಾಮವು ಇಂದ್ರಿಯಗಳ ಆಶ್ರಯವನ್ನು ಪಡೆಯುತ್ತದೆ. ಇಮದ್ರಿಯಗಳನ್ನು ನಿಗ್ರಹಿಸಹೊರಟರೆ ಮನಸ್ಸಿನಲ್ಲಿ ಅವಿತುಕೊಳ್ಳುತ್ತದೆ. ಮನಸ್ಸನ್ನು ವಶ ಮಾಡಿಕೊಂಡರೆ ಬುದ್ಧಿಯ ಆಶ್ರಯ ಪಡೆಯಲು ಹೋಗುತ್ತದೆ. ಬುದ್ಧಿಯನ್ನು ವಶ ಮಾಡಿಕೊಳ್ಳುವುದಕ್ಕಾಗಿ ಬುದ್ಧಿಯಿಂದ ಭಿನ್ನವಾದ ಶಕ್ತಿಯ ಅಂದರೆ ಆತ್ಮ ಜ್ಞಾನ ಅಥವಾ ಈಶ್ವರ ಭಕ್ತಿಯ ಆಶ್ರಯ ಪಡೆಯಬೇಕಾಗುತ್ತದೆ. ಇದು ಇಡೀ ಹಗಲು ರಾತ್ರಿಯ ಯುದ್ಧ. ಗೀತೆ ಆದೇಶ ಕೊಟ್ಟಿದೆ–

ಜಯೀ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಂ।

ಈ ದುರ್ಜಯ ವೈರಿಯಾದ ಕಾಮವನ್ನು ಕೊಂದುಹಾಕು.

ಅ ನಿಧಾತೋಃ:- ಅಂದರೆ ಶರೀರ ಬೀಳುವವರೆಗೆ, ಸಾಯುವವರೆಗೆ. ಬಿಭೀಯಾತ್:-ಭಯ ಪಡುತ್ತಿರು. ಭಯ ಪಡುತ್ತಿರು ಎಂಬುದರ ಅರ್ಥ ಸದಾ ಭಯಭೀತವಾಗಿರಬೇಕೆಂದೇನೂ ಅಲ್ಲ. ಅಂದರೆ ಸಾವಧಾನ, ಜಾಗೃತ ಮತ್ತು ಪ್ರಯತ್ನಶೀಲವಾಗಿರಬೇಕು ಎಂದರ್ಥ.

ಈ ಮಂತ್ರದಲ್ಲಿ ಮರಣದ ಎಲ್ಲೆಯನ್ನು ಏತಕ್ಕಾಗಿ ಹೇಳಲಾಗಿದೆ? ಏಕೆಂದರೆ ಎಲ್ಲಿಯವರೆಗೆ ಜೀವನವಿದೆಯೋ ಅಲ್ಲಿಯವರೆಗೆ ಕಾಮ ಕ್ರೋಧದ ಉದ್ಭವ ಅವಶ್ಯವಾಗಿ ಆಗುತ್ತದೆ. ಏಕೆಂದರೆ ಅದಕ್ಕೆ ಅನಂತ ನಿಮಿತ್ತಗಳು ಉಂಟಾಗುತ್ತಿರುತ್ತವೆ. ಅದಕ್ಕಾಗಿ ಮರಣದವರೆಗೆಂಬ ವಿಶ್ವಾಸವನ್ನು ಇಟ್ಟುಕೊಳ್ಳಬೇಡಿ. ಇದನ್ನು ಹೇಳುವುದಕ್ಕಾಗಿ ಮೃತ್ಯುವಿನ ಸೀಮೆಯನ್ನು ಎಳೆಯಲಾಗಿದೆ.

'ದೂಷಿತ ವಾಣಿಯ ಇಚ್ಛೆಯನ್ನು ಮಾಡಬೇಡಿ' – ಇಂದ್ರಿಯಗಳ ಸಮುಚಿತ ಉಪಯೋಗದಿಂದ ದೇಹವನ್ನು ವಶದಲ್ಲಿ ಇಟ್ಟುಕೊಳ್ಳಲು ಸಾಧ್ಯ. ಮನೋ ನಿಗ್ರಹದಿಂದ ಇಂದ್ರಿಯಗಳು ವಶಪಡುತ್ತವೆ. ಬುದ್ಧಿಯನ್ನು ಸ್ಥಿರಮಾಡಿ ಮನೋಲಯವನ್ನು ಸಾಧಿಸಬಹುದು. ಬುದ್ಧಿಗತ ಸೂಕ್ಷ್ಮ ಕಾಮವನ್ನು ಹುಡುಕುವುದಕ್ಕಾಗಿ ಬುದ್ಧಿಯಿಂದ ಭಿನ್ನವಾದ ಪರಮೇಶ್ವರ ಶಕ್ತಿಯು ಉಪಯೋಗಕ್ಕೆ ಬರುತ್ತದೆ. ಕಾಮ–ವಿಜಯದ ಈ ಪ್ರಕ್ರಿಯೆ ಸರ್ವಮಾನ್ಯವಿದೆ. ಆದರೆ ಈ ಸಂಬಂಧದಲ್ಲಿ ವೇದ ಒಂದು ವಿಶೇಷ ಸೂಚನೆಯನ್ನು ಕೊಡುತ್ತಿದೆ. ಏನೆಂದರೆ ವಾಣಿಯಲ್ಲಿ ವಿಕಾರ ಬರಗೊಡದಿರಿ. ಮಾತು ಸರಳವಾಗಿದೆ. ಆದರೆ ತುಂಬ ಮಹತ್ವದ್ದಾಗಿದೆ. ಚಿಂತನೆ ಮತ್ತು ಆಚರಣೆ ಇವೆರಡರ ಮಧ್ಯೆ ವಾಣಿ ನಿಂತಿದೆ. ನಾಮ ಸಂಕೀರ್ತನೆ, ಸತ್ಯ ವಚನ, ಸ್ವಾಧ್ಯಾಯ ಇತ್ಯಾದಿಗಳ ಮೂಲಕ ವಾಣಿಯನ್ನು ಶುದ್ಧೀಕರಿಸಲು ಸಾಧ್ಯವಾದಲ್ಲಿ ಚಿಂತನೆ ಮತ್ತು ಆಚರಣೆಗಳೆರಡನ್ನೂ ಕೂಡ ನಿಯಮನ ಮಾಡುವುದು ಸುಲಭವಾಗುವುದು. ವಾಣಿಯಲ್ಲಿ ಸಂಸಾರವನ್ನು ತುಂಬದೆ ಹರಿಸ್ಮರಣೆಗಾಗಿ ಸಮರ್ಪಿತ ಮಾಡಿ. ಭಕ್ತಿ ಮಾರ್ಗದ ಈ ಯುಕ್ತಿಯ ಆದೇಶವನ್ನು ವೇದ ಕೊಟ್ಟಿದೆ.

ರಾಮ ನಾಮ ಮಣಿ ದೀಪ ಧರೂ ಜೀಹ ದೇಹಕೀ ದ್ವಾರ್।
ತುಲಸೀ ಭೀತರ್ ಬಾಹೇರಹೂ ಜೋ ಚಾಹಸೀ ಉಜಿಯಾರ್॥

ರಾಮ ನಾಮ ರೂಪೀ ಮಣಿ ದೀಪವನ್ನು ವಾಣಿಯ ದಿನ್ನೆಯ ಮೇಲೆ ಇಡು. ಒಳಗೆ ಮತ್ತು ಹೊರಗೆ ಎರಡು ಸ್ಥಳಗಳಲ್ಲಿ ಬೆಳಕನ್ನು ಬಯಸುವುದಾದರೆ ಈ ಯುಕ್ತಿಯನ್ನು ಸಾಧಿಸು.

ಅಪ ತ್ಯಂ ಪರಿಪಂಥಿನಂ ಮುಶೀವಾಣಂ
ಊರಶ್ಚಿತಂ ದೂರಂ ಅಧಿ ಸ್ರುತೇರಜ।

ದಾರಿಯ ಜೊತೆಗಾರನೆಂದು ಹೇಳಿಕೊಳ್ಳುವ ಆದರೆ ಮನಸ್ಸಿನಲ್ಲಿ ಕಾಪಟ್ಯವನ್ನು ಇಟ್ಟುಕೊಂಡು ಸಮಯ ಸಿಕ್ಕಾಗ ಲೂಟಿಮಾಡುವ ಗುಪ್ತ ವೈರಿಯನ್ನು

ನಮ್ಮ ಮನಸ್ಸಿನ ಮಾರ್ಗದಿಂದ ದೂರವಿಡು.

"ಪರಿಪಂಥಿ"ಯ ಅರ್ಥ 'ದಾರಿಗಳ್ಳ' ಈ ಶಬ್ದ ಗೀತೆಯಲ್ಲಿ ಬಂದಿದೆ. ಅದರ ಮೂಲ ಈ ವೈದಿಕ ಮಂತ್ರದಲ್ಲಿ ಕಂಡುಬರುತ್ತದೆ. ಈ ಮಂತ್ರದಲ್ಲಿ ಕಾಮರೂಪವೆಂಬುದು ಮೂಲಭೂತ ವೈರಿ ಎಂದು ನಿರ್ದೇಶನವನ್ನು ಇಲ್ಲಿ ಮಾಡಲಾಗಿದೆ.

ಮುಶೀವಾಣಂ- ಲೂಟಿಮಾಡುವ ಕಳ್ಳ, ಊರಶ್ಚಿತಂ-ಕಪಟಿ; ಸ್ರುತಿ-ಮಾರ್ಗ; ಅಜ -ದೂರ ಸರಿಸು.

ಗೀತೆಯಲ್ಲಿ ಎರಡು ಮಾರ್ಗಗಳನ್ನು ಹೇಳಲಾಗಿದೆ. ಜ್ಞಾನ ಯೋಗ ಮತ್ತು ನಿಷ್ಕಾಮ ಕರ್ಮ ಯೋಗ. ವೇದಗಳಲ್ಲೂ ಕೂಡ 'ದ್ವೆ ಸ್ರುತಿ' ಶಬ್ದದ ಮೂಲಕ ಅದರ ಉಲ್ಲೇಖವಿದೆ. ಕಾಮವು ಎರಡು ಮಾರ್ಗಗಳಲ್ಲಿ ವೈರಿ.

ಉದ್ ವಯಂ ತಮಸ್ ಪರಿ ಜ್ಯೋತಿಷ್ಪಶ್ಯಂತ ಉತ್ತರಂ।
ದೇವಂ ದೇವತ್ರಾ ಸೂರ್ಯಂ ಅಗನ್ಮ ಜ್ಯೋತಿರೂತಮಂ॥

ವೇದದ ಸೌರ ಸೂಕ್ತದಲ್ಲಿ ಇದೊಂದು ಮಹತ್ವಪೂರ್ಣ ಮಂತ್ರ. ಅಜ್ಞಾನದ ಎರಡನೆಯ ದಂಡೆಯ ಮೇಲೆ ದಿವ್ಯ ತೇಜವುಳ್ಳ ಉಷಃ ಕಾಲ(ಉತ್), ಸೂರ್ಯೋದಯ(ಉತ್ತರ), ಮಧ್ಯಾಹ್ನ(ಉತ್ತಮ) ಈ ಮೂರೂ ಅವಸ್ಥೆಗಳ ದರ್ಶನ ನಮಗಾಯಿತು. ಈ ಮಂತ್ರದಲ್ಲಿ 'ಉತ್', 'ಉತ್ತರ'. 'ಉತ್ತಮ'- ಈ ಪ್ರಕಾರ ಪೂರ್ಣತೆಯ ಸೋಪಾನಗಳನ್ನು ತಿಳಿಸಲಾಗಿದೆ.

ಈ ಪ್ರಕಾರ ಮೂರೂ ದರ್ಶನಗಳ ಕೃತಕೃತ್ಯತೆಯ ಉದ್ಗಾರವನ್ನು ಋಷಿಗಳು ವ್ಯಕ್ತಪಡಿಸಿದ್ದಾರೆ. ಸಂಸ್ಕೃತದಲ್ಲಿ ಸೂರ್ಯ ಪ್ರಕಾಶದ ಮೊದಲಿನ ಸ್ಥಿತಿಗೆ ಉದಯ ಅಥವಾ ಊತ್ ಅಯ ಆದ್ದರಿಂದ ಉಷಃ ಕಾಲದಿಂದ ಮಧ್ಯಾಹ್ನದವರೆಗೆ ಬೆಳೆಯುತ್ತಿರುವ ಪ್ರಕಾಶದ ಊತ್, ಉತ್ತರ ಮತ್ತು ಉತ್ತಮ ಎಂಬ ಮೂರು ಅವಸ್ಥೆಗಳು ಸಹಜವಾಗಿ ಆಗುತ್ತವೆ.

ಇದೇ ಮಂತ್ರ ಜ್ಯೋತಿಃ ಪಶ್ಯಂತ ಉತ್ತರಂದ ಬದಲಿಗೆ ಸ್ವಃ ಪಶ್ಯಂತ ಉತ್ತರಂ ಎಂಬ ವ್ಯತ್ಯಾಸದೊಂದಿಗೆ ಯಜುರ್ವೇದದಲ್ಲಿ ನಾಲ್ಕು ಸ್ಥಳಗಲ್ಲಿ ಬಂದಿದೆ ಮತ್ತು ಉಪನಿಷತ್ತುಗಳಲ್ಲಿ ಈ ಎರಡು ಪ್ರಕಾರದ ಚರಣಗಳು ಒಟ್ಟಾಗಿ ಐದು ಚರಣಗಳ ಮಂತ್ರ ಕೊಟ್ಟಿದೆ.

ಏ ನಾ ನಃ ಪಿತರಃ ಪದಜ್ಞಾಃ।

ನಮ್ಮ ಪೂರ್ವಜರು, ನಮ್ಮ ಪಿತೃಗಳು ಪ್ರಾಜ್ಞರಾಗಿದ್ದರು. ಅಂದರೆ ಬ್ರಹ್ಮವೇತ್ತ, ಋಷಿಗಳಿದ್ದರು. ಯಾವ ಋಷಿಗಳನ್ನು ನಾವು ವೇದದ ದ್ರಷ್ಟಾರರು ಎಂದು ತಿಳಿಯುತ್ತೇವೆಯೋ ಅವರು ಕೂಡ ತಮ್ಮ ಪೂರ್ವಜರ ಹೆಸರನ್ನು ಹೇಳುತ್ತಾರೆ. ಅಂದರೆ ಪ್ರಾಚೀನ ಪಿತೃಗಳ ಸ್ಮರಣೆಯನ್ನು ನಾವು ವೇದಕಾಲದಿಂದಲೂ ಮಾಡುತ್ತ ಬಂದಿದ್ದೇವೆ.

* * *

ಅಂತಾರಾಷ್ಟ್ರೀಯ ತಮಿಳು ಸಮ್ಮೇಳನ ಅಂತರಂಗದ ಚಿಂತನೆ

- ಎ.ಸಿ.ಕುಳಂದೈ ಸ್ವಾಮಿ

ಕಳೆದ ಜೂನ್ ತಿಂಗಳಲ್ಲಿ ಕೊಯಮತ್ತೂರಿನಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅತ್ಯಂತ ವೈಭವಪೂರ್ಣವಾಗಿ ಶಾಸ್ತ್ರೀಯ ತಮಿಳು ಸಮ್ಮೇಳನ ನಡೆಯಿತು. ಸಮ್ಮೇಳನವೇನೋ ನಡೆಯಿತು. ಆದರೆ ಸಮ್ಮೇಳನಾನಂತರ ಅದರ ಬಗ್ಗೆ ಕೆಲವು ಭಿನ್ನಾಭಿಪ್ರಾಯಗಳು ಕಾಣಿಸಿಕೊಂಡವು. ಅಂತಾರಾಷ್ಟ್ರೀಯ ಕನ್ನಡ ಸಮ್ಮೇಳನವೂ ಸಹ ನಡೆಯುತ್ತದೆ. ಆದರೆ ತಮಿಳು ಸಮ್ಮೇಳನದ ಬಗ್ಗೆ ನಡೆಯುವಂಥ ಗಂಭೀರವಾದ ಆತ್ಮ ವಿಮರ್ಶೆ, ಕನ್ನಡ ಸಮ್ಮೇಳನದ ಆನಂತರ ನಡೆಯುವುದಿಲ್ಲ. ಈ ವಿಷಯದಲ್ಲಿ ತಮಿಳು ಸಮ್ಮೇಳನದಿಂದ ಕನ್ನಡಿಗರು ಕಲಿಯಬೇಕಾದ ಚಿಂತನ ಕ್ರಮದ ಅಗತ್ಯವಿದೆ. ತಮಿಳು ಭಾಷಾ ಸಂಶೋಧನೆಗೆಂದೇ ಒಂದು ಅಂತಾರಾಷ್ಟ್ರೀಯ ಮಟ್ಟದ ಸಂಸ್ಥೆ (ಐ.ಎ.ಟಿ.ಆರ್.)ಇದೆ. ಇಂಥ ಒಂದು ಸಂಸ್ಥೆ ಕನ್ನಡ ಭಾಷೆಗಿಲ್ಲ. ಈ ಸಂಸ್ಥೆಯ ಹೆಸರು ಅಂತಾರಾಷ್ಟ್ರೀಯ ತಮಿಳು ಸಂಶೋಧನಾ ಸಂಸ್ಥೆ. ಇದು ೧೯೬೪ರಲ್ಲಿ ಸ್ಥಾಪಿತಗೊಂಡು ಪ್ಯಾರಿಸ್‌ನಲ್ಲಿ ನೋಂದಣಿಗೊಂಡಿತು. ಈ ಸಂಸ್ಥೆಯ ಅಂಗರಚನೆ ಪ್ರಕಾರ ಸರ್ವ ಸದಸ್ಯರ ಸಭೆ, ಒಂದು ಕೇಂದ್ರ ಸಮಿತಿ ಮತ್ತು ಒಂದು ಕಾರ್ಯಕಾರಿ ಸಮಿತಿ ಇದೆ. ಅದಕ್ಕೆ ನಿಧಿಯಿಲ್ಲ ಅಥವಾ ಸ್ವಂತ ಕಚೇರಿಯಿಲ್ಲ. ಇದು ಒಂದು ಸಮ್ಮೇಳನದಿಂದ ಇನ್ನೊಂದು ಸಮ್ಮೇಳನದವರೆಗೆ ಮಾತ್ರ ಸಕ್ರಿಯವಾಗಿರುತ್ತಾ ಬಂದಿದೆ. ಈ ಸಂಸ್ಥೆ ಇದುವರೆಗೆ ಎಂಟು ಸಮ್ಮೇಳನಗಳನ್ನು ಆಯೋಜಿಸಿದೆ. ಕೊನೆಯ ಸಮ್ಮೇಳನ ಅಂದರೆ ಇತ್ತೀಚಿನದು ೧೯೯೫ರಲ್ಲಿ ತಂಜಾವೂರಿನಲ್ಲಿ ನಡೆಯಿತು.

ಪ್ಯಾರಿಸ್‌ನಲ್ಲಿ ನಡೆದ ಸಮ್ಮೇಳನದ ಹೊರತಾಗಿ ಉಳಿದೆಲ್ಲಾ ಸಮ್ಮೇಳನಗಳೂ ಸಮ್ಮೇಳನ ನಡೆದ ದೇಶದ ಸರ್ಕಾರದ ಭಾಗೀದಾರಿಕೆ ಮತ್ತು ಧನ ಸಹಾಯದಿಂದ ನಡೆದುಕೊಂಡು ಬಂದಿದೆ. ಆದರೆ ಇತ್ತೀಚೆಗೆ ಕೊಯಮತ್ತೂರಿನಲ್ಲಿ ನಡೆದ ಸಮ್ಮೇಳನದ ಬಗ್ಗೆ ಉಂಟಾಗಿರುವ ಭಿನ್ನಾಭಿಪ್ರಾಯ ಏನೆಂದರೆ ೧೯೬೮ರಲ್ಲಿ ಚನ್ನೈ(ಮದ್ರಾಸು)ನಲ್ಲಿ ನಡೆದ ಸಮ್ಮೇಳನ ಒಂದು ರೀತಿಯಲ್ಲಿ ಡಿ. ಎಂ.ಕೆ. ಪಕ್ಷದ ಯಶಸ್ಸಿನ ಪ್ರದರ್ಶನದ ಸಮ್ಮೇಳನವಾಗಿತ್ತು ಎಂಬ ಬಗ್ಗೆ. ಈ ಬಗ್ಗೆ ಕೆಲವರ ಅಭಿಪ್ರಾಯ ಏನೆಂದರೆ ಪ್ರಜಾಪ್ರಭುತ್ವದಲ್ಲಿ ಆಳುವ ಪಕ್ಷವೇ ಸರ್ಕಾರವಾಗಿರುತ್ತದೆ. ಆದ್ದರಿಂದ ಅಂಥ ಸರ್ಕಾರದಿಂದ ಸಹಾಯ ಪಡೆಯುವುದನ್ನು ರಾಜಕೀಯಗೊಳಿಸಿದಂತೆ ಎಂದು ಹೇಳುವುದು ಸರಿಯಲ್ಲ. ಜೂನ್ ತಿಂಗಳಲ್ಲಿ ನಡೆದ ಸಮ್ಮೇಳನದಲ್ಲಿ ಡಿ.ಎಂ.ಕೆ. ಸರ್ಕಾರದ ಪ್ರತಿಷ್ಠೆಯ ಪ್ರದರ್ಶನವಾಯಿತೆಂಬುದರ ಬಗ್ಗೆ ಪುನಃ ದೂರು ಕೇಳಿಬರುತ್ತಿದೆ. ಅಂತಾರಾಷ್ಟ್ರೀಯ ತಮಿಳು ಸಂಶೋಧನಾ ಸಂಸ್ಥೆಯ ಸಮ್ಮೇಳನಗಳು ತಮಿಳು ನಾಡಿನಲ್ಲಿ ನಡೆದಾಗಲೆಲ್ಲ ಅದಕ್ಕೆ ರಾಜಕೀಯ ಬಣ್ಣ ಬಂದಿದೆ ಎಂಬುದು ಸಾಮಾನ್ಯ ಟೀಕೆ. ಈ ವಿಷಯದಲ್ಲಿ ಪ್ರೊಫೆಸರ್ ನೊಬೂರ್

ಕರಿಶ್ಮಾ ಎಂಬುವವರು ಕೊಯಮತ್ತೂರು ಸಮ್ಮೇಳನೋತ್ತರದಲ್ಲಿ ಒಂದು ಬಗೆಯ ಶೋಕ ಗೀತೆ ನುಡಿಸಿದ್ದಾರೆ. ಆದರೆ ವಿ.ಸಿ. ಕುಳಂದೈ ಸ್ವಾಮಿ ಮತ್ತು ಇರಾವತನ್ ಮಹಾದೇವನ್ ಪ್ರಕಾರ ಅಂತಾರಾಷ್ಟ್ರೀಯ ಸಂಶೋಧನಾ ಸಂಸ್ಥೆಯ ರೂಪುರೇಷೆಗಳನ್ನು ತಮಿಳು ಸಮ್ಮೇಳನದ ಎರಡನೇ ಸಮ್ಮೇಳನದಿಂದಲೇ ರೂಪಿಸಿಕೊಂಡು ಬರಲಾಗಿದೆ. ಇದರ ಪ್ರಕಾರ ಕೇವಲ ಪ್ರತಿನಿಧಿಗಳಿಗೆ ಸೀಮಿತವಾದ ಶೈಕ್ಷಣಿಕ ಗೋಷ್ಠಿಗಳು ನಡೆಯುತ್ತವೆ. ಅಲ್ಲದೇ ಸಾರ್ವಜನಿಕರಿಗಾಗಿ ಕೆಲವು ಇತರ ಕಾರ್ಯಕ್ರಮಗಳೂ ನಡೆಯುತ್ತವೆ. ಈ ಭಿನ್ನಾಭಿಪ್ರಾಯದ ಸಂದರ್ಭದಲ್ಲಿ ಲಂಡನ್ ವಿಶ್ವವಿದ್ಯಾಲಯದ ದಕ್ಷಿಣ ಏಷಿಯಾ ಸಾಂಸ್ಕೃತಿಕ ವಿಭಾಗದ ಪ್ರೊಫೆಸರ್ ಸ್ಟುವರ್ಟ್ ಬ್ಲಾಕ್‌ಬರ್ನ್‌ರವರು ಪ್ರೊಫೆಸರ್ ಕರಿಶ್ಮಾರವರಿಗೆ ಬರೆದ ಪತ್ರವನ್ನು ಕುಳಂದೈ ಸ್ವಾಮಿ ಹೀಗೆ ಉಲ್ಲೇಖಿಸುತ್ತಾರೆ :– "ತಮಿಳುನಾಡಿನಲ್ಲಿ ಇನ್ನೊಂದು ಸಮ್ಮೇಳನ ಏರ್ಪಡಿಸುವ ಬಗ್ಗೆ ನಿಮ್ಮ ಸಹಮತ ಇಲ್ಲದಿರುವುದನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಆದರೆ ತಂಜಾವೂರಿನಲ್ಲಿ ನಡೆದ ಸಮ್ಮೇಳನದ ಅನುಭವ ಅಂಥ ಕೆಟ್ಟದ್ದೇನಾಗಿರಲಿಲ್ಲ. ಆ ಸಮ್ಮೇಳನದಲ್ಲಿ ಮಂಡಿಸಲಾದ ಪ್ರಬಂಧಗಳಿಗೂ, ರಾಜಕೀಯಕ್ಕೂ ಯಾವುದೇ ಸಂಬಂಧವಿರಲಿಲ್ಲ. ಅಲ್ಲದೇ ತಮಿಳು ನಾಡಿನಲ್ಲಿ ಸಮ್ಮೇಳನ ಏರ್ಪಡಿಸಿದ್ದರಿಂದ ನಮ್ಮ ಅನೇಕ ಜೊತೆಗಾರರು ಆ ಸಮ್ಮೇಳನದಲ್ಲಿ ಭಾಗವಹಿಸಲು ಸಾಧ್ಯವಾಯಿತು. ಇದೊಂದು ದೊಡ್ಡ ಸಾಧನೆ". ಕೊಯಮತ್ತೂರಿನಲ್ಲಿ ಇತ್ತೀಚೆಗೆ ನಡೆದ ಜಾಗತಿಕ ಶಾಸ್ತ್ರೀಯ ತಮಿಳು ಸಮ್ಮೇಳನದಲ್ಲಿ ಶೈಕ್ಷಣಿಕ ಕಾರ್ಯಕ್ರಮ ಮತ್ತು ಸಾಮಾನ್ಯ ಕಾರ್ಯಕ್ರಮದ ಮಧ್ಯೆ ಅಂತರವನ್ನು ಕಟ್ಟು ನಿಟ್ಟಾಗಿ ಪಾಲಿಸಿಕೊಂಡು ಬರಲಾಯಿತು. ಡಾ. ವಿ.ಸಿ. ಕುಲದೈ ಸ್ವಾಮಿಯವರು ೧೯೯೯ ಫೆಬ್ರವರಿ ೧೮ರದು ಪ್ರೊಫೆಸರ್ ಕರಿಶ್ಮಾರವರಿಗೆ ಬರೆದ ಪತ್ರದಲ್ಲಿ ಒಂಬತ್ತನೇ ಸಮ್ಮೇಳನವನ್ನು ತಮಿಳುನಾಡು ಸರ್ಕಾರವು ಏರ್ಪಡಿಸಬೇಕೆಂದು ಆಹ್ವಾನಿಸಿದ್ದನ್ನು ತಿಳಿಸಿದ್ದರು. ಆದರೆ ಕರಿಶ್ಮಾರವರು ತಮ್ಮ ಮಾರ್ಚ್ ೧೧ನೇ ತಾರೀಖಿನ ಪತ್ರದಲ್ಲಿ ಸತತವಾಗಿ ಎರಡನೇ ಬಾರಿ ತಮಿಳುನಾಡಿನಲ್ಲಿ ಸಮ್ಮೇನ ಏರ್ಪಡಿಸುವ ಆಹ್ವಾನವನ್ನು ನಿರಾಕರಿಸಿದರು. ಇದಕ್ಕೆ ಕಾರಣ ಈ ಮೊದಲು ತಮಿಳುನಾಡಿನಲ್ಲಿ ನಡೆದ ಸಮ್ಮೇಳನಗಳು ರಾಜಕೀಯಗೊಂಡಿದ್ದರ ಪ್ರಭಾವ ಕರಿಶ್ಮಾರವರ ಮೇಲೆ ಇತ್ತು. ೧೯೯೯–೨೦೦೦ನೇ ಸಾಲಿನಲ್ಲಿ ಏರ್ಪಡಿಸಬೇಕಾಗಿದ್ದ ತಮಿಳು ಸಮ್ಮೇಳನ ನಡೆಸುವ ಅವಕಾಶವನ್ನು ತಮಿಳು ಸಂಶೋಧನಾ ಸಂಸ್ಥೆ ಕರಿಶ್ಮಾರವರ ಬಿಗಿ ನಿಲುವಿನಿಂದ ಕಳೆದುಕೊಂಡಿತು. ಕರಿಶ್ಮಾರವರು ತಮ್ಮ ಈ ನಿಲುವಿಗೆ ಬರುವ ಮೊದಲು ಪದಾಧಿಕಾರಿಗಳೊಂದಿಗೆ ಚರ್ಚಿಸಿರಲಿಲ್ಲ. ತಂಜಾವೂರು ಸಮ್ಮೇಳನ ಆದ ನಂತರ ಹದಿನೈದು ವರ್ಷಗಳ ಕಾಲ ತಮಿಳು ಸಂಶೋಧನಾ ಸಂಸ್ಥೆ ಹೆಸರಿಗೆ ಮಾತ್ರ ಇತ್ತು. ಪದಾಧಿಕಾರಿಗಳು ಈ ಬಗ್ಗೆ ಚಿಂತಿತರಾಗಿದ್ದರು. ಇಂಥ ಒಂದು ಪರಿಸ್ಥಿತಿಯಲ್ಲಿ ತಮಿಳುನಾಡು ಸರ್ಕಾರವು ಒಂಬತ್ತನೇ ಸಮ್ಮೇಳನ ನಡೆಸಲು ಆಮಂತ್ರಿಸಿತು. ತಮಿಳುನಾಡಿನ ಮುಖ್ಯಮಂತ್ರಿಯವರೇ ಸ್ವತಃ ಕರಿಶ್ಮಾರವರಿಗೆ ಪತ್ರ ಬರೆದು ಸಮ್ಮೇಳನಕ್ಕೆ ಬೆಂಬಲ ಬುಸಿದ್ದರು. ತಮಿಳುನಾಡಿನಲ್ಲಿ ಸಮ್ಮೇಳನ ನಡೆಸುವುದಕ್ಕೆ ಕರಿಶ್ಮಾರವರು ಎತ್ತಿದ್ದ ನಾಲ್ಕು ಆಕ್ಷೇಪಣೆಗಳಲ್ಲಿ ಮೂರನ್ನು ಬಗೆಹರಿಸಲಾಯಿತು. ಇನ್ನು ಉಳಿದ ಒಂದೇ ಒಂದು ಆಕ್ಷೇಪಣೆ ಸಮ್ಮೇಳನ ನಡೆಸುವ ಸಮಯದ ಬಗ್ಗೆ ಇತ್ತು. ಕರಿಶ್ಮಾರವರು ೨೦೧೧

ಡಿಸೆಂಬರ್ ಅಥವಾ ೨೦೧೧ರಲ್ಲಿ ಸಮ್ಮೇಳನ ನಡೆಯಬಹುದೆಂದು ಸೂಚಿಸಿದ್ದರು. ಆದರೆ ತಮಿಳುನಾಡು ಸರ್ಕಾರವು ಸಮ್ಮೇಳನವನ್ನು ೨೦೧೦ ಜೂನ್ ಕೊನೆಯ ವಾರದಲ್ಲಿ ನಡೆಸಬೇಕೆಂದು ಬಯಸಿತು. ಇದಕ್ಕೆ ಕಾರಣ ೨೦೧೧ರ ಪ್ರಾರಂಭದಲ್ಲಿ ವಿಧಾನ ಸಭಾ ಚುನಾವಣೆಗಳನ್ನು ನಡೆಸಬೇಕಾಗಿತ್ತು. ಸಕಾರದೊಂದಿಗಿನ ಭಿನ್ನಾಭಿಪ್ರಾಯ ಕೇವಲ ಆರು ತಿಂಗಳ ಮಟ್ಟಿಗೆ ಸಂಬಂಧಿಸಿದ್ದಾಗಿತ್ತು. ಸಮ್ಮೇಳನದ ಆಹ್ವಾನವನ್ನೇ ತಿರಸ್ಕರಿಸುವಷ್ಟು ದೊಡ್ಡ ಸಂಗತಿಯೇನಾಗಿರಲಿಲ್ಲ. ಸಂಶೋಧನಾ ಸಂಸ್ಥೆಯ ಉಪಾಧ್ಯಕ್ಷರು ಮತ್ತು ಆಡಳಿತ ಮಂಡಲಿಯ ಅಧ್ಯಕ್ಷರಾದ ಡಾ. ಕುಳಂದೈ ಸ್ವಾಮಿ ಕರಿಶ್ಮಾರವರಿಗೆ ಒಂದು ಪತ್ರ ಬರೆದು ಚೆನ್ನೈನಲ್ಲಿ ಸ್ವಂತ ಕಟ್ಟಡ ಹೊಂದಲು ಮತ್ತು ಕಚೇರಿಯನ್ನು ನಡೆಸಿಕೊಂಡು ಹೋಗಲು ಹಾಗೂ ಸಂಶೋಧನಾ ಚಟುವಟಿಕೆ ನಡೆಸಿಕೊಂಡು ಹೋಗಲು ತಮಿಳು ನಾಡು ಸರ್ಕಾರದಿಂದ ಸಂಶೋಧನಾ ಸಂಸ್ಥೆಗೆ ಧನ ಸಹಾಯ ಒದಗಿಸುವಂತೆ ಮನವೊಲಿಸುವುದಾಗಿಯೂ ಸಹ ಆ ಪತ್ರದಲ್ಲಿ ತಿಳಿಸಿದ್ದರು. ಆದರೆ ಕರಿಶ್ಮಾರವರು ಈ ವಿಷಯದಲ್ಲಿ ತಮ್ಮ ಹಠವನ್ನು ಬಿಡಲಿಲ್ಲ. ಈ ಸಂದರ್ಭದಲ್ಲಿ ಎದ್ದೇಳುವ ಪ್ರಶ್ನೆಯೇನೆಂದರೆ ತಮಿಳುನಾಡು ಸರ್ಕಾರದ ಆಮಂತ್ರಣವನ್ನು ನಿರಾಕರಿಸಲು ಕರಿಶ್ಮಾರವರಿಗೆ ಯಾರು ಅಧಿಕಾರ ಕೊಟ್ಟಿದ್ದರು?

ಕರಿಶ್ಮಾರವರು ಕಾರ್ಯಕಾರಿ ಸಮಿತಿ ಸಭೆಯನ್ನೂ ಕರೆಯಲಿಲ್ಲ ಮತ್ತು ಸದಸ್ಯರನ್ನೂ ಸಹ ಪರಾಮರ್ಶಿಸಿರಲಿಲ್ಲ. ಒಟ್ಟಾರೆ ತಮಿಳುನಾಡಿನ ಕೊಯಮತ್ತೂರಿನಲ್ಲಿ ಅಂತಾರಾಷ್ಟ್ರೀಯ ಶಾಸ್ತ್ರೀಯ ತಮಿಳು ಸಮ್ಮೇಳನವನ್ನು ನಡೆಸುವ ಅವಕಾಶವನ್ನು ತಮಿಳು ಸಂಶೋಧನಾ ಸಂಸ್ಥೆ ಕಳೆದುಕೊಂಡಿತು. ಕೊನೆಯಲ್ಲಿ ಪ್ರೊಫೆಸರ್ ವಿ.ಐ. ಸುಬ್ರಹ್ಮಣ್ಯಂ, ಜನಪಿಲೋಜಿತ್ ಮತ್ತು ಫಾದರ್ ತನಿನಾಯಗಮ್ ಮುಂತಾದ ದೊಡ್ಡ ವಿದ್ವಾಂಸರ ಸೇವೆಯನ್ನು ಮರು ಜ್ಞಾಪಿಸಿಕೊಳ್ಳಲು ಇಷ್ಟಪಡುತ್ತೇವೆ. ಇವರು ವಿಶೇಷವಾದ ಬೌದ್ಧಿಕ ಪ್ರಾಮಾಣಿಕತೆ ಮತ್ತು ದೃಢ ನಂಬಿಕೆಯ ವ್ಯಕ್ತಿಗಳು. ಇವರು ರಾಜಕಾರಣಿಗಳೊಂದಿಗೆ ಸಂವಾದ ನಡೆಸಿದ್ದರೂ ಅಂತಾರಾಷ್ಟ್ರೀಯ ತಮಿಳು ಸಂಶೋಧನಾ ಸಂಸ್ಥೆಯ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಬಂದಿದ್ದಾರೆ ಹಾಗೂ ತಮಿಳು ಅಧ್ಯಯನಕ್ಕೆ ಅನುಕೂಲವಾಗುವಂತೆ ಸಂಪನ್ಮೂಲಗಳನ್ನು ಕ್ರೋಢೀಕರಿಸಿದ್ದಾರೆ.

ಈಗ ನಮಗೆ ಬೇಕಾಗಿರುವುದು ಹೊಸ ಸಂಶೋಧನಾ ಸಂಸ್ಥೆಯಲ್ಲ. ಬದಲಿಗೆ ಆ ಸಸ್ಥೆಯ ಮುಂಚೂಣಿಯಲ್ಲಿ ಓರ್ವ ಹೊಸ ನಾಯಕ ಬೇಕು. ಅವನು ತಮಿಳಿನ ಧ್ಯೇಯೋದ್ದೇಶಕ್ಕೆ ತೀವ್ರ ಬದ್ಧತೆಯನ್ನು ಹೊಂದಿರಬೇಕು. ಅಲ್ಲದೆ ತಮಿಳು ಜನರ ಭಾವನೆಗಳು ಮತ್ತು ಆಶೋತ್ತರಗಳಿಗೆ ಸ್ಪಂದಿಸುವಂಥವನಾಗಿರಬೇಕು. ಬುದ್ಧಿವಂತ, ರಾಜಕೀಯ ತಜ್ಞನಾಗಿರಬೇಕು. ಇಂಥ ನಾಯಕತ್ವವು ದೊರೆತಲ್ಲಿ ಅಂತಾರಾಷ್ಟ್ರೀಯ ತಮಿಳು ಸಂಶೋಧನಾ ಸಂಸ್ಥೆಯ ಪುನರುತ್ಥಾನವಾಗುವುದು ಮತ್ತು ತಮಿಳು ಅಧ್ಯಯನದ ಪ್ರವರ್ಧಮಾನದ ಐತಿಹಾಸಿಕ ಪಾತ್ರವನ್ನು ನಿರ್ವಹಿಸಲು ಸಾಧ್ಯವಾಗುವುದು.

– ಸಾಭಾರ :– ದ ಹಿಂದೂ ಪತ್ರಿಕೆ

ಅನು :– ಸುರೇಂದ್ರ ಕೌಲಗಿ

* * *

ಪ್ರಚಲಿತ ಉನ್ನತ ವ್ಯಾಸಂಗದ ಲೋಪದೋಷಗಳು

– *ಈ.ಟಿ.ಪುಟ್ಟಯ್ಯ*

ಗುಲ್ಬರ್ಗಾ ವಿಶ್ವವಿದ್ಯಾಲಯದ ಕುಲಪತಿ

ವಿಶ್ವ ವಿದ್ಯಾಲಯಗಳು ಕೇವಲ ಪದವೀಧರರನ್ನು ತಯಾರಿಸುತ್ತಿವೆ. ಈ ಪದವೀಧರರು ಸಮಾಜಮುಖಿಯಾಗಿ ಕೆಲಸ ನಿರ್ವಹಿಸದೆ ವೃತ್ತಿಪರರಾಗುತ್ತಿದ್ದಾರೆ. ವಿಶ್ವವಿದ್ಯಾಲಯಗಳು ಪದವೀಧರರ ಉತ್ಪಾದನಾ ಘಟಕಗಳಾಗಬಾರದು. ಅಕ್ಷರಸ್ಥ ಕೌಶಲವುಳ್ಳ ಮಾನವ ಸಂಪನ್ಮೂಲ ಉತ್ಪದನಾ ಘಟಕಗಳೂ ಆಗಬಾರದು. ಮಾನವೀಯ ಮೌಲ್ಯಗಳಿರುವ, ಉದ್ಯೋಗ ನಿರ್ಮಾಣದ ಕೌಶಲವಿರುವ ಪರಿಪೂರ್ಣ ವ್ಯಕ್ತಿಗಳನ್ನು ರೂಪಿಸುವ ಕೆಲಸ ವಿಶ್ವ ವಿದ್ಯಾಲಯಗಳಿಂದ ಆಗಬೇಕಿದೆ. ಸಮಾಜಕ್ಕೆ ಹಾಗೂ ಬದುಕನ್ನು ಉನ್ನತಿಗೆ ಕೊಂಡೊಯ್ಯುವ ಸಂಶೋಧನೆಗಳು ವಿಶ್ವ ವಿದ್ಯಾಲಯಗಳಿಂದ ಆಗಬೇಕಿದೆ.

ವಿಶ್ವ ವಿದ್ಯಾಲಯಗಳಲ್ಲಿ ಸಾಕಷ್ಟು ಸಂಶೋಧನೆಗಳು ನಡೆಯುತ್ತಿವೆ. ಆದರೆ ಅವುಗಳಲ್ಲಿ ಬಹುತೇಕ ಸಂಶೋಧನೆಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಿಲ್ಲ. ಕೇವಲ ಮಹಾ ಪ್ರಬಂಧಗಳು ರಚನೆಯಾಗುತ್ತಿವೆ. ಸತ್ಯ ಶೋಧನೆಗಳಲ್ಲಿ ಅನ್ವಯಿಕ ಗುಣಗಳ ಕೊರತೆ ಕಂಡುಬರುತ್ತಿದೆ. ಬೆರಳೆಣಿಕೆಯಷ್ಟು ಸಂಶೋಧನೆಗಳು ಮಾತ್ರ ಅನ್ವಯಿಕವಾಗುತ್ತವೆ. ಸಂಶೋಧನೆಗಳು ಮಾನವ ಮುಖಿಯಾಗಿಲ್ಲ. ಗಟ್ಟಿ ಎನ್ನಬಹುದಾದಂಥ ಸಂಶೋಧನೆಗಳ ಕೊರತೆ ಇದೆ. ಸ್ವಲ್ಪ ಮಟ್ಟಿಗೆ ಹೌದು, ಶಿಕ್ಷಣ ವ್ಯವಸ್ಥೆಯೇ ಬದಲಾಗಬೇಕಿದೆ. ಅಂಕಗಳು ಮಾನದಂಡವಾಗಿರುವವರೆಗೆ ಪದವಿಯಿಂದ ಪ್ರತಿಷ್ಠೆ ಅಳೆಯುವವರೆಗೆ ಇಂಥದ್ದೊಂದು ಅಸಮಾಧಾನ ಇದ್ದೇ ಇರುತ್ತದೆ.

ಮೌಲ್ಯಾಧಾರಿತ ಶಿಕ್ಷಣ ಸದ್ಯದ ತುರ್ತು. ಅದು ಆಗಬೇಕಿದೆ. ಪ್ರಾಥಮಿಕ ಹಂತದಿಂದಲೇ ಅಂಕಗಳಿಗಾಗಿ ಶಿಕ್ಷಣವಲ್ಲ, ಸಾಮರ್ಥ್ಯಕ್ಕಾಗಿ ಶಿಕ್ಷಣ ಎಂಬ ಮನೋಭಾವವನ್ನು ಬೆಳೆಸಬೇಕಿದೆ. ಇದೂ ಸಹ ಅಂಕ ಆಧಾರಿತ ಯಶಸ್ಸಿನ ಪರಿಣಾಮ. ಅಕ್ರಮಗಳಿಗೆ ಶಿಕ್ಷೆ ನೀಡುವುದರಿಂದ ಶಿಕ್ಷಣದಲ್ಲಿ ಸುಧಾರಣೆಯಾಗಬಹುದು ಎಂಬುದು ತಪ್ಪು. ನಕಲು ಮಾಡಿದವರನ್ನು ಡಿಬಾರ್ ಮಾಡುವ ವ್ಯವಸ್ಥೆ ಇದೆ. ಇದರಿಂದ ವಿದ್ಯಾರ್ಥಿಗಳ ಮನೋಭಾವದಲ್ಲಿ ಬದಲಾವಣೆ ತರಲು ಸಾಧ್ಯವಿಲ್ಲ. ಬದಲಾಗಿ ಅಂಥವರನ್ನು ಶಿಕ್ಷಣದಿಂದಲೇ ವಿಮುಖಗೊಳಿಸಿದಂತೆ ಆಗುತ್ತದೆ.

ಯಶಸ್ಸು ಅಂಕಗಳನ್ನು ಆಧರಿಸಿಲ್ಲ ಎನ್ನುವುದನ್ನು ಪೋಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಬೇಕಿದೆ. ಧಾರಣಾ ಶಕ್ತಿ, ಸಾಮರ್ಥ್ಯ ಹಾಗೂ ಕೌಶಲ ನೈಪುಣ್ಯಗಳು ಶಿಕ್ಷಣದ ಗುಣಮಟ್ಟ ಅಳೆಯುವ ಮಾನದಂಡಗಳಾಗಬೇಕು.

ಗಾಂಧೀಜಿಯವರು ಹೇಳಿದಂತೆಮೂಲ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ವಿಶ್ವ ವಿದ್ಯಾಲಯಗಳಿಂದ ಹೊರಬರುವ ವಿದ್ಯಾರ್ಥಿ ನಿರುದ್ಯೋಗಿ ಆಗಬಾರದು. ಸ್ವಂತ ಶಕ್ತಿಯಿಂದ ಉದ್ಯೋಗ ಸೃಷ್ಟಿಸಿಕೊಳ್ಳುವ ಸಾಮರ್ಥ್ಯ ಅವನಿಗೆ ಬರಬೇಕು.

ಶಿಕ್ಷಣದ ಪರಿಕಲ್ಪನೆಯಲ್ಲಿ ಕೊರತೆ ಇದೆ. ಶಿಕ್ಷಕರು ತರಬೇತಿ ಪಡೆದ ಅಕ್ಷರಸ್ಥರಾಗುತ್ತಿದ್ದಾರೆ. ಅವರಲ್ಲಿ ಶಿಕ್ಷಿತರ ಸಂಸ್ಕಾರಗಳು ಬೆಳೆಯುತ್ತಿಲ್ಲ. ಸಮಾನತೆ, ಸೌಹಾರ್ದ, ಸ್ವಾವಲಂಬನೆ, ಸ್ವೀಕಾರ ಮನೋಭಾವ ಬೆಳೆಯದಿದ್ದರೆ ಅದು ಶಿಕ್ಷಣವೇ ಅಲ್ಲ.

ಪಠ್ಯದೊಂದಿಗೆ ಪೂರಕ ಓದಿಗೆ ಹೆಚ್ಚಿನ ಮಹತ್ವ ನೀಡುವುದು, ಉಪನ್ಯಾಸ, ಪುಸ್ತಕ ಮಾಲಿಕೆಗಳ ಮೂಲಕ ಮನೋಭಾವದಲ್ಲಿ ಬದಲಾವಣೆ ತರುವುದು ಸಾಧ್ಯ. ಇದಕ್ಕಾಗಿ ಸಾಂಸ್ಕೃತಿಕ ಲೋಕದ ಸಹಾಯವೂ ಬೇಕಾಗುತ್ತದೆ. ಎರಡು ದಶಕಗಳ ಹಿಂದೆ ಸಾರ್ವತ್ರಿಕ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸಿದಂತೆ ಈಗ ಗುಣಾತ್ಮಕ, ಸಕಾರಾತ್ಮಕ ಶಿಕ್ಷಣದ ಬಗ್ಗೆಯೂ ಎಚ್ಚರ ಮೂಡಿಸಬೇಕಿದೆ.

ವಿಶ್ವ ವಿದ್ಯಾಲಯಗಳನ್ನು ಸಮಾಜಮುಖಿಯಾಗಿಸಬೇಕು ಎನ್ನುವುದು ನನ್ನ ಚಿಂತನೆ. ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗವನ್ನು ಗ್ರಾಮೀಣ ಕರ್ನಾಟಕದ ಕಡೆಗೆ ಒಯ್ಯುವ ಪ್ರಯತ್ನ ಮಾಡುತ್ತೇನೆ. 'ಅರಿವು' ಯೋಜನೆಯ ಅಡಿಯಲ್ಲಿ ಪ್ರತಿ ತಿಂಗಳೂ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಪ್ರಾದೇಶಿಕ ಸಮಸ್ಯೆಗಳ ಬಗ್ಗೆ ಉಪನ್ಯಾಸಮಾಲಿಕೆಯನ್ನು ಹಮ್ಮಿಕೊಳ್ಳುತ್ತೇವೆ. ಅವುಗಳನ್ನು ಸಣ್ಣ ಪುಸ್ತಕಗಳ ರೂಪದಲ್ಲಿ ಪ್ರಕಟಿಸುತ್ತೇವೆ. ಸುಲಭ ಬೆಲೆಗೆ ಜನಸಾಮಾನ್ಯರಿಗೆ ಅವನ್ನು ತಲುಪಿಸುವ ಯೋಚನೆ ನನ್ನದು.

ಪ್ರಯೋಗಾಧಾರಿತ ಶಿಕ್ಷಣ ನೀಡುವುದು ಇಂದಿನ ಅಗತ್ಯ. ವಿದ್ಯಾರ್ಥಿಗಳು ನಾಲ್ಕು ಗೋಡೆಗಳ ನಡುವೆ ಉಪನ್ಯಾಸ ಕೇಳುವಂತಾಗಿದೆ. ಸಿದ್ಧ ಉತ್ತರ, ಸಿದ್ಧ ಪಠ್ಯವನ್ನು ಓದುವುದಷ್ಟೇ ಶಿಕ್ಷಣ ಎನ್ನುವಂತಾಗಬಾರದು. ವಿದ್ಯಾರ್ಥಿ ತನ್ನ ವೈಯಕ್ತಿಕ ಆಸಕ್ತಿ, ಅಭಿರುಚಿಗಳಿಗೆ ಸಂಬಂಧಿಸಿದ ಎಲ್ಲವನ್ನೂ ಓದುವ ಅವಕಾಶ ದೊರೆಯಬೇಕು.

ಚಾಯ್ಸ್ ಬೇಸ್ಡ್ ಕ್ರೆಡಿಟ್ ಸಿಸ್ಟಮ್ ಹೆಸರಿನ ಯೋಜನೆಯನ್ನು ಆರಂಭಿಸಿರುವುದೇ ಈ ಉದ್ದೇಶಕ್ಕೆ. ಯಾವುದೇ ವಿದ್ಯಾರ್ಥಿ ತನ್ನ ಆಸಕ್ತಿಯ ಇನ್ನಾವುದೇ ಕೋರ್ಸ್‌ಅನ್ನು ಓದಬಹುದಾಗಿದೆ. ಪತ್ರಿಕೋದ್ಯಮದ ವಿದ್ಯಾರ್ಥಿ ಪರಿಸರ ವಿಜ್ಞಾನವನ್ನು, ಇಂಗ್ಲಿಷ್ ವಿದ್ಯಾರ್ಥಿ ಇತಿಹಾಸವನ್ನು ...ಹೀಗೆ ಯಾವ ವಿಷಯವನ್ನಾದರೂ ಆಯ್ಕೆ ಮಾಡಿಕೊಳ್ಳಬಹುದಾಗಿದೆ. ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ಕೆಲ ಮಟ್ಟಿನ ಜ್ಞಾನವಾದರೂ ವಿದ್ಯಾರ್ಥಿಗೆ ಇರಬೇಕು.

ಸಾಭಾರ :–ರಶ್ಮಿ.ಎಸ್

* * *

ಕತ್ತಲೆಯ ಕಡೆಗೆ ಅಮೇರಿಕಾ

– ಪಾಲ್ ಕ್ರುಗ್‌ಮನ್

ಇಡೀ ಅಮೇರಿಕಾ ಕತ್ತಲೆಯಲ್ಲಿ ಮುಳುಗುತ್ತಿದೆ. ಇದು ಶಬ್ದಶಃ ನಿಜ. ಕೊಲೆರಾಡೋ ಸ್ಪಿಂಗ್ಸ್ ಈ ವಿಷಯದಲ್ಲಿ ಮುಂಚೂಣಿಯಲ್ಲಿದೆ. ಹಣ ಉಳಿಸುವ ತನ್ನ ಹತಾಶಾದಾಯಕ ಪ್ರಯತ್ನದಲ್ಲಿ ತನ್ನ ಬೀದಿ ದೀಪಗಳ ಮೂರನೇ ಒಂದು ಭಾಗಕ್ಕೆ ವಿದ್ಯುತ್ ಸಂಪರ್ಕವಿಲ್ಲದಂತೆ ಮಾಡುತ್ತಿದೆ. ಇಂಥದೇ ಕ್ರಮವನ್ನು ಫಿಲಿಡೆಲ್ಫಿಯಾದಿಂದ ಫ್ರೆಸ್ನೋದವರೆಗೆ ಅಂದರೆ ದೇಶದ ಉದ್ದಗಲಕ್ಕೂ ಮಾಡುವ ವಿಚಾರ ನಡೆದಿದೆ. ಒಂದು ಕಾಲಕ್ಕೆ ಏರೀಕ್ಯಾನಲ್‌ನಿಂದ ಅಂತರರಾಜ್ಯ ಹೆದ್ದಾರಿ ಜಾಲದವರೆಗೆ ಸಾರಿಗೆ ಸಂಪರ್ಕದ ಉಚ್ಚಕೋಟಿಯ ಕಲ್ಪನೆಯನ್ನು ಸಾಕಾರಗೊಳಿಸಿ ಜಗತ್ತನ್ನೇ ಬೆರಗುಗೊಳಿಸಿದ್ದ ಅಮೇರಿಕಾ ಈಗ ತನ್ನ ಸುಂದರ ಹೆದ್ದಾರಿಗಳನ್ನು ತಾನೇ ಕಿತ್ತುಹಾಕುವ ಪ್ರಕ್ರಿಯೆಯಲ್ಲಿ ತೊಡಗಿದೆ. ಈ ಉಪಕ್ರಮದ ಅಂಗವಾಗಿ ಅನೇಕ ರಾಜ್ಯಗಳಲ್ಲಿ ಸ್ಥಾನೀಯ ಸರ್ಕಾರಗಳು ರಸ್ತೆಯನ್ನು ಒಡೆದು ಹಾಕುತ್ತಿವೆ. ಏಕೆಂದರೆ ಆ ರಸ್ತೆಗಳನ್ನು ಸುಸ್ಥಿತಿಯಲ್ಲಿ ಇಡಲು ಸಾಧ್ಯವಾಗುತ್ತಿಲ್ಲ. ಆ ರಸ್ತೆಗಳೆಲ್ಲ ಈಗ ಜಲ್ಲಿಯಿಂದ ಕೂಡಿವೆ. ಒಂದು ಕಾಲಕ್ಕೆ ತನ್ನ ಶಿಕ್ಷಣ ವ್ಯವಸ್ಥೆಯ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುತ್ತಿದ್ದ ದೇಶ ಈಗ ಶಿಕ್ಷಣ ಕ್ಷೇತ್ರದಲ್ಲಿಯ ವೆಚ್ಚವನ್ನು ಕಡಿಮೆ ಮಾಡುತ್ತಿದೆ.

ಅಧ್ಯಾಪಕರನ್ನು ಮನೆಗೆ ಕಳುಹಿಸಲಾಗುತ್ತಿದೆ. ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ವಜಾ ಮಾಡಲಾಗುತ್ತಿದೆ. ಹವಾಯಿ ರಾಜ್ಯದಲ್ಲಿ ಶಾಲಾ ವರ್ಷವನ್ನೇ ಬಹು ದೊಡ್ಡ ಅವಧಿಗೆ ಕಡಿಮೆ ಮಾಡುತ್ತಿದೆ. ಮುಂಬರುವ ದಿನಗಳಲ್ಲಿ ಶೈಕ್ಷಣಿಕ ಅವಧಿಯನ್ನು ಕಡಿತಗೊಳಿಸುವ ಪ್ರಮಾಣ ಇನ್ನೂ ಹೆಚ್ಚಾಗುವ ಲಕ್ಷಣಗಳಿವೆ. ಸರ್ಕಾರದ ಮೂಲ ಕರ್ತವ್ಯಗಳಾದ ಅಗತ್ಯ ಸೇವೆಗಳು ಆರ್ಥಿಕವಾಗಿ ದುಬಾರಿಯಾಗುತ್ತಿವೆಯೆಂದು ಹೇಳಲಾಗುತ್ತಿದೆ. ಆರ್ಥಿಕ ಹಿಂಜರಿತದಿಂದ ರಾಜ್ಯ ಮತ್ತು ಸ್ಥಾನೀಯ ಸರ್ಕಾರಗಳಿಗೆ ಬಲವಾದ ಪೆಟ್ಟು ಬಿದ್ದಿದೆಯೆಂಬುದೇನೋ ನಿಜ. ಅಲ್ಲದೆ, ನಗದು ಹಣದ ಕೊರತೆಯೂ ಉಂಟಾಗಿದೆ. ರಾಜಕಾರಣಿಗಳು ತೆರಿಗೆಗಳನ್ನು ಹೆಚ್ಚಿಸುವುದಾದರೆ ಪರಿಸ್ಥಿತಿ ಅಷ್ಟೊಂದು ವಿಕೋಪಕ್ಕೆ ಹೋಗಲಾರದು. ಕೇಂದ್ರ ಸರ್ಕಾರ ಶೇ.೧.೦೪ರ ಕಡಿಮೆ ಬಡ್ಡಿಯಲ್ಲಿ ಹಣದುಬ್ಬರವನ್ನು ತಡೆಯುವ ದೀರ್ಘಾವಧಿಯ ಬಾಂಡ್‌ಗಳನ್ನೇನೋ ಮಾರಬಹುದು. ಕೇಂದ್ರ ಸರ್ಕಾರಕ್ಕೇನೂ ಹಣದ ಕೊರತೆ ಇಲ್ಲ. ಅದು ಸ್ಥಾನೀಯ ಸರ್ಕಾರಗಳಿಗೆ ತಮ್ಮ ಮೂಲಭೂತ ಸೌಕರ್ಯದ ಭವಿಷ್ಯವನ್ನು ಮತ್ತು ಮಕ್ಕಳ ಭವಿಷ್ಯವನ್ನು ರಕ್ಷಿಸುವುದಕ್ಕಾಗಿ ಧನ ಸಹಾಯ ಮಾಡಬಹುದು. ಆದರೆ ವಾಷಿಂಗ್‌ಟನ್ ಅದನ್ನು ಹನಿ ಹನಿಯಾಗಿ ಮತ್ತು ಒಲ್ಲದ ಮನಸ್ಸಿನಿಂದ ಕೊಡುತ್ತಿದೆ. ನಾವು ಖೋತಾ ಆರ್ಥಿಕ ವ್ಯವಸ್ಥೆಯನ್ನು ಶಿಸ್ತಿಗೆ ಒಳಪಡಿಸಬೇಕು ಎಂಬುದಾಗಿ ರಿಪಬ್ಲಿಕನ್ನರು, ಮಧ್ಯಪಂಥೀಯರು ಮತ್ತು ಡೆಮಾಕ್ರೆಟ್‌ಗಳು ಹೇಳುತ್ತಾರೆ. ಆದರೆ ಮರುಗಳಿಗೆಯಲ್ಲಿಯೇ ಮುಂದಿನ ದಶಕದಲ್ಲಿ ಏಳುನೂರು ಬಿಲಿಯನ್ ಡಾಲರಿನಷ್ಟು

ತೆರಿಗೆ ವಿನಾಯಿತಿಗೆ ಶ್ರೀಮಂತರನ್ನು ಒಳಪಡಿಸಬಾರದು ಎಂದೂ ಹೇಳುತ್ತಾರೆ. ಪರಿಣಾಮಸ್ವರೂಪವಾಗಿ ಅಮೇರಿಕಾದ ರಾಜಕೀಯ ಕ್ಷೇತ್ರದ ಬಹು ದೊಡ್ಡ ಭಾಗವು ತನ್ನದೇ ಆದ ಆದ್ಯತೆಗಳನ್ನು ವ್ಯಕ್ತಪಡಿಸುತ್ತಿದೆ. ಆದ್ಯತೆಗಳು ಈ ರೀತಿ ಇವೆ.

* ಅಮೇರಿಕನ್ನರಲ್ಲಿ ಶ್ರೀಮಂತರಾದವರು ತಮ್ಮ ಆದಾಯದ ಶೇಕಡಾ ಎರಡರಷ್ಟನ್ನು ಕೊಡುವುದು. ಅಂದರೆ ಕ್ಲಿಂಟನ್‌ರ ಅಧ್ಯಕ್ಷತೆಯ ಕಾಲದಲ್ಲಿಯ ಉತ್ಕರ್ಷದ ಸಮಯದಲ್ಲಿ ಕೊಡುತ್ತಿದ್ದ ತೆರಿಗೆಗಳನ್ನು ಕೊಡುತ್ತಾ ಹೋಗುವುದು.

* ದೇಶದ ಅಡಿಪಾಯಗಳೇ ಕುಸಿದು ಬೀಳುವಂತೆ ಮಾಡುವುದು. ಅಂದರೆ ರಸ್ತೆಗಳು ಮತ್ತು ಶಿಕ್ಷಣ ಇತ್ಯಾದಿಗಳ ಮೇಲೆ ಖರ್ಚನ್ನು ಕಡಿಮೆ ಮಾಡುವುದು.

ಮೇಲಿನ ಈ ಎರಡೂ ಆದ್ಯತೆಗಳಲ್ಲಿ ಅಮೇರಿಕಾದ ಪ್ರಜೆಗಳು ಎರಡನೆಯ ಆದ್ಯತೆಯನ್ನು ಇಷ್ಟಪಡುತ್ತಿದ್ದಾರೆ. ಸಬೂಬುಗಳನ್ನು ಹೇಳುತ್ತಾ ಒಬಮಾರ ಸರ್ಕಾರವು ತಾನು ಮಾಡುತ್ತಿರುವ ದುಂದುವೆಚ್ಚದ ಬಗ್ಗೆ ಜನರು ಕೋಪಿಸಿಕೊಳ್ಳುತ್ತಿರುವಾಗ ರಾಜ್ಯ ಮತ್ತು ಸ್ಥಾನೀಯ ಸರ್ಕಾರಗಳನ್ನು ಗಮನದಲ್ಲಿರಿಸಿಕೊಳ್ಳಬೇಕಾದುದು ಅಗತ್ಯ. ಕೇಂದ್ರ ಸರ್ಕಾರವು ಖಂಡಿತವಾಗಿಯೂ ಹಣವನ್ನು ದುಂದುವೆಚ್ಚ ಮಾಡುತ್ತಿದೆ. ಅದು ನಾವು ಯೋಚಿಸಿದಷ್ಟು ಇಲ್ಲದಿರಬಹುದು.ಆದರೆ ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳು ತಮ್ಮ ಖರ್ಚನ್ನು ಮಿತಗೊಳಿಸುತ್ತಿವೆ. ಅವು ಮಿತಗೊಳಿಸುವ ಹಣವನ್ನು ಲೆಕ್ಕಹಾಕಿದಾಗ ಬಹುಪಾಲು ಹಣವನ್ನು ನಿರುದ್ಯೋಗ, ಜೀವ ವಿಮೆಯಂತಹ ಸುರಕ್ಷಾ ಕಾರ್ಯಕ್ರಮಗಳಿಗಾಗಿ ಮಾತ್ರ ಹೆಚ್ಚು ಹಣ ಖರ್ಚುಮಾಡಲಾಗುತ್ತಿದೆ. ಆರ್ಥಿಕ ಹಿಂಜರಿತದ ತೀವ್ರತೆಯೇ ಇದಕ್ಕೆಲ್ಲ ಕಾರಣ. ಆದ್ರಿಂದ ಈ ರೀತಿ ಕೊಡಲಾದ ಉತ್ತೇಜಕ ಕಾರ್ಯಕ್ರಮಗಳು ವಿಫಲವಾಗಿವೆ. ಏಕೆಂದರೆ ಸರ್ಕಾರವು ಮಾಡುತ್ತಿರುವ ಒಟ್ಟು ಖರ್ಚು ನೋಡಿದಾಗ ಯಾವುದೇ ಪ್ರಕಾರದ ಉತ್ತೇಜನ ಕಾಣುತ್ತಿಲ್ಲ. ಕೇಂದ್ರ ಸರ್ಕಾರದ ವೆಚ್ಚ ಹಳಿತಪ್ಪುತ್ತಿರುವಾಗ ಮತ್ತು ರಾಜ್ಯ ಹಾಗೂ ಸ್ಥಾನೀಯ ಸರ್ಕಾರಗಳು ತಮ್ಮ ಖರ್ಚನ್ನು ಇತಿ ಮಿತಿಯಲ್ಲಿ ಇಡುತ್ತಿರುವಾಗ ಅಮೇರಿಕಾ ತಿರುಗುಮುರುಗಾಗಿ ಹೋಗುತ್ತಿರುವಂತೆ ಭಾಸವಾಗುತ್ತದೆ. ಶ್ರೀಮಂತರ ಮೇಲಿನ ತೆರಿಗೆಗಳನ್ನು ಕಡಿಮೆ ಮಾಡಿರುವುದು ಒಂದು ಪ್ರಕಾರದ ಉತ್ತೇಜನವಲ್ಲವೇ ಎಂದು ಕೇಳಬಹುದು. ಆದರೆ ಆಗಿಲ್ಲವೆಂಬುದು ನಿಮಗೆ ಗೊತ್ತಾಗುತ್ತದೆ. ಶಾಲಾ ಅಧ್ಯಾಪಕರನ್ನು ನಿಯುಕ್ತ ಮಾಡುವುದನ್ನು ನಿಲ್ಲಿಸಿದರೆ ಅದು ಗೊತ್ತಿಲ್ಲದಂತೆಯೇ ನಿರುದ್ಯೋಗ ಸಮಸ್ಯೆಗೆ ಕಾರಣವಾಗುತ್ತದೆ. ಇದಕ್ಕೆ ಬದಲಾಗಿ ಶ್ರೀಮಂತರು ಹೆಚ್ಚು ಶ್ರೀಮಂತರಾಗುವಂತೆ ಮಾಡಿದರೆ ಅವರ ಬಳಿ ಸಂಗ್ರಹವಾಗುವ ಹಣ ನಿರುಪಯುಕ್ತವಾಗಿ ಕುಳಿತುಕೊಳ್ಳುವುದು. ಹಾಗಾದರೆ ದೇಶದ ಆರ್ಥಿಕ ವ್ಯವಸ್ಥೆಯ ಭವಿಷ್ಯವೇನು? ಆರ್ಥಿಕ ಬೆಳವಣಿಗೆಯ ಬಗ್ಗೆ ನಾವು ತಿಳಿದುಕೊಂಡಂತೆ ಶಿಕ್ಷಿತರ ಜನಸಂಖ್ಯೆ ಮತ್ತು ಉನ್ನತ ಶ್ರೇಣಿಯ ಮೂಲ ಸೌಕರ್ಯಗಳು ಅತ್ಯಗತ್ಯ. ಅಭಿವೃದ್ಧಿ ಹೊಂದುತ್ತಿರುವ ದೇಶಗಳು ತಮ್ಮ ರಸ್ತೆಗಳನ್ನು, ಬಂದರುಗಳನ್ನು ಮತ್ತು ತಮ್ಮ ಶಾಲೆಗಳನ್ನು ಉನ್ನತಿಗೇರಿಸುವುದಕ್ಕಾಗಿ ಬಹಳ ದೊಡ್ಡ ಪ್ರಮಾಣದ ಪ್ರಯತ್ನ ಮಾಡುತ್ತಿರುವಾಗ ಅಮೇರಿಕಾ ಹಿನ್ನಡೆಯುತ್ತಿದೆ. ಈ ಒಂದು ಸ್ಥಿತಿಗೆ ಅಮೇರಿಕಾ ಹೇಗೆ ಬಂದು ತಲುಪಿತು? ಇದೆಲ್ಲ ಮೂರು ದಶಕಗಳ ಸರ್ಕಾರ ವಿರೋಧಿ ವಾಕ್ಚಾತುರ್ಯದ

ಪರಿಣಾಮ. ಆ ವಾಕ್ಚಾತುರ್ಯದ ಕಾರಣದಿಂದಗಿ ತೆರಿಗೆಯ ಮಲಕ ಸಂಗ್ರಹಿಸಿದ ಡಾಲರ್ ಯಾವಾಗಲೂ ದುರ್ವೆಚ್ಚವೆಂದು ಮತದಾರರು ನಂಬುವಂತೆ ಮಾಡಿತು. ಅಲ್ಲದೇ ಸಾರ್ವಜನಿಕ ಕ್ಷೇತ್ರವು ಏನನ್ನೂ ಸರಿಯಾಗಿ ಮಾಡುವುದಿಲ್ಲ ಎನ್ನುವಂತೆ ಮಾಡಿತು. ಸರ್ಕಾರ ವಿರೋಧಿ ಚಳುವಳಿಯನ್ನು ಯಾವಾಗಲೂ ದುರ್ವೆಚ್ಚ ಮತ್ತು ಮೋಸದ ವಿರುದ್ಧವಾಗಿಯೇ ಬಳಸಲಾಗಿದೆ ಎಂದು ಬಣ್ಣಿಸಲಾಗಿದೆ. ಶ್ರೀಮಂತರ ಪತ್ನಿಯರು ಐಷಾರಾಮಿ ಕಾರುಗಳನ್ನು ಓಡಿಸುವುದಕ್ಕೆ ಕಡಿವಾಣ ಹಾಕುವುದೆಂದು ಭಾವಿಸಲಾಯಿತು ಮತ್ತು ಬಹುದೊಡ್ಡ ಸಂಖ್ಯೆಯಲ್ಲಿರುವ ಅಧಿಕಾರಿಗಳು ನಿರರ್ಥಕವಾಗಿ ದಾಖಲೆಗಳನ್ನು ಅತ್ತಿಂದಿತ್ತ-ಇತ್ತಿಂದತ್ತ ತಳ್ಳುವ ವಿರುದ್ಧವೂ ಎಂದು ಭಾವಿಸಲಾಯಿತು. ಇದೆಲ್ಲವೂ ಹಾರಿಕೆ ಸುದ್ದಿ ಮತ್ತು ಇಷ್ಟೊಂದು ದುಂದುವೆಚ್ಚ ಮತ್ತು ಮೋಸ ಇಲ್ಲವೆಂದೂ, ಸರಿಯೆಂದೂ ಭಾವಿಸುವ ಜನರು ಹೇಳಿಕೊಳ್ಳುತ್ತಾರೆ. ಈಗ ಆಂದೋಲನವು ಒಂದು ನಿರ್ದಿಷ್ಟ ಫಲ ಕೊಡುವ ಹಂತಕ್ಕೆ ಬಂದಿದೆ. ನಿಜವಾಗಿಯೂ ತೊದರೆಗೀಡಾಗಿರುವುದು ಯಾವುದೆಂದೂ ಗೊತ್ತಾಗುತ್ತಿದೆ. ಅತಿ ಶ್ರೀಮಂತರನ್ನು ಬಿಟ್ಟು ಬೇರೆಲ್ಲರಿಗೂ ಅಗತ್ಯವಾಗಿರುವಂತಹ ಸೇವೆಗಳು ಅಂದರೆ ಸರ್ಕಾರ ಖಡ್ಡಾಯವಾಗಿ ಒದಗಿಸಲೇಬೇಕಾದಂತಹ ಸೇವೆಗಳು. ಉದಾಹರಣೆಗೆ ಪ್ರಕಾಶಮಾನವಾದ ಬೀದಿ ರಸ್ತೆಗಳು, ವಾಹನ ಚಲಾಯಿಸಲು ಯೋಗ್ಯವಾದ ರಸ್ತೆಗಳು ಮತ್ತು ಜನಸಾಮಾನ್ಯರೆಲ್ಲರಿಗೂ ದೊರೆಯಬಹುದಾದ ವಿದ್ಯಾಭ್ಯಾಸ. ಹೀಗೆ ಸರಕಾರ ವಿರೋಧದ ಅಂತಿಮ ಪರಿಣಾಮವೇನೆಂದರೆ ಅಮೇರಿಕಾ ಅತಿ ಅಪಾಯಕಾರಿ ತಪ್ಪು ತಿರುವನ್ನು ತೆಗೆದುಕೊಂಡಿದೆ. ಈಗ ಅಮೇರಿಕಾ ಬೆಳಕಿಲ್ಲದ ಒರಟಾದ ರಸ್ತೆಯ ಮೇಲೆ ಗೊತ್ತಿಲ್ಲದ ಗುರಿಯ ಕಡೆ ಪಯಣ ಬೆಳೆಸಿದೆ.

– ಸಾಭಾರ : ನ್ಯೂಯಾರ್ಕ್ ಟೈಮ್ಸ್;ಅನು : ಸುರೇಂದ್ರ ಕೌಲಗಿ

* * *

ಪ್ರಸ್ತುತ . . .

ಅದಿರುಗಣಿಯ ಸೂಪರ್
ಲೂಟಿಗಾರರು ಪರಸ್ಪರ
ಉಡಿಗೆ ಕೈ ಹಾಕಿ ಬೀದಿಯಲಿ
ಎಳೆದಾಡಿದಾಗ ಬೆತ್ತಲಾದರು.
ಓಟು ಹಾಕಿದವರು ಬೆಪ್ಪಾದರು.
ಸಾವಿರ ಸಾವಿರ ಕೋಟಿ
ತಿಂದು ತೇಗುತ್ತಿರುವವರ...

ಏನೂ ಮಾಡಲಾಗದೆ ಮೈಗಳ
ಪರ, ಪರ ಪರಚಿಕೊಂಡರು
ಆಯೋಗಗಳ ರಚಿಸಿ
ವರದಿಗಳ ತಯಾರಿಸಿ
ಅವುಗಳ ಕಪಾಟಿನಲ್ಲಿರಿಸಿ
ಆಳುವವರು ಕಿರುನಗೆ ನಕ್ಕರು.
ಇಪ್ಪತ್ತನಾಲ್ಕು ಕ್ಯಾರಟ್ ಶುದ್ಧಾತಿ
ಶುದ್ಧ ಪುಣ್ಯ ಪುರುಷರ ಕಂಡು
ಸಾಮೂಹಿಕ ನಪುಂಸಕರಾದರು.

– ಡಾ. ಡಿ. ಬಿ. ರಾಮಚಂದ್ರಾಚಾರ್

ಭ್ರಷ್ಟಾಚಾರದ ವಿರುದ್ಧ ಮೊಳಗಿದ 'ಪಾಂಚಜನ್ಯ'

– ರೋಹಿಣಾಕ್ಷ ಶಿರ್ಲಾಲು

ಆ ಊರಿಗೆ ಊರೇ ತನ್ನ ಹೆಜ್ಜೆ ಹಾಕುತ್ತಿತ್ತು. ಆಗಾಗ ಸುರಿವ ಜಿನಗು ಮಳೆ, ಮತ್ತೆ ಆಗೊಮ್ಮೆ ಈಗೊಮ್ಮೆ ಪ್ರಖರವಾಗಿ ಉರಿಯುವ ಸೂರ್ಯನ ಬಿಸಿಲು ಆ ಹೆಜ್ಜೆಗಳನ್ನು ಬಳಲಿಸಲಿಲ್ಲ. ಕೈಯಲ್ಲೊಂದು ನ್ಯಾಯ ಬೇಡುವ ಫಲಕವನ್ನು ಹಿಡಿದಿದ್ದರೆ, ಬಾಯಲ್ಲಿ ದುರುಳ ಭ್ರಷ್ಟರ ವಿರುದ್ಧ ಧಿಕ್ಕಾರ ಕೂಗುತ್ತಿದ್ದರು. ಅಧರ್ಮದ ವಿರುದ್ಧ ಧರ್ಮ ಯುದ್ಧ ಸಾರುವ ಸಂಕೇತವಾಗಿ 'ಶಂಖ'ವನ್ನು ಊದುತ್ತಿದ್ದರೆ, ಭ್ರಷ್ಟರ ಎದೆ ನಡುಗಿಸುವ ಜಾಗಟೆ ಬಾರಿಸುತ್ತಿದ್ದರು. ಇದು ತುಕ್ಕು ಹಿಡಿದಿರುವ ಆಡಳಿತ ಯಂತ್ರಕ್ಕೆ ಚುರುಕು ಮುಟ್ಟಿಸಿ, ಜನರನ್ನು ಹಿಂಡಿ ಹೀರುವ ಅಧಿಕಾರಶಾಹಿಯ ಭ್ರಷ್ಟಾಚಾರಕ್ಕೆ ವಿರುದ್ಧವಾಗಿ ನಡೆದ 'ಪಾಂಚಜನ್ಯ' ಪಾದಯಾತ್ರೆಯ ದೃಶ್ಯವಾಗಿತ್ತು.

ಇದು ನಡೆದದ್ದು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಮರ್ಕಂಜ ಗ್ರಾಮಸ್ಥರಿಂದ. ಆಗಸ್ಟ್ 12ರಂದು ಊರಿಗೆ ಊರೇ ಒಂದಾಗಿ ಒಂದೇ ದಿಕ್ಕಿನ ಕಡೆಗೆ ನಡೆಯುತ್ತಿತ್ತು. ಕಳೆದ ಸಾಲಿನಲ್ಲಿ ಅಧಿಕಾರದಲ್ಲಿದ್ದ ಪಂಚಾಯತ್ ಆಡಳಿತ ನಡೆಸಿದ್ದ ಲಕ್ಷಾಂತರ ರೂಪಾಯಿ ಅವ್ಯವಹಾರವನ್ನು ಬಯಲಿಗೆಳೆದ 'ಭ್ರಷ್ಟಾಚಾರ ವಿರೋಧಿ ಜನಜಾಗೃತಿ ಸಮಿತಿ' ಭ್ರಷ್ಟರಿಗೆ ತಕ್ಕ ಶಿಕ್ಷೆಗೆ ಆಗ್ರಹಿಸಿ 'ಪಾಂಚಜನ್ಯ' ಪಾದ ಯಾತ್ರೆಯನ್ನು ಹಮ್ಮಿಕೊಂಡಿತ್ತು.

'ಮರ್ಕಂಜ' ಸುಳ್ಯ ತಾಲೂಕಿನ ಒಂದು ಚಿಕ್ಕ ಗ್ರಾಮ. ಆ ಗ್ರಾಮದಲ್ಲಿರುವ ಮನೆಗಳು ಸುಮಾರು 600. ಬೆಳಿಗ್ಗೆ ಒಂಭತ್ತು ಗಂಟೆಗೆ ಆರಂಭವಾಗಿ ಸಂಜೆ ನಾಲ್ಕು ಗಂಟೆಯವರೆಗೆ ನಡೆದ ಸುಮಾರು 28 ಕಿಲೋಮೀಟರ್ ದೂರದ ಪಾದಯಾತ್ರೆಯಲ್ಲಿ ಒಂದು ಮನೆಯಿಂದ ಕನಿಷ್ಠ ಒಬ್ಬರಿಂದ ಹಿಡಿದು, ಇಡೀ ಮನೆಗೆ ಮನೆಯೇ ಬೀಗ ಹಾಕಿ ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು. ಪಕ್ಷಭೇದವಿಲ್ಲದೆ, ನೂರಾರು ಮಹಿಳೆಯರೂ ಸೇರಿದಂತೆ ಹದಿನಾರರ ಯುವಕ–ಯುವತಿಯರಿಂದ ತೊಡಗಿ ಎಪ್ಪತ್ತರ ವಯೋಮಾನದ ವೃದ್ಧರವರೆಗೆ ಆ ಪಾದಯಾತ್ರೆಯಲ್ಲಿ ಜೊತೆಗೆ ಹೆಜ್ಜೆ ಹಾಕಿದ್ದರು. ಆ ಮೂಲಕ ಭ್ರಷ್ಟಾಚಾರದ ವಿರುದ್ಧ ತಮ್ಮ ಪ್ರತಿಭಟನೆಯ ಕೆಚ್ಚನ್ನು ತೋರಿಸಿದರು. ಅಲ್ಲಿ ಯಾರೂ ಬಾಡಿಗೆ ಜನರಿರಲಿಲ್ಲ. ಬಂದವರು ಯಾರೂ ರಾಜಕೀಯ ಪಕ್ಷಗಳ ಸಮಾವೇಶಕ್ಕೆ ಬಂದಂತೆ 'ದಿನಗೂಲಿ'ಗಾಗಿ ಬಂದಿರಲಿಲ್ಲ. ಪಾದಯಾತ್ರೆಯ ನಡುವೆ ಅವರಿಗೆ ಎಲ್ಲೂ ಒಣದ್ರಾಕ್ಷಿ ಗೋಡಂಬಿಗಳ ಪೂರೈಕೆಯಾಗಲೀ, ಮೃಷ್ಟಾನ್ನ ಭೋಜನದ ವ್ಯವಸ್ಥೆಯಾಗಲೀ ಇರಲಿಲ್ಲ. ಅವರವರ ಮನೆಯಿಂದ ತಂದಿದ್ದ ಬುತ್ತಿಯೇ ಮಧ್ಯಾಹ್ನಕ್ಕೆ ಊಟವಾಗಿತ್ತು. ಪಾದಯಾತ್ರಿಗಳು ತಂತಮ್ಮ ಮನೆಯಿಂದಲೇ ಮಧ್ಯಾಹ್ನದ ಊಟವನ್ನು ಜೊತೆಯಲ್ಲಿ ತರಬೇಕು ಎನ್ನುವುದು ಅಲ್ಲಿನ ಸೂಚನೆಯಾಗಿತ್ತು.

ತಾವೇ ಓಟು ಹಾಕಿ ಗೆಲ್ಲಿಸಿದ, ತಮ್ಮ ಮನೆಯಂಗಳದ ಪಂಚಾಯತ್ ಸದಸ್ಯರೇ ತಮಗೆ ವಂಚನೆ ಮಾಡಿದ್ದರ ವಿರುದ್ಧ ಅವರಲ್ಲಿ ಆಕ್ರೋಶ ತುಂಬಿತ್ತು. ಐದು ವರ್ಷದ ಆಡಳಿತಾವಧಿಯಲ್ಲಿ ಹದಿನೆಂಟು ಮಂದಿ ಹೆಸರಿನಲ್ಲಿ ಎರಡೆರಡು ಮನೆ ಮಂಜೂರು ಮಾಡಿ ಹಣ ಡ್ರಾ ಮಾಡಿರುವುದು ಇಲ್ಲಿ ಬೆಳಕಿಗೆ ಬಂದಿತ್ತು. ಇಂದಿರಾ ಆವಾಸ್,

ಆಶ್ರಯ ಯೋಜನೆಯಲ್ಲಿ ಒಟ್ಟು 138 ಮನೆ ನೀಡಿದ್ದರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಜನರಿಗೆ ತಮಗೆ ಮನೆ ಮಂಜೂರಾದ ಬಗ್ಗೆ ಗೊತ್ತೇ ಇಲ್ಲ. ಊರಲ್ಲೇ ಇಲ್ಲದವರ ಹೆಸರಿನಲ್ಲೂ ಮನೆ ನೀಡಲಾಗಿದೆ. ಒಂದೇ ಮನೆಯಲ್ಲಿ ಗಂಡನ ಹೆಸರಿಗೊಂದು, ಹೆಂಡತಿಗೊಂದು, ಮಕ್ಕಳಿಗೊಂದು ಶೌಚಾಲಯವನ್ನು ಮಂಜೂರು ಮಾಡಿದ್ದರೂ ಆ ಮನೆಯಲ್ಲಿ ನಿಜವಾಗಿ ಒಂದೂ ಶೌಚಾಲಯವಿಲ್ಲವೆನ್ನುವ ವಾಸ್ತವವೇ ಆ ಗ್ರಾಮದ ಜನರನ್ನು ಹೋರಾಟಕ್ಕೆ ಎಳೆಸಿದ್ದು.

ಯಾವುದೇ ಪೂರ್ವಾಗ್ರಹವಿಲ್ಲದೆ, ಕೇವಲ ಆಡಳಿತದ ಪಾರದರ್ಶಕತೆಗಾಗಿ, ಮಲಿನ ವ್ಯವಸ್ಥೆಯ ಶುದ್ಧೀಕರಣಕ್ಕಾಗಿ, ಅಂತಿಮವಾಗಿ ಸಾಮಾನ್ಯ ಪ್ರಜೆಯ ನ್ಯಾಯ ರಕ್ಷಣೆಗಾಗಿ ಪಕ್ಷಭೇದವಿಲ್ಲದೆ ನಡೆದ ಈ ಪಾದಯಾತ್ರೆ ನಾಡಿಗೇ ಮಾದರಿ. ಇಂದು ಭ್ರಷ್ಟಾಚಾರ ಎಂಬ ಕ್ಯಾನ್ಸರ್‌ನ ವಿರುದ್ಧದ ಹೋರಾಟ, ಆಂದೋಲನಗಳು ಗ್ರಾಮಗಳಿಂದಲೇ ಆರಂಭವಾಗಬೇಕಾಗಿದೆ. ನೂರಾರು ಕೋಟಿ ರೂಪಾಯಿಯ ದೊಡ್ಡ ದೊಡ್ಡ ಹಗರಣಗಳು ಎಂದಾದರೊಮ್ಮೆ ಬಯಲಾಗುತ್ತಿದ್ದರೂ, ನಮ್ಮ ಗ್ರಾಮ ಪಂಚಾಯತ್ ಮಟ್ಟದಲ್ಲಿ ನಡೆಯುವ ಲಕ್ಷಾಂತರ ರೂಪಾಯಿಯ ವಂಚನೆಯ ಪ್ರಕರಣಗಳು ಮುಚ್ಚಿ ಹೋಗುವ ಸಾಧ್ಯತೆಯೇ ಹೆಚ್ಚು. ಮುಖ್ಯವಾಗಿ ಗ್ರಾಮೀಣ ಜನತೆಯ ಅಸಹಾಯಕತೆ, ಅನಕ್ಷರತೆಗಳನ್ನು ಬಳಸಿಕೊಂಡು ಗ್ರಾಮದ ಅಭಿವೃದ್ಧಿಗಾಗಿ ಬಿಡುಗಡೆಯಾಗುವ ಕೋಟ್ಯಂತರ ರೂಪಾಯಿ ಅನುದಾನ ಅಧಿಕಾರಸ್ಥರ ನಡುವೆಯೇ ಹಂಚಿಹೋಗುವ, ಪ್ರಶ್ನಿಸುವುದಕ್ಕೆ ಹೋದರೆ ಅಲ್ಲೇ ಬೆದರಿಸಿ ಮುಚ್ಚಿ ಹಾಕುವ ಸಾಧ್ಯತೆಗಳಿರುವಲ್ಲಿಯೇ ಪ್ರತಿಭಟನೆಗಳು ಹುಟ್ಟಿಕೊಳ್ಳಬೇಕಾಗಿದೆ.

ಎಲ್ಲ ಪಕ್ಷಗಳಲ್ಲೂ ಇಂದು ಭ್ರಷ್ಟ ರಾಜಕಾರಣಿಗಳು ತುಂಬಿಕೊಳ್ಳುತ್ತಿರುವಾಗ, ಎಲ್ಲಾ ಕ್ಷೇತ್ರಗಳಲ್ಲೂ ಭ್ರಷ್ಟ ಅಧಿಕಾರಿಗಳು ನೆಲೆಗೊಳ್ಳುತ್ತಿರುವಾಗ ಪ್ರತಿ ನಾಗರಿಕನೂ ಜಾಗೃತನಾದಾಗ ಮಾತ್ರ ಭ್ರಷ್ಟಾಚಾರದ ನಿರ್ಮೂಲನೆ ಸಾಧ್ಯ.

ಈಗಾಲೇ ಭ್ರಷ್ಟಾಚಾರ ವಿರೋಧಿ ಜನಜಾಗೃತಿ ಸಮಿತಿ ಗ್ರಾಮದಲ್ಲಿ ಮೂಡಿಸಿದ ಎಚ್ಚರದ ಪರಿಣಾಮವಾಗಿ ಮೊನ್ನೆ ನಡೆದ ಪಂಚಾಯತ್ ಚುನಾವಣೆಯಲ್ಲಿ ಭ್ರಷ್ಟರನ್ನು ಮನೆಗೆ ಕಳುಹಿಸಿ ಅಧಿಕಾರದ ಜಾಗದಲ್ಲಿರುವ ಪ್ರತಿನಿಧಿಗಳನ್ನು ಬದಲಾಯಿಸಿದ್ದಾರೆ. ಭ್ರಷ್ಟಾಚಾರ ಎಂಬ ಆಡಳಿತಾತ್ಮಕ ವ್ಯಭಿಚಾರಕ್ಕೆ ಮರ್ಕಂಜದ ಜನ ನಪುಂಸಕರಾಗದೆ ಹೋರಾಟವನ್ನು ಆರಂಭಿಸಿದ್ದಾರೆ. ಈಗಾಲೇ ತನಿಖೆ ಪ್ರಾರಂಭವಾಗಿದೆ. ಜಿಲ್ಲಾಧಿಕಾರಿಗಳೇ ಒಂದು ದಿನ ಅಲ್ಲೇ ಬಂದು ಮೊಕ್ಕಾಂ ಹೂಡುವ ಭರವಸೆ ನೀಡಿದ್ದಾರೆ.

ಈ ಭ್ರಷ್ಟಾಚಾರ ವಿರೋಧಿ ಜನಜಾಗೃತಿ ಸಮಿತಿ ಪಕ್ಷಾತೀತ ನೆಲೆಯ ನಾಯಕತ್ವವನ್ನು ಹೊಂದಿದೆ. ಆ ನಾಯಕರು ಪಕ್ಷಗಳಲ್ಲಿ ದುಡಿದಿದ್ದರೂ ಅಧಿಕಾರ ಬಯಸಿದವರಲ್ಲ. ಹಾಗಾಗಿ ಶುದ್ಧ ಹಸ್ತರಾಗಿದ್ದಾರೆ.

ಕರ್ನಾಟಕದ ಒಂದು ಮೂಲೆಯಲ್ಲಿರುವ ಸುಳ್ಯದ ಗ್ರಾಮವೊಂದರಲ್ಲಿ ಹುಟ್ಟಿದ ಈ ಹೋರಾಟದ ಕಿಡಿ ನಾಡಿನಾದ್ಯಂತ ಜ್ವಲಿಸಬೇಕಾಗಿದೆ. ತಳಮಟ್ಟದಿಂದಲೇ ಈ ಜಾಗೃತಿ, ಹೋರಾಟ ರೂಪುಗೊಳ್ಳಬೇಕಾಗಿದೆ. ಮಹಿಳೆ–ಪುರುಷ, ಹಿರಿಯ–ಕಿರಿಯರೆಂಬ ಭೇದವಿಲ್ಲದೆ ಭಾಗವಹಿಸಿ ನಾಡಿಗೆ ಜಾಗೃತಿಯ ಸಂದೇಶ ನೀಡಿದ ಗ್ರಾಮಸ್ಥರ ಸಾಧನೆ ಮೆಚ್ಚುವಂತಹದು. ಭ್ರಷ್ಟರಿಗೆ ಶಿಕ್ಷೆಯಾಗುವವರೆಗೆ ವಿರಮಿಸುವುದಿಲ್ಲ ಎಂಬ ಗ್ರಾಮಸ್ಥರ ಸಂಕಲ್ಪಕ್ಕೆ ನಾಡಿನ ಪ್ರಜ್ಞಾವಂತರ ಬೆಂಬಲ ದೊರೆಯಲಿ.

(ಸಾಭಾರ : ವಿಜಯ ಕರ್ನಾಟಕ)

ಕಡ್ಡಾಯ ಮತದಾನ ಅಸಾಧ್ಯ

– ಎ.ಎಸ್.ಆರ್.ಶರ್ಮ

ಮತದಾನ ಎಂದರೇನು? ಒಪ್ಪಿಗೆಯನ್ನು ತಮ್ಮ ಗುರುತಿನ ಚೀಟಿಯಲ್ಲಿ ಗುರುತಿಸಿ ಕೊಡುವುದು.

ಒಪ್ಪಿಗೆ ಎನ್ನುವುದು ಮನುಷ್ಯನ ಅಂತರಂಗದ ಸತ್ಯ. ಇದು ಒಂದು ವಿಷಯದ ಬಗ್ಗೆ ಅವನದೇ ಆದ ಅಭಿಪ್ರಾಯ. ನಮ್ಮ ಅಭಿಪ್ರಾಯವನ್ನು ಇನ್ನೊಬ್ಬರಿಗೆ ಕೊಡಲು ಸಾಧ್ಯವಿಲ್ಲ. ಇದು ನಿಜವಾದ ಆತ್ಮ ಧರ್ಮ. ಇದನ್ನು ಬರವಣಿಗೆಗಳಿಂದ, ಸೂಚನೆಗಳಿಂದ ಮತ್ತೊಬ್ಬರಿಗೆ ಗುರುತು ಮಾಡಿ ತಿಳಿಸಬಹುದಷ್ಟೇ. ತಿಳಿದುಕೊಂಡವರ ಅಭಿಪ್ರಾಯ ಹೀಗೆಯೇ ಇರಬೇಕೆಂದೇನಿಲ್ಲ. ಹಲವರ ಅಭಿಪ್ರಾಯಗಳು ಒಂದೇ ರೀತಿ ಇದ್ದರೂ ಅವೆಲ್ಲವೂ ಪ್ರತ್ಯೇಕವಾಗಿ ಅವರವರದೇ ಅಭಿಪ್ರಾಯಗಳು. ಹೃದಯಾಂತರಾಳದಿಂದ ಬಂದ ಅಭಿಪ್ರಾಯವನ್ನು ನಾವು ಮತ್ತೊಬ್ಬರ ಮೇಲೆ ಹೇರುವುದು ತರವಲ್ಲ. ಮತ್ತೊಬ್ಬರ ಅಭಿಪ್ರಾಯವನ್ನೂ ನಮ್ಮ ಮೇಲೆ ಹೇರಲು ಅವಕಾಶ ಕೊಡಬಾರದು. ಈಗ ಮತಚೀಟಿಯಲ್ಲಿ ಬೀಳುವ ಮುದ್ರೆ ಬೇರೆಯವರ ಅಭಿಪ್ರಾಯಕ್ಕೆ ತಕ್ಕಂತೆ ಕುಣಿಯುವ ಪ್ರಾಮಾಣಿಕರಲ್ಲದ ಜನರಿಂದ ಆಗಿರುತ್ತದೆ. ಇದೊಂದು ಆತ್ಮ ವಂಚನೆ, ಆತ್ಮಾಪಹಾರ. ಇದನ್ನು ಮಹಾಭಾರತದಲ್ಲಿ ಸನತ್ಸುಜಾತನಲ್ಲೂ, ಶಕುಂತಲೆಯ ಧೀರ ಮಾತಿನಲ್ಲೂ ಕಾಣಬಹುದು. ದುಷ್ಯಂತನು ಮಹಾರಾಜನಾಗಿದ್ದು ತನ್ನ ಒಳ ಮತವನ್ನು ಹಾಕದೇ, ನೀನಾರೋ ಗೊತ್ತಿಲ್ಲ ಎಂದು ರಾಜಕೀಯ ಮತವನ್ನು ಘೋಷಿಸಿಬಿಟ್ಟ. ಈ ತಪ್ಪು ಭಾರತದ ಇತಿಹಾಸದಲ್ಲಿದೆ. ಕಾಳಿದಾಸ ಮಾತ್ರ ರಾಜನು ಮರೆತಿದ್ದನೆಂದೂ, ಮರೆವಿಗೆ ಕಾರಣ ದೂರ್ವಾಸ ಋಷಿಯ ಶಾಪವೆಂದೂ ಇತಿಹಾಸವನ್ನು ತಿರುಚಿ ರಾಜಗೌರವಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾನೆ. ಧೀರೆಯಾದ ಶಕುಂತಲೆಯ ಮಾತನ್ನು ಎತ್ತಿ ಹಿಡಿದಿಲ್ಲ. 'ನೀನು ಪಕ್ಕಾ ಕಳ್ಳ, ದೊಡ್ಡ ಮೋಸಗಾರ; ಆಡಿದ್ದನ್ನು, ಮಾಡಿದ್ದನ್ನು, ನೋಡಿದ್ದನ್ನು ಇಲ್ಲ ಎಂದು ಬದಲಾಯಿಸುವ ಆತ್ಮಚೋರ' ಎಂದು ಸಭೆಯಲ್ಲಿ ರಾಜನಿಗೆ ಹೇಳಿದ ಶಕುಂತಲೆ ಮಹಾಭಾರತದ ಹದಿನಾರು ಮಹಾಮಾತೆಯರಲ್ಲಿ ಒಬ್ಬಳು. ವ್ಯಾಸರು ಸ್ತ್ರೀವಾದಿಯೂ ಅಲ್ಲ, ಪುರುಷವಾದಿಯೂ ಅಲ್ಲ. ಅವರು ಇತಿಹಾಸದ ಯಥಾರ್ಥವಾದಿ. ಹೀಗೆ ಈಗಿನ ಓಟಿನ ವ್ಯವಹಾರವೆಲ್ಲ ಬಲಾತ್ಕಾರದ, ಅಧರ್ಮದ ಒಪ್ಪಿಗೆಯ ಆಟ.

ಮತವು ಆತ್ಮ ಧರ್ಮವಾದುದರಿಂದಲೇ ಅದನ್ನು ಮತ್ತೊಬ್ಬರಿಗೆ ದಾನ ಮಾಡುವುದು ಎಂಬ ಮಾತೇ ಯುಕ್ತವಲ್ಲದ್ದು. ದಾನ ಎಂದರೆ ನ್ಯಾಯವಾಗಿ ಸಂಪಾದಿಸಿದ ವಸ್ತುವಿನ ಒಂದಂಶವನ್ನಾದರೂ ಅರ್ಹರಾದ ಮತ್ತೊಬ್ಬರ ವಶಕ್ಕೆ ಕೊಟ್ಟು, ಕೊಟ್ಟ ಮೇಲೆ ಅದು ನನ್ನದಲ್ಲ "ನ ಮಮ" ಎಂದು ದೃಢವಾಗಿರಬೇಕು. ಈಗ ಓಟನ್ನು ಕೊಡುವುದೆನ್ನುವಾಗ ಪಡೆದವನಿಗೆ ಅದು ಸೇರಬೇಕು. ಅದನ್ನು ಅವನು ಸಮಾಜಕ್ಕೆ, ರಾಷ್ಟ್ರಕ್ಕೆ, ತನಗೆ, ತನ್ನವರಿಗೆ ಬಳಸಿಕೊಳ್ಳಬಹುದು. ಓಟು ಕೊಟ್ಟವರು ಸಾಮಾನ್ಯವಾಗಿ ನೂರಕ್ಕೆ ನಲ್ವತ್ತರಷ್ಟು ಜನ ಮಾತ್ರ. ಆ ನಲ್ವತ್ತು ಜನರು ಬಲಾತ್ಕಾರದಿಂದಲೋ, ಆಮಿಶದಿಂದಲೋ ಕೊಟ್ಟ ಅಭಿಪ್ರಾಯವನ್ನು ಉಳಿದ ಅರವತ್ತು ಜನರೂ ಒಪ್ಪಿದಂತೆಯೇ ಹೊರತು ಅದು ಅವರ ಅಭಿಪ್ರಾಯವಂತೂ ಆಗಲಾರದು. ಪಡೆದವರ ಅಧಿಕಾರ ನಡೆಯುತ್ತದೆ. ಇದೊಂದು ಶತಮೂರ್ಖ ವ್ಯವಸ್ಥೆಯಲ್ಲವೇ!

ಜನರನ್ನು ಬಲವಂತವಾಗಿ ಓಟು ಹಾಕಿಸುವುದನ್ನು ತಡೆಯುವ ಕಾನೂನಾಗಲೀ, ಜಾರಿಗೆ ತರುವವರಾಗಲೀ ರಾಷ್ಟ್ರದಲ್ಲಿಲ್ಲ. ಎಲ್ಲರೂ ದುಷ್ಯಂತರೇ. ಶಕುಂತಲೆಯಲ್ಲ. ಈ ಪರಿಸ್ಥಿತಿಯಲ್ಲಿ ಇಂತಹ ಓಟನ್ನು ಕಡ್ಡಾಯ ಮಾಡುವುದು ಅತ್ಯಂತ ಅನೀತಿಯ ಕಾರ್ಯವೂ, ರಾಷ್ಟ್ರನಾಶಕವೂ ಆದುದಾಗಿದೆ. ಇದು ಅಸಾಧ್ಯ ಎಂಬ ಮಾತು ರಾಜಕೀಯ, ಸರಕಾರೀ ಅಧಿಕಾರಿಗಳ ಬಾಯಿಯಿಂದ ಬಂದರೆ ಅದರ ಹಿನ್ನೆಲೆಯಲ್ಲಿ ರಾಷ್ಟ್ರನಾಶಕ ಓಟಿನ ಕಡ್ಡಾಯ ಚಿಂತನೆ ಇದೆ ಎಂದು ತೋರುವುದು.

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಇತ್ತೀಚಿಗೆ ಟ್ರಸ್ಟಿಗೆ ಭೇಟಿಕೊಟ್ಟವರಲ್ಲಿ ವಿಶೇಷವಾದ ವ್ಯಕ್ತಿಯೆಂದರೆ ಜಮ್ಮು ಬೆಹನ್. ಇವರು ಗುಜರಾತ್ ರಾಜ್ಯದವರು. ಆದರೆ ಕರ್ನಾಟಕದೊಂದಿಗಿನ ಅವರ ಸಂಬಂಧ ಹದಿನಾಲ್ಕು ವರ್ಷಗಳಷ್ಟು ದೀರ್ಘವಾದದ್ದು. ಇದಕ್ಕೆ ಕಾರಣ ಸರ್ವೋದಯ ಆಂದೋಲನದ ವಿಚಾರ. ಕರ್ನಾಟಕ, ತಮಿಳುನಾಡು, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಲ್ಲಿ 'ಕುಟ್ಟಿ' ಎಂದೇ ಪ್ರಸಿದ್ಧರಾದ ವಿನೋಬಾ ಭಾವೆಯವರ ಅನುಯಾಯಿ ಮತ್ತು ಸರ್ವೋದಯ ಕಾರ್ಯಕರ್ತರು. ಕುಟ್ಟಿಯವರು ಮೂಲತಃ ಮೇಲುಕೋಟೆಯವರು. ಜನಪದ ನಿಲಯವು ಅವರ ಸ್ವಂತ ಮನೆಯಾಗಿತ್ತು.

ವಿನೋಬಾರವರ ವಿಚಾರದಿಂದ ಪ್ರಭಾವಿತರಾಗಿ ಅವರ ಸಂಪರ್ಕಕ್ಕೆ ಬಂದು ಸುಮಾರು ಹದಿನಾಲ್ಕು ವರ್ಷಗಳ ಭೂದಾನ ಆಂದೋಲನದ ಉದ್ದೇಶಕ್ಕಾಗಿ ಪಾದಯಾತ್ರೆ ನಡೆಸಿದ್ದರು. ಅವರ ಎರಡೂ ಕೈಗಳು ಸ್ವಾಧೀನದಲ್ಲಿ ಇರಲಿಲ್ಲ. ಕಾಲುಗಳು ಮಾತ್ರ ಚೆನ್ನಾಗಿದ್ದವು. ಕೈಗಳಿಂದ ಯಾವ ಕೆಲಸವನ್ನೂ ಮಾಡಿಕೊಳ್ಳಲು ಸಾಧ್ಯವಿರಲಿಲ್ಲವಾದರೂ ವಿನೋಬಾರ ಆಣತಿಯಂತೆ ಕುಟ್ಟಿಯವರು ಹದಿನಾಲ್ಕು ವರ್ಷಗಳ ಕಾಲ ಪಾದಯಾತ್ರೆ ಮಾಡಿದರು. ಎರಡೂ ಹೆಗಲುಗಳ ಮೇಲೆ ಚೀಲಗಳನ್ನು ನೇತಾಡಿಸಿಕೊಂಡು ಹೊರಟು ಬಿಟ್ಟರೆ. ತಮ್ಮ ನಿಗದಿತ ಬಿಡದಿಯವರೆಗೂ ಆಯಾಸವಿಲ್ಲದೆ ನಡೆದುಕೊಂಡು ಹೋಗುತ್ತಿದ್ದರು. ಅವರಿಗೆ ವೈಚಾರಿಕ, ಆಧ್ಯಾತ್ಮಿಕ ಮತ್ತು ನೈತಿಕ ಬೆಂಬಲ ಕೊಟ್ಟವರು ವಿದ್ವಾಂಸರಾದ ಅರೈಯರ್ ಶ್ರೀನಿವಾಸ ಅಯ್ಯಂಗಾರ್ ಅವರು. ಅರೈಯರ್ ಅವರು ಕೇವಲ ನೈತಿಕ ಬೆಂಬಲ ಮಾತ್ರವಲ್ಲ ಕುಟ್ಟಿಯವರ ಜೊತೆ ಪಾದಯಾತ್ರೆಯನ್ನೂ ಮಾಡಿದರು. ಒಂದು ರೀತಿಯಲ್ಲಿ ಅವರದು ಗುರುಶಿಷ್ಯ ಸಂಬಂಧ. 'ಕುಟ್ಟಿ'ಯವರು ಗುಜರಾತ್ ರಾಜ್ಯಕ್ಕೆ ಪಾದಯಾತ್ರೆ ಹೋದಾಗ ಆ ರಾಜ್ಯದ ಸರ್ವೋದಯ ಮಂಡಲಿಯು ಕುಟ್ಟಿಯವರ ಸೇವೆಗಾಗಿ ಸೂಕ್ತ ಕಾರ್ಯಕರ್ತರನ್ನು ಆಹ್ವಾನಿಸಿತು. ಆಹ್ವಾನಕ್ಕೆ ಮನ್ನಣೆಕೊಟ್ಟು ಕುಟ್ಟಿಯವರ ಸೇವೆಗೆ ಮುಂದೆ ಬಂದವರು ಜಮ್ಮು ಬೆಹನ್. ಕುಟ್ಟಿಯವರ ಶಾರೀರಿಕ ದೌರ್ಬಲ್ಯ ಮತ್ತು ಅವರಿಗಾಗಿ ಮಾಡಬೇಕಾದ ಅಗಾಧವಾದ ಸೇವೆಯ ಬಗ್ಗೆ ಗೊತ್ತಿದ್ದರೂ ಜಮ್ಮು ಬೆಹನ್ ಸರ್ವೋದಯ ಆಂದೋಲನದ ಹಿತದೃಷ್ಟಿಯಿಂದ ಕುಟ್ಟಿಯವರ ಸೇವೆಗೆ ಕಂಕಣಬದ್ಧರಾದರು. ಆದಿವಾಸಿ ಪಂಗಡಕ್ಕೆ ಸೇರಿದ ಜಮ್ಮು ಬೆಹನ್ ಪದವೀಧರರು. ಗುಜರಾತಿ ಭಾಷೆಯ ಮೂಲಕ ಸರ್ವೋದಯ ವಿಚಾರ ತಿಳಿದು ಅದಕ್ಕೆ ತನ್ನನ್ನು ಸಮರ್ಪಿಸಿಕೊಂಡವರು. ಕುಟ್ಟಿಯವರಿಗೆ ಸಹೋದರಿಯಾಗಿ, ತಾಯಿಯಾಗಿ ಮತ್ತು ಮಾರ್ಗದರ್ಶಕಳಾಗಿ ಹದಿನಾಲ್ಕು ವರ್ಷಕಾಲ ನಿರಂತರ

ಸೇವೆ ಮಾಡಿದರು. ಯಾವ ಫಲಾಪೇಕ್ಷೆಯನ್ನೂ ಬಯಸದ ನಿಸ್ವಾರ್ಥ ಸೇವೆ ಜಮ್ಮು ಬೆಹನ್ ಅವರದು. ಕುಟ್ಟಿಯವರು ಅಸಂಗ್ರಹಿ. ಬೆಹನ್ ಕೂಡ ಅಸಂಗ್ರಹಿ. ಜಮ್ಮು ಬೆಹನ್ ಕುಟ್ಟಿಯವರ ಅಂತ್ಯ ಕಾಲದವರೆಗೂ ಸೇವೆ ಸಲ್ಲಿಸಿ ಗುಜರಾತ್‌ನಲ್ಲಿಯ ತಮ್ಮ ಮನೆಗೆ ಹಿಂದಿರುಗಿದರು. ಈಗ ಸುಮಾರು ಹತ್ತು ವರ್ಷಗಳ ನಂತರ ಕರ್ನಾಟಕಕ್ಕೆ ಬಂದಿದ್ದರು. ಆಗ ಟ್ರಸ್ಟಿಗೂ ಭೇಟಿಕೊಟ್ಟು ಎರಡು ದಿನ ಇದ್ದರು. ಅವರ ಮಾತಿನಲ್ಲೇ ಹೇಳುವುದಾದರೆ ಟ್ರಸ್ಟಿಗೆ ಅವರ ಭೇಟಿ ಗತಿಸಿದ ಸಹೋದರನ ಮನೆಗೆ ಭೇಟಿಯಾಗಿತ್ತು.

ಇನ್ನೊಂದು ವಿಶೇಷ ಭೇಟಿ ಕರುಣಾಗೃಹದ ಹಿರಿಯ ವಿದ್ಯಾರ್ಥಿ ರಮೇಶ್‌ರಾಜುವಿನಿದು. ಈತ ಕಂಪ್ಯೂಟರ್ ತಂತ್ರಜ್ಞಾನದಲ್ಲಿ ಪದವೀಧರನಾಗಿದ್ದಾನೆ. ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡಿದ ಕರುಣಾಗೃಹದ ವಿದ್ಯಾರ್ಥಿಗಳಲ್ಲಿ ಈತನೇ ಮೊದಲಿಗನು. ನಾಲ್ಕನೇ ತರಗತಿಯಿಂದ ಹತ್ತನೇ ತರಗತಿವರೆಗೆ ಕರುಣಾಗೃಹದಲ್ಲಿ ಓದಿದ ರಮೇಶ್‌ರಾಜು ಮೊದಲಿನಿಂದಲೂ ಅಧ್ಯಯನಶೀಲ. ಸ್ವಭಾವತಃ ಸಾಧು. ತನ್ನ ವಿದ್ಯಾಭ್ಯಾಸದ ಜೀವನದಲ್ಲಿ ಎಂದೂ ವಿಫಲನಾದವನಲ್ಲ. ಪರಿಸ್ಥಿತಿ ಅನುಕೂಲವಾದಲ್ಲಿ ಇನ್ನೂ ಮುಂದಿನ ವಿದ್ಯಾಭ್ಯಾಸ ಮಾಡುವ ಹಂಬಲದಲ್ಲಿರುವ ರಮೇಶ್‌ರಾಜುವಿಗೆ ಟ್ರಸ್ಟ್‌ನ ಹಾರ್ದಿಕ ಶುಭಾಶಯಗಳು.

ಬೆಂಗಳೂರಿನ ಟ್ರಸ್ಟಿನ ಅಭಿಮಾನಿ ಶ್ರೀ ಬಿ.ವಿ.ಸುರೇಶ್ ತಮ್ಮ ತಾಯಿ ಮತ್ತು ಕುಟುಂಬದ ಸದಸ್ಯರೊಂದಿಗೆ ಟ್ರಸ್ಟಿಗೆ ಭೇಟಿಕೊಟ್ಟರು.

ಟ್ರಸ್ಟಿನ ಅಧ್ಯಕ್ಷರು ೬೪ನೇ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ ಹಾಗೂ ಚಂದನ ದೂರದರ್ಶನ ವಾಹಿನಿಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

<u>೨೦೧೦ ಅಗಸ್ಟ್ ಮಾಹೆಯ ದಾನಿಗಳು</u>

ಶ್ರೀ ಕೆ.ಎಲ್.ಸುಬ್ಬರಾವ್ ಮೆಮೋರಿಯಲ್ ಟ್ರಸ್ಟ್
ಶ್ರೀಮತಿ ಗೌರಮ್ಮ ವಿದ್ಯಾಶಂಕರ್ * ಶ್ರೀಮತಿ ಉಮಾ ಮೂರ್ತಿ
ಶ್ರೀ ನಿಖಿಲ್ * ಶ್ರೀ ಎಚ್.ಎಮ್.ಎಸ್. ಮೂರ್ತಿ
ಶ್ರೀ ರವೀಂದ್ರ ಮೊರಬ್ * ಶ್ರೀಮತಿ ಗೋದಾ ಅನಂತಕುಮಾರ್
ಶ್ರೀ ಬಿ.ಆರ್.ನಂದಕುಮಾರ್ * ಶ್ರೀ ಸಿ.ಎಸ್.ಬನಶಂಕರಯ್ಯ
ಶ್ರೀ ಆರ್.ಆರ್.ಅನವಟ್ಟಿ – ಬೆಂಗಳೂರು
ಶ್ರೀಮತಿ ಕ್ಷಮಾ ಕತ್ವಾರ್ * ಶ್ರೀಮತಿ ವೈದೇಹಿ – ಮೈಸೂರು
ಶ್ರೀ ರಾಮಪ್ರಸಾದ್ – ಚೆನ್ನೈ
ಡಾ ॥ ರಾಧಾಕೃಷ್ಣ – ತಿಪಟೂರು
ಶ್ರೀಮತಿ ಲೀಲಾ ಪ್ರಸಾದ್ – ನಗುವಿನಹಳ್ಳಿ
ಶ್ರೀ ಎನ್.ಬಿ.ಬೋರಯ್ಯ – ಬಾಬುರಾಯನ ಕೊಪ್ಪಲು
ಶ್ರೀ ರಮೇಶ್ ಕುಲಾಲ್ – ಮುಂಬಯಿ

* * *

ಜನಪದ ನಿಲಯದ ಅಂತರಂಗದಲ್ಲಿ .. ೮೨

- ಸುರೇಂದ್ರ ಕೌಲಗಿ



ಜನಪದ ನಿಲಯದ ಒಂದು ಪ್ರಮುಖ ಭಾಗ ಪುಸ್ತಕಾಲಯ. ಉಳಿದಂತೆ ನಿಲಯದ ಇತರ ಭಾಗಗಳಾದ ಎಡ-ಬಲ ಜಗಲಿಗಳು, ನಿಲಯದ ಪ್ರವೇಶದಲ್ಲಿಯೇ ಇರುವ ಚಿಕ್ಕ ಪಡಸಾಲೆ, ಎಡ ಭಾಗದಲ್ಲಿರುವ ಅಥಿತಿ ನಿವಾಸದ ಕೋಣೆ, ಅನಂತರ ನಾಲ್ಕು ಕಂಬಗಳಿರುವ ಮಧ್ಯದ ಭಾಗ, ಅದಕ್ಕೆ ಅಂಟಿಕೊಂಡಂತಿರುವ ಮೂರು ಕೊಠಡಿಗಳು, ಕೊನೆಯಲ್ಲಿ ವಿಶಾಲವಾದ ಹಿತ್ತಲು, ಹಿತ್ತಲಿನಲ್ಲಿ ದೊಡ್ಡದಾದ ಹಳೆಯ ಬೇಲದ ಮರ, ಮತ್ತು ಬಾವಿ ಇವು ಕೂಡ ಜನಪದ ನಿಲಯದ ಮುಖ್ಯ ಮತ್ತು ತುಂಬ ಉಪಯುಕ್ತ ಸ್ಥಳಗಳೇ ಆಗಿವೆ. ನಿಲಯದ ಮುಂಭಾಗದಲ್ಲಿರುವ ಮೈದಾನವು ಶಿಶುವಿಹಾರದ ಮಕ್ಕಳಾದಿಯಾಗಿ ಗ್ರಾಮದ ಮಕ್ಕಳಿಗೆಲ್ಲ ಅಚ್ಚುಮೆಚ್ಚಿನ ಆಟದ ಸ್ಥಳವಾಗಿದೆ. ಈ ಮೈದಾನವು ಊರಿನ ಮಧ್ಯಭಾಗದಲ್ಲಿರುವುದರಿಂದ ಆಟಕ್ಕೆ ಮಕ್ಕಳು ದೂರ ಹೋಗಬೇಕಾಗಿಲ್ಲ. ಈ ಮೈದಾನದಲ್ಲಿ ಸೇವಾ ದಳವು ನಡೆಯುತ್ತಿತ್ತು. ಆಗ ಗ್ರಾಮದ ಮಕ್ಕಳು ಇಲ್ಲಿ ಅನೇಕ ಬಗೆಯ ಆಟಗಳನ್ನು ಆಡಿದ್ದುಂಟು. ಕರುಣಾಗೃಹದ ಅಂಗವಿಕಲ ಮಕ್ಕಳು ಇಲ್ಲಿ ಪ್ರಾರ್ಥನೆ ಮಾಡಿದ್ದುಂಟು. ತಮ್ಮದೇ ಆದ ರೀತಿಯಲ್ಲಿ ಕ್ರಿಕೆಟ್, ಕಬಡ್ಡಿ ಮುಂತಾದ ಆಟಗಳನ್ನು ಆಡಿದ್ದಾರೆ. ಅವರೊಂದಿಗೆ ವಿದೇಶದಿಂದ ಬಂದ ವಿದ್ಯಾರ್ಥಿಗಳು, ಸ್ವಯಂಸೇವಕರು ಸಹ ಕ್ರಿಕೆಟ್ ಆಡಿದ್ದಾರೆ. ಜನಪದ ವಿದ್ಯಾಲಯದ ನೂರಾರು ಮಕ್ಕಳು ಈ ಮೈದಾನದಲ್ಲಿ ಆಡಿ ಕುಪ್ಪಳಿಸಿದ್ದುಂಟು. ಬೇಸಿಗೆ ಶಿಬಿರ ಮತ್ತು ದಸರಾ ಶಿಬಿರದ ಮಕ್ಕಳು ನಾಟಕವನ್ನು ಆಡಿದಾಗ ಊರಿನವರೆಲ್ಲ ಸೇರಿ ವೀಕ್ಷಿಸಿ ಸಂತೋಷಪಟ್ಟಿದ್ದಾರೆ. ಒಂದು ವರ್ಷ ವೈರಮುಡಿ ಜಾತ್ರೆ ಸಂದರ್ಭಲ್ಲಿ ಈ ಮೈದಾನದಲ್ಲಿ ಖಾದಿ ಗ್ರಾಮೋದ್ಯೋಗ ಪ್ರದರ್ಶನ ಏರ್ಪಡಿಸಲಾಗಿತ್ತು. ೧೯೯೦ರಲ್ಲಿ ಮೇಲುಕೋಟೆಯಲ್ಲಿ ಏರ್ಪಡಿಸಲಾಗಿದ್ದ ಅಖಿಲ ಭಾರತ ಸರ್ವೋದಯ ಸಮಾಜ ಸಮ್ಮೇಳನದ ಕಾರ್ಯಕ್ರಮಗಳನ್ನು ಈ ಮೈದಾನದಲ್ಲಿ ಆಯೋಜಿಸಲಾಗಿತ್ತು. ಆಗ ಆ ಸಮ್ಮೇಳನಕ್ಕೆ ದೇಶದಾದ್ಯಂತ ಸರ್ವೋದಯ ಚಿಂತಕರು ನಾಯಕರು ಬಂದಿದ್ದರು. ಅವರೆಲ್ಲರೂ ಈ ಮೈದಾನದಲ್ಲಿ ಕುಳಿತು ತಮ್ಮ ವಿಚಾರ ವಿನಿಮಯ ನಡೆಸಿದರು. ಅಲ್ಲದೇ ಸಮ್ಮೇಳನದ ಪ್ರತಿನಿಧಿಗಳ ಅಥಿತೇಯರಾಗಿದ್ದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಸಹ ಭಾಗವಹಿಸಿದ್ದರು. ಈ ಮೈದಾನಕ್ಕೆ ಸ್ವಲ್ಪ ದೂರದಲ್ಲಿರುವ ಅರಳಿಮರ ಬೇಸಿಗೆಯಲ್ಲಿ ಮೈದಾನದ ಬಹುದೊಡ್ಡ ಭಾಗಕ್ಕೆ ನೆರಳನ್ನು ಕೊಟ್ಟು ಮಕ್ಕಳ ಆಟಕ್ಕೆ ನೆರವಾಗುತ್ತದೆ. ಆ ಮರದ ಉಪಕಾರ ಸ್ಮರಣೆಯಲ್ಲಿ ಪ್ರತಿ ವರ್ಷ ಬೇಸಿಗೆಯಲ್ಲಿ "ದೊಡ್ಡ ಮರದಾ ನೆರಳಿನಲಿ" ಎಂಬ ಹೆಸರಿನಲ್ಲಿ ಮಕ್ಕಳ ಶಿಬಿರವನ್ನು ಸಹ ನಡೆಸಿಕೊಂಡು ಬರಲಾಗುತ್ತಿದೆ. ಮಳೆಗಾಲದಲ್ಲಿ ಮೈದಾನವೆಲ್ಲ ಹಚ್ಚ ಹಸಿರಾಗಿ ಕಂಗೊಳಿಸುತ್ತದೆ. ಮೇಲುಕೋಟೆಗೆ ಬರುವ ಯಾತ್ರಾರ್ಥಿಗಳು ಆಗಾಗ್ಗೆ ಮೈದಾನದ ಒಳಗೆ ಬಂದು

ಹಸಿರು ಹುಲ್ಲಿನ ಮೇಲೆ ಕುಳಿತು ತಾವು ತಂದ ಬುತ್ತಿಯನ್ನು ಬಿಚ್ಚಿ ಊಟ ಮಾಡಿ ಹೋಗಿದ್ದಾರೆ. ಹೀಗೆ ಮೈದಾನವು ಟ್ರಸ್ಟಿನ ತುಂಬ ಜನೋಪಯೋಗಿ ಸ್ಥಳವಾಗಿದೆ. ಈ ಮೈದಾನದಲ್ಲಿ ಆಡಿ ನಲಿದು ದೊಡ್ಡವರಾದ ಅನೇಕ ಮಕ್ಕಳು ಇಂದು ಸಮಾಜದ ಒಳ್ಳೆಯ ಸ್ಥಾನಗಳಲ್ಲಿದ್ದಾರೆ. ಅವರ ಜೀವನದಲ್ಲಿ ಈ ಮೈದಾನ ಮರೆಯಲಾಗದ ಸಂತೋಷದ ತಾಣವಾಗಿದೆ. ಇದೆಲ್ಲ ಐತಿಹಾಸಿಕ ಸಂಗತಿಗಳಿಗೆ ಕಳಸವಿಟ್ಟಂತೆ ಲೋಕ ನಾಯಕ ಜಯಪ್ರಕಾಶ ನಾರಾಯಣರು ಮೇಲುಕೋಟೆಗೆ ಬಂದಿದ್ದಾಗ ಅವರ ಸಾರ್ವಜನಿಕ ಭಾಷಣವನ್ನು ಈ ಮೈದಾನದಲ್ಲೇ ಏರ್ಪಡಿಸಲಾಗಿತ್ತು. ರಾಜ್ಯ ವಾರ್ತಾ ಇಲಾಖೆಯಿಂದ ಸಾಕ್ಷ್ಯ ಚಿತ್ರಗಳನ್ನು ತಂದು ಮೈದಾನದಲ್ಲಿ ಗ್ರಾಮಸ್ಥರಿಗೆ ಪ್ರದರ್ಶಿಸಲಾಗುತ್ತಿತ್ತು. ಹೀಗೆ ಜನಪದ ಸೇವಾ ಟ್ರಸ್ಟಿಗೆ ಹಾಗೂ ಗ್ರಾಮಕ್ಕೆ ಏಕ ಕಾಲಕ್ಕೆ ಉಪಯೋಗವಾಗುವ ಈ ಸ್ಥಳವನ್ನು ಜನಪದ ಸೇವಾ ಟ್ರಸ್ಟಿಗೆ ಸುಮಾರು ನಲ್ವತ್ತು ವರ್ಷಗಳ ಹಿಂದೆ ಮೈಸೂರಿನ ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಠವು ಖರೀದಿಗೆ ಕೊಟ್ಟಿದ್ದನ್ನು ಜನಪದ ಸೇವಾ ಟ್ರಸ್ಟ್ ಇಂದಿಗೂ ಕೃತಜ್ಞತಾ ಭಾವನೆಯಿಂದ ನೆನೆಯುತ್ತದೆ. ಅಲ್ಲದೇ ಆ ಸಮಯದಲ್ಲಿ ಶ್ರೀ ಮಠದ ಪೀಠಾಧಿಪತಿಗಳಾಗಿದ್ದ ಸ್ವಾಮೀಜಿಯವರನ್ನು ಸಹ ಕೃತಜ್ಞತಾ ಪೂರ್ವಕವಾಗಿ ನೆನೆಯುತ್ತದೆ. ಟ್ರಸ್ಟಿನ ಕಾರ್ಯಕ್ರಮಗಳಿಗೆ ಆಧಾರವಾಗಿರುವವರು ಅದರ ಕಾರ್ಯಕರ್ತರೇ. ಈಗ ಟ್ರಸ್ಟಿನಲ್ಲಿ ಎಲ್ಲ ವಿಭಾಗಗಳನ್ನು ಸೇರಿ ೨೪ ಜನ ಕಾರ್ಯಕರ್ತರಿದ್ದಾರೆ. ಇವರಲ್ಲಿ ಸೇವಾ ಹಿರಿತನದ ಮೇರೆಗೆ ಜಯಣ್ಣನವರು ಮೊದಲಿಗರಾಗುತ್ತಾರೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯವರಾದ ಟಿ.ಎಂ.ಜಯಣ್ಣನವರು ಕಳೆದ ಇಪ್ಪತ್ತೈದು ವರ್ಷಗಳಿಂದ ಟ್ರಸ್ಟಿನಲ್ಲಿ ಸೇವೆ ಸಲ್ಲಿಸುತ್ತ ಬಂದಿದ್ದಾರೆ. ಅವರು ಇಲ್ಲಿಗೆ ತಮ್ಮ ಹೆಂಡತಿ ಮತ್ತು ಒಬ್ಬ ಮಗಳೊಂದಿಗೆ ಬಂದಿದ್ದರು. ಇಲ್ಲಿಗ ಬಂದಾದ ನಂತರ ಅವರಿಗೆ ಒಬ್ಬ ಮಗನು ಹುಟ್ಟಿದನು. ಮಗಳು ಕುಸುಮಾ. ಟ್ರಸ್ಟಿನ ಜನಪದ ವಿದ್ಯಾಲಯದಲ್ಲಿ ಓದಿ ನಂತರ ತಾಂತ್ರಿಕ ವಿದ್ಯಾಭ್ಯಾಸ ಮುಗಿಸಿಕೊಂಡು ಈಗ ಬೆಂಗಳೂರಿನ ಒಂದು ದೊಡ್ಡ ಕಂಪನಿಯಲ್ಲಿ ಒಳ್ಳೆಯ ನೌಕರಿಯಲ್ಲಿದ್ದಾಳೆ. ಮಗ ಕಲ್ಲೇಶಿ ಈಗ ದ್ವಿತೀಯ ಪಿ.ಯು.ಸಿ ಓದುತ್ತಿದ್ದಾನೆ. ಜಯಣ್ಣನವರು ಟ್ರಸ್ಟಿನ ಪ್ರತಿಯೊಂದು ಕೆಲಸದಲ್ಲಿ ತಮ್ಮನ್ನು ತೊಡಿಗಿಸಿಕೊಳ್ಳುತ್ತಾರೆ. ತೋಟದಲ್ಲಿ ತರಕಾರ ಬೆಳೆಯುವುದು, ಹೊಸ ಜೀವನ ದಾರಿ ಕೇಂದ್ರದಲ್ಲಿ ತಯಾರಾಗುವ ಖಾದಿ ಹೆಗಲು ಚೀಲಗಳನ್ನು ಇಸ್ತ್ರಿ ಮಾಡಿ, ಸಿದ್ಧಗೊಳಿಸಿ ಬೇಡಿಕೆ ಬಂದ ಕಡೆಗೆ ರವಾನಿಸುವುದು ಇತ್ಯಾದಿ ಕೆಲಸವನ್ನು ಮಾಡುತ್ತಾರೆ. ಅಲ್ಲದೆ ಮೈಸೂರು, ಬೆಂಗಳೂರು ಮುಂತಾದ ಸ್ಥಳಗಳಿಗೆ ಹೋಗಿ ಟ್ರಸ್ಟಿನ ಕೆಲಸ ಮಾಡಿಕೊಂಡು ಬರುತ್ತಾರೆ. ಅವರಿಗೆ ಬೆಂಗಳೂರು, ಮಂಡ್ಯ, ಮೈಸೂರು ನಗರಗಳ ಪರಿಚಯ ಚೆನ್ನಾಗಿರುವುದರಿಂದ ಅಲ್ಲಿ ಆಗಬೇಕಾಗಿರುವ ಕೆಲಸವನ್ನು ಸುಲಲಿತವಾಗಿ ಮಾಡಿಕೊಂಡು ಬರುತ್ತಾರೆ. ಹಬ್ಬ ಹರಿದಿನಗಳಲ್ಲಿ ಜನಪದ ನಿಲಯದ ಮುಂಬಾಗಿಲಿಗೆ ತೋರಣ ಕಟ್ಟುತ್ತಾರೆ. ಟ್ರಸ್ಟಿನ ಆಶ್ರಯದಲ್ಲಿರುವ ಮಕ್ಕಳಿಗೆ ಆರೋಗ್ಯ ತಪ್ಪಿದಾಗ ಔಷಧೋಪಚಾರಕ್ಕಾಗಿ ಓಡಾಡುವವರು ಅವರೇ. ಈಗ ಅವರಿಗೆ ಅರವತ್ತು ವರ್ಷ. ಆದರೂ ಆರೋಗ್ಯದಿಂದಿದ್ದು ಟ್ರಸ್ಟಿನ ಕೆಲಸಗಳನ್ನು ಲವಲವಿಕೆಯಿಂದಲೂ ಉತ್ಸಾಹದಿಂದಲೂ ಮಾಡುತ್ತಾರೆ.

(ಮುಂದುವರೆಯುವುದು.....)

ಸರ್ವೋದಯ ಆಂದೋಲನದ ಮುನ್ನಡೆ

ಸರ್ವೋದಯ ಆಂದೋಲನದ ಶಿಖರ ಸಂಸ್ಥೆಯಾಗಿರುವ ಸರ್ವ ಸೇವಾ ಸಂಘ (ಅಖಿಲ ಭಾರತ ಸರ್ವೋದಯ ಮಂಡಲ)ದ ಅರ್ಧವಾರ್ಷಿಕ ಅಧಿವೇಶನವು ಸೆಪ್ಟಂಬರ್ ೩೦ ರಂದು ಮಂಡ್ಯ ಜಿಲ್ಲೆ ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ನಡೆಯಲಿದೆ. ಈ ಅಧಿವೇಶನದಲ್ಲಿ ಭಾರತದಲ್ಲಿಯ ಎಲ್ಲ ರಾಜ್ಯಗಳ ಸುಮಾರು ೪೦೦ ಸಕ್ರಿಯ ಸರ್ವೋದಯ ಕಾರ್ಯಕರ್ತರು ಭಾಗವಹಿಸುವರು. ೨೭,೨೮ ರಂದು ಟ್ರಸ್ಟಿ ಮಂಡಲಿ ಸಭೆ ಹಾಗೂ ಕಾರ್ಯಕಾರಿ ಮಂಡಲಿ ಸಭೆ ನಡೆಯುವುದು. ಈ ಎಲ್ಲ ಕಾರ್ಯಕ್ರಮಗಳ ಅಧ್ಯಕ್ಷತೆಯನ್ನು ಸರ್ವ ಸೇವಾ ಸಂಘದ ಅಧ್ಯಕ್ಷರಾದ ಸುಗುಣ್ ಭರಂಟ್ ವಹಿಸುವರು. ಅಧಿವೇಶನದಲ್ಲಿ ಸರ್ವೋದಯ ಆಂದೋಲನದ ಹಿರಿಯ ಕಾರ್ಯಕರ್ತರು ಭಾಗವಹಿಸಿ ಮಾರ್ಗದರ್ಶನ ನೀಡುವರು. ದೇಶದ ಪ್ರಚಲಿತ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯುವುದು. ನಂತರ ಕಾರ್ಯಕ್ರಮದ ರೂಪುರೇಶೆ ತಯಾರಿಸಲಾಗುವುದು. ಅಧಿವೇಶನವನ್ನು ಕರ್ನಾಟಕ ಸರ್ವೋದಯ ಮಂಡಲಿ ಏರ್ಪಡಿಸಿದೆ. ಊಟ ಮತ್ತು ವಸತಿ ವ್ಯವಸ್ಥೆಯನ್ನು ಶ್ರೀ ಆದಿಚುಂಚನಗಿರಿ ಮಠವು ಮಾಡಿ ಸಹಕರಿಸಿದೆ. ದಿನಾಂಕ ೩೦ರಂದು ಬೆಳಿಗ್ಗೆ ೧೦-೩೦ಕ್ಕೆ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡುವರು. ಅಧಿವೇಶನದ ಯಶಸ್ಸಿಗೆ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಮತ್ತು ಗಾಂಧೀ ಶಾಂತಿ ಪ್ರತಿಷ್ಠಾನ ತಮ್ಮ ಸಹಕಾರ ಕೊಟ್ಟಿವೆ.

ಅಗಸ್ಟ್ ೯ 'ಕ್ವಿಟ್ ಇಂಡಿಯಾ' ದಿನ. ಆ ದಿನದ ಐತಿಹಾಸಿಕ ಘಟನೆಯ ಸ್ಮರಣೆಯಲ್ಲಿ ಮದ್ದೂರು ಬಳಿಯ ಶಿವಪುರ ಧ್ವಜ ಸತ್ಯಾಗ್ರಹ ಸೌಧದಲ್ಲಿ ಯುವಕರಿಗೊಂದು ಸರ್ವೋದಯ ಸಂದೇಶ ಎಂಬ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಯುವಕ ಯುವತಿಯರಾದಿಯಾಗಿ ಸುಮಾರು ೩೦೦ ಜನರು ಭಾಗವಹಿಸಿದ್ದರು. ಅನೇಕ ಹಿರಿಯರು ಈ ಶಿಬಿರದಲ್ಲಿ ಭಾಗವಹಿಸಿ ಶಿಬಿರಾರ್ಥಿಗಳಿಗೆ ಸರ್ವೋದಯ ಸಿದ್ಧಾಂತದ ವಿವಿಧ ಆಯಾಮಗಳನ್ನು ಪರಿಚಯಿಸಿಕೊಟ್ಟರು.

ಬೆಂಗಳೂರು ಬಳಿಯ ಪರಪ್ಪನ ಅಗ್ರಹಾರದ ಕಾರಾಗೃಹದಲ್ಲಿಯ ಖೈದಿಗಳಿಗೆ ಗಾಂಧೀ ವಿಚಾರವನ್ನು ತಿಳಿಸಲಾಯಿತು. ಆರು ವರ್ಷ ಶಿಕ್ಷೆ ಅನುಭವಿಸಿ ಈಗ ಬಿಡುಗಡೆ ಹೊಂದಿರುವ ಗೋರೆ ಎಂಬ ಖೈದಿಯು ತನ್ನ ಜೀವನದ ಪರಿವರ್ತನೆಗೆ ಗಾಂಧೀ ವಿಚಾರ ಹೇಗೆ ಪ್ರಭಾವ ಬೀರಿತು ಎಂಬುದನ್ನು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ವೋದಯ ಮಂಡಲಿಯ ಕಾರ್ಯದರ್ಶಿ ಶ್ರೀ ಎಲ್.ನರಸಿಂಹಯ್ಯ, ಯುವ ವಿಭಾಗ ಸಂಚಾಲಕ ಡಾ.ಎಚ್.ಎಸ್.ಸುರೇಶ್ ಮತ್ತು ಮುಂಬೈ ಮಹಾನಗರ ಸರ್ವೋದಯ ಮಂಡಲಿಯ ಸಂಯೋಜಕರಾದ ಸೋಮಯಾಜಿ ಭಾಗವಹಿಸಿದ್ದರು.

* * *

ಖಾದಿ ವಿಚಾರ

ಖಾದಿ ಧರಿಸಿರಿ. ಗಿರಣಿ ಬಟ್ಟೆಗಿಂತ ಇದಕ್ಕೆ ಬೆಲೆ ಹೆಚ್ಚು ಎಂಬ ಭಾವನೆ ಇದೆ. ಆದರೆ ಖಾದಿ ಬಟ್ಟೆಗೆ ಕೊಡುವ ಹೆಚ್ಚು ಹಣವನ್ನು ಬಡವರಿಗೆ ಕೊಡುವ ಗುಪ್ತದಾನವೆಂದು ತಿಳಿಯಿರಿ ಎಂಬುದಾಗಿ ವಿನೋಬಾ ಹೇಳಿದ್ದಾರೆ.

ಖಾದಿಯ ಒಂದು ಯುಗ ಮುಗಿದಿದೆ. ಬಡವರಿಗಾಗಿ ಒಂದು ಉಪಯುಕ್ತ ಕೆಲಸವನ್ನು ಮಾಡಿಕೊಂಡು ಬಂದಿದೆ. ಬಡವರು ಹೇಗೆ ಸ್ವಾವಲಂಬಿಯಾಗಬಲ್ಲರು, ಖಾದಿ ಹೇಗೆ ಅಹಿಂಸೆಯ ಸಾಕ್ಷಾತ್ ಸ್ವರೂಪವಾಗಬಲ್ಲದು ಎಂಬುದನ್ನು ಈಗ ಮಾಡಿ ತೋರಿಸಬೇಕಿದೆ. ಅದೇ ನಿಜವಾದ ಕೆಲಸ. ಖಾದಿಗಾಗಿ ನಮ್ಮ ಸಮರ್ಪಣೆಯನ್ನು ತೋರಿಸಬೇಕಾಗಿದೆ.

- ಗಾಂಧೀ, ಜುಲೈ ೨೦, ೧೯೪೭

ಇತ್ತೀಚಿಗೆ ಖಾದಿ ಬಗ್ಗೆ ಜನತೆಯಲ್ಲಿ ಆಸಕ್ತಿಯೆನೋ ಮೂಡುತ್ತಿದೆ. ಆದರೆ ಖಾದಿ ಉದ್ಯಮದಲ್ಲಿ ತೊಡಗಿರುವ ಸಹಸ್ರಾರು ಸಂಖ್ಯೆಯ ನೂಲುಗಾರರ, ನೇಕಾರರ ಮತ್ತು ಖಾದಿ ಸಂಸ್ಥೆಗಳ ಸಮಸ್ಯೆಗಳು ಪರಿಹಾರಗೊಂಡಿಲ್ಲ. ಕೇಂದ್ರಿತ ಹಾಗೂ ದೊಡ್ಡ ಕೈಗಾರಿಕೆಗಳಿಗೆ ಉತ್ತೇಜನ ಕೊಡುವ ಕಡೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಗಮನವಿದೆಯೇ ಹೊರತು, ಖಾದಿ ಕಡೆಗೆ ಇಲ್ಲ. ಆದ್ದರಿಂದ ಈಗ 'ಖಾದಿ ಉಳಿಸಿ' ಎಂಬ ಚಳುವಳಿಯನ್ನು ಹಮ್ಮಿಕೊಳ್ಳಲಾಗಿದೆ. ಆ ಚಳುವಳಿಯ ಉದ್ದೇಶ ಖಾದಿಯನ್ನು ಒಂದು ಸ್ವತಂತ್ರ ಆತ್ಮಗೌರವಯುತ ಹಾಗೂ ಗಾಂಧೀ ವಿಚಾರಕ್ಕೆ ಅನುಗುಣವಾದ ಖಾದಿಯನ್ನು ಹೊರಹೊಮ್ಮಿಸುವುದೇ ಆಗಿದೆ. ದುರ್ದೈವದ ಸಂಗತಿಯೇನೆಂದರೆ ಖಾದಿಯ ಉತ್ತೇಜನಕ್ಕಾಗಿ ಸಂಸತ್ತಿನ ಕಾನೂನು ಪ್ರಕಾರ ಸ್ಥಾಪಿತಗೊಂಡಿರುವ ಖಾದಿ ಗ್ರಾಮೋದ್ಯೋಗ ಆಯೋಗವೇ ಶಾಪವಾಗಿ ಪರಿಣಮಿಸಿದೆ. ಖಾದಿ ಆಯೋಗದಲ್ಲಿ ಮತ್ತು ರಾಜ್ಯ ಖಾದಿ ಮಂಡಲಿಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಆದ್ದರಿಂದ ದೇಶದಲ್ಲಿಯ ಖಾದಿ ಸಂಸ್ಥೆಗಳು ಸರ್ಕಾರ ಕೊಡುತ್ತಿರುವ ರಿಬೇಟ್ (ರಿಯಾಯಿತಿ) ಬೇಡವೆಂದು ತೀರ್ಮಾನಕ್ಕೆ ಬಂದಿವೆ. ಅಲ್ಲದೆ ಖಾದಿ ಸಂಸ್ಥೆಗಳನ್ನು ಸಾಲದಿಂದ ಮುಕ್ತಮಾಡಬೇಕೆಂದು ಕೇಳಿಕೊಳ್ಳುತ್ತಿವೆ. ಈಗ ಜಾರಿಯಲ್ಲಿರುವ ಮಹಾತ್ಮಾ ಗಾಂಧೀ ರಾಷ್ಟ್ರೀಯ ಉದ್ಯೋಗ ಭರವಸೆ ಯೋಜನೆಯಲ್ಲಿ ನೂಲುಗಾರಿಕೆ ಮತ್ತು ನೇಕಾರಿಕೆಯನ್ನು ಸೇರಿಸಬೇಕೆಂದು ಒತ್ತಾಯ ಮಾಡಲಾಗುತ್ತಿದೆ. ರಾಷ್ಟ್ರ ಧ್ವಜಕ್ಕೆ ಖಾದಿಯನ್ನೇ ಕಡ್ಡಾಯ ಗೊಳಿಸಬೇಕು ಎಂದು ಒತ್ತಾಯಿಸಲಾಗುತ್ತಿದೆ. ಪಂಚಾಯತಿಗಳಿಂದ ಸಂಸತ್‌ವರೆಗಿನ ಎಲ್ಲಾ ಜನತಾ ಪ್ರತಿನಿಧಿಗಳು ಮತ್ತು ಸರ್ಕಾರಿ ನೌಕರರು ವಾರದಲ್ಲಿ ಒಂದು ದಿನವಾದರೂ ಖಾದಿಯನ್ನು ಧರಿಸಬೇಕು ಎಂದು ವಿನಂತಿಸಿಕೊಳ್ಳಲಾಗುತ್ತಿದೆ. ಖಾದಿ ಆಯೋಗದಿಂದ ಖಾದಿಯನ್ನು ಪ್ರತ್ಯೇಕಿಸಬೇಕಲ್ಲದೆ ಖಾದಿ ಬಟ್ಟೆ ಎಂದು ಪ್ರಮಾಣಿಕರಿಸುವುದಕ್ಕಾಗಿರುವ ಅಧಿಕಾರವನ್ನು ಸ್ವತಂತ್ರಗೊಳಿಸಬೇಕು. ಏಷ್ಯಾ ಅಭಿವೃದ್ಧಿ ಬ್ಯಾಂಕ್‌ನಿಂದ ಖಾದಿ ಉದ್ಯಮಕ್ಕೆ ಧನಸಹಾಯ ಕೊಡಿಸಬೇಕೆಂಬ ಕೇಂದ್ರ ಸರ್ಕಾರದ ನೀತಿಯನ್ನು ಖಾದಿ ಸಂಸ್ಥೆಗಳು ನಿರಾಕರಿಸಲು ತೀರ್ಮಾನಿಸಿವೆ.

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಬಿ.ಆರ್.ನಂದಕುಮಾರ್
ಶ್ರೀ ಬಿ.ವಿ.ಸುರೇಶ್
ಶ್ರೀ ಎಂ.ಕೆ.ಅನಂತಸ್ವಾಮಿ – ಬೆಂಗಳೂರು
ಶ್ರೀ ಎನ್.ಎಸ್.ಸುಬ್ಬರಾವ್ – ಶೃಂಗೇರಿ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಡಾ॥ ಡಿ.ಬಿ.ರಾಮಚಂದ್ರಾಚಾರ್; ಶ್ರೀ ಕೆ.ಮೋಹನದೇವ ಆಳ್ವ
ಶ್ರೀಮತಿ ವಿದ್ಯಾಕೊಟಬಾಗಿ; ಶ್ರೀ ಎನ್.ಕೃಷ್ಣಪ್ಪ – ಬೆಂಗಳೂರು
ಶ್ರೀ ಟಿ.ಜಿ.ಸತ್ಯನಾರಾಯಣ – ತಗಡೂರು
ಡಾ॥ ಸೀತಾರಾಂ – ಸರಗೂರು
ಶ್ರೀ ಕೆ.ನಾಗಾನಂದ – ಮಂಡ್ಯ

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ. –ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ–ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote,
Dist- Mandya -- 571431 Phone: 08236-316344 e-mail : janapada@yahoo.com web : janapada.net
Printed at Sanketi, Mudrana, Melkote.